# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

KENDHOOLI *Kannada Weekly*

kendhooli.com/e-paper/


**ಪ್ರಾಚೀನ ಕಲಾಕೃತಿಗಳು- ಕೊಳ್ಳೆಯೇಕೆ ನಿಂತಿಲ್ಲ?**



ಉಮಾಪತಿ ಅವರ ಅಂಕಣದಲ್ಲಿ...


ಸಂಪುಟ - 02 | ಸಂಚಿಕೆ - 72 | ಪುಟ - 16 | ರೂ. 16/- | ಮಾರ್ಚ್ 31 ರಿಂದ ಏಪ್ರಿಲ್ 06, 2022 KARKAN/2018/76310




# ಬೆಲೆ ಏರಿಕೆಯಾದರೂ ಈ ಮೌನ ಯಾಕೆ?

## ಡಿಕೆಶಿ-ಸಿದ್ದು ಆಟ: ಸಮೀಕ್ಷೆ ಕಲಿಸೀತೆ ಪಾಠ?

ಎಂ.ಕೆ. ಭಾಸ್ಕರ ರಾವ್ ಅವರ ಅಂಕಣದಲ್ಲಿ...

## ಕ್ರಿಪ್ಟೋ ಕರೆನ್ಸಿ ಎನ್ನುವ ಆನ್‌ಲೈನ್ ಡಿಜಿಟಲ್ ಮಾಯಾವಿ ಮನಿ ಮಾಫಿಯಾ

## ಕೈ ಪಾಳೆಯಕ್ಕೆ ಬಿಸಿ ತುಪ್ಪವಾದ ಧಾರ್ಮಿಕ ವಿವಾದಗಳು ಮತ್ತು ಹೇಳಿಕೆಗಳು

# ಧರ್ಮ ಎಂಬ ರಾಜಕಾರಣಿಗಳ ಲಾಭದಾಯಕ ದೃಷ್ಟಿ

**ಮನ ಮಿಡಿತ**



ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ

ರಾಜಕೀಯದಲ್ಲಿ ಧಾರ್ಮಿಕ ಪ್ರಭಾವ ಇರಬಾರದು ಎನ್ನುವುದನ್ನು ಬಹುತೇಕರು ಬಯಸುತ್ತಾರೆ ಆದರೆ ವಿಚಿತ್ರವೆಂದರೆ ಇಂದು ರಾಜಕಾರಣದಲ್ಲಿ ಧರ್ಮವೇ ಮೂಲ ಮತ ಭೇಟೆಯ ಅಸ್ತ್ರವಾಗಿದೆ. ಧರ್ಮವನ್ನು ಇಟ್ಟುಕೊಂಡು ಜನತೆಗೆ ಒಂದು ರೀತಿ ಇಪ್ನಾಟಿಜಮ್ ಮಾಡುವ ಮೂಲಕ ಮತಗಳನ್ನು ಸೆಳೆಯುವ ಸುಲಭ ದಾರಿಯಾಗಿಬಿಟ್ಟಿದೆ.

ಕೇವಲ ಧರ್ಮ ಮಾತ್ರವಲ್ಲ ಜಾತಿಯೂ ಕೂಡ, ಇವೆರಡು ಇಲ್ಲದಿದ್ದರೆ ರಾಜಕಾರಣವೆ ಇಲ್ಲ ಎನ್ನುವಷ್ಟರ ಮಟ್ಟಿಗೆ ಈಗ ರಾಜಕಾರಣಿಗಳು ನಿರ್ಧಾರಕ್ಕೆ ಬಂದಿದ್ದಾರೆ. ಏಕೆಂದರೆ ಯಾವುದೇ ಒಂದು ವಿಷಯವನ್ನಿಟ್ಟುಕೊಂಡೇ ರಾಜಕಾರಣ ಮಾಡುವ ಪಕ್ಷಗಳು ಬೇರೆ ವಿವಾದಗಳಗಿಂತ ಧರ್ಮ ಮತ್ತು ಜಾತಿ ಬಹುಬೇಗ ಪ್ರಭಾವ ಬೀರುತ್ತವೆ. ವಿವಾದಗಳಾಗಿ ಮಾರ್ಪಟ್ಟು ಜನರು ಅತ್ತ ಕಿವಿಕೊಡುತ್ತಾರೆ. ಹೀಗಾಗಿ ಬಹುಬೇಗ ಪ್ರಭಾವ ಬೀರುವ ಈ ಜಾತಿ ಮತ್ತು ಧರ್ಮ ಇಟ್ಟುಕೊಂಡು ಮಾಡುವ ರಾಜಕಾರಣ ಮತಗಳು ಬಹುಬೇಗ ಒಂದು ಪಕ್ಷಕ್ಕೆ ಸೀಮಿತವಾಗಿಬಿಡುತ್ತವೆ ಎನ್ನುವ ನಂಬಿಕೆ ಆಧಾರದ ಮೇಲೆ ಈ ವಿವಾದಗಳಿಗೆ ಮುಂದಾಗುವ ಪಕ್ಷಗಳು ನಿಜವಾಗಿಯೂ ಈ ದೇಶದ ಒಡೆದಾಳುವ ನೀತಿಯೇ ಹೊರೆತು ಬೇರೆ ಏನು ಅಲ್ಲ ಎನ್ನುವುದು ಸ್ಪಷ್ಟ. ಈಗ ಹಿಜಾಬ್, ಟಿಪ್ಪು ವಿವಾದ, ಹೀಗೆ ಒಂದೊಂದೆ ವಿವಾದಗಳನ್ನು ಸೃಷ್ಟಿ ಮಾಡುವ ಮೂಲಕ ಎರಡು ಧರ್ಮಿಯರ ಮನಸ್ಸಿನಲ್ಲಿ ಹುಳಿ ಹಿಂಡುವ ಮೂಲಕ ಧಾರ್ಮಿಕ ಭಾವನೆಗಳನ್ನು ಬಿತ್ತುತ್ತಾರೆ. ಭಾವನೆಗಳು ಕೆರಳಿಸಿ ಒಂದು ಮತಕ್ಕೆ ಸೀಮಿತ ಮಾಡಲಾಗುತ್ತಿದೆ. ಜಾತ್ಯಾತೀತ ,ಧರ್ಮಾತೀತ ದೇಶದಲ್ಲಿ ನಡೆಯುತ್ತಿರುವ ಇಂತಹ ಕುತಂತ್ರಗಳು ಈಗ ಇತಿಹಾಸದತ್ತವೂ ಹೊರಳುತ್ತಿವೆ.

ಒಂದು ರಾಜಕೀಯ ಪಕ್ಷಕ್ಕೆ ಹಿನ್ನೆಡೆಯಾಗುತ್ತಿದ್ದಂತೆ ಧಾರ್ಮಿಕ ಅಥವಾ ಜಾತಿ ಆಧಾರದ ವಿಷಯಗಳನ್ನಿಟ್ಟುಕೊಂಡು ಮುನ್ನಡೆಯುವ ತಂತ್ರಗಾರಿಕೆ ಇದೆಯಲ್ಲ ಇದು ಇಂದು ಯುವಕರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತಿದೆ. "ದಯಯೇ ಧರ್ಮದಮೂಲವಯ್ಯ" ಎನ್ನುವುದನ್ನು 12ನೇ ಶತಮಾನದಲ್ಲಿಯೇ ಬಸವಣ್ಣನವರು ಹೇಳಿದ್ದರು . ಧರ್ಮ ಎನ್ನುವುದು ಒಂದು ದಯೆಯೇ ಹೊರೆತು ಎಲ್ಲ ಧರ್ಮವೂ ಒಂದೇ ಆದರೆ ವಿವಿಧತೆಯಲ್ಲಿ ಏಕತೆ ಸಾರುವಂತ ಈ ಧರ್ಮಗಳು ಕೇವಲ ಆಚರಣೆಗಷ್ಟೆ ಆದರೆ ನಾವೆಲ್ಲರೂ ಒಂದೇ ಎಂದು ಬಾಳಬೇಕು ಆಗ ಸಮಾನತೆ ಈ ಸಮಾಜದಲ್ಲಿ ಸೃಷ್ಟಿಯಾಗುತ್ತದೆ, ಆದರೆ ಸಮಾನತೆ ಸೃಷ್ಟಿಯಾದರೆ ರಾಜಕಾರಣಿಗಳಿಗೆ ರಾಜಕೀಯ ಎನ್ನುವ ದಾಳಕ್ಕೆ ಅಡ್ಡಿಯಾಗಿಬಿಡುತ್ತದೆ ಒಂದು ಪಕ್ಷ ಆ ದಾಳದಿಂದಲೇ ಇಂದು ಇಡೀ ದೇಶವನ್ನು ವಿಭಜಿಸುವಷ್ಟರ ಮಟ್ಟಿಗೆ ರಾಜಕಾರಣ ನಡೆಯುತ್ತಿದೆ ಹೀಗಿರುವಾಗ ಈಗ ಈ ಹಿಜಾಬ್ ಹೆಸರಿನಲ್ಲಿ ನಡೆಯುತ್ತಿರುವ ರಾಜಕಾರಣ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಮುಸ್ಲಿಂರಿಗೆ ವ್ಯಾಪಾರಕ್ಕೆ ಕಡಿವಾಣ ಹಾಕುತ್ತಿರುವುದು ಯಾವ ನ್ಯಾಯ ಈ ದೇಶದಲ್ಲಿ ಜನಸಿದ ಅವರೂ ನಮ್ಮವರೇ ಅಲ್ಲವೇ ? ನಾವು ನಮ್ಮವರು ಎಂದು ನಡೆದರೆ ದಾರಿ ಸುಗಮವಾಗುತ್ತದೆ ಆದರೆ ಆ ದಾರಿ ಸುಗಮವಾದರೆ ಮತಗಳಿಕೆಯಲ್ಲಿ ಒಂದು ಪಕ್ಷಕ್ಕೆ ಹಿನ್ನೆಡೆಯಾಗಿಬಿಟ್ಟರೆ ಇಂತ ಪ್ರಶ್ನೆಗಳೇ ಇಂದು ಧಾರ್ಮಿಕ ಕಂದಕಕ್ಕೆ ಕಾರಣವಾಗಿವೆ.

ಈಗ ಧಾರ್ಮಿಕ ನಂಬಿಕೆ, ವಿಚಾರ? ಆಚಾರಗಳಲ್ಲಿ ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಧಾರ್ಮಿಕ ಸಂಗತಿಗಳನ್ನು ತರ್ಕಬದ್ಧವಾಗಿ ಚರ್ಚಿಸಬಹುದಾಗಿದೆ. ಆದ್ದರಿಂದಲೇ ಇಂದು 'ಜಾತ್ಯತೀತ' ಎಂಬ ತತ್ವವು ಜನಪ್ರಿಯವಾಗಿದೆ. ನಮ್ಮ ಸಂವಿಧಾನ ರಚನಾಕಾರರು ಪಾಶ್ಚಾತ್ಯ ಮಾದರಿಗಳಿಂದಲೇ ವಿವಿಧ ಪರಿಕಲ್ಪನೆಗಳನ್ನು ಆಯ್ದುಕೊಂಡರು. ಬ್ರಿಟನ್ನಿನ ಪಾರ್ಲಿಮೆಂಟರಿ ಪದ್ಧತಿ, ಐರ್ಲೆಂಡ್‌ನ ನಿರ್ದೇಶಕ ತತ್ವಗಳು, ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಮೂಲಭೂತ ಹಕ್ಕುಗಳು ಮತ್ತು ಸ್ವತಂತ್ರ ನ್ಯಾಯಪದ್ಧತಿ... ನಾವು ಎರವಲು ಪಡೆದುಕೊಂಡ ಸಿದ್ಧಾಂತಗಳಾಗಿವೆ. ಸಮಾನತೆ, ಗಣರಾಜ್ಯ, ಸಮಾಜಿಕ ನ್ಯಾಯ, ಜಾತ್ಯತೀತ ತತ್ವಗಳು ನಮ್ಮ ಸಂವಿಧಾನದ ಜೀವಾಳಗಳು. ಅವು ಅಮೆರಿಕ ಮತ್ತು ಫ್ರೆಂಚ್ ಕ್ರಾಂತಿಗಳಿಗೆ ಆದರ್ಶಗಳಾಗಿದ್ದವು.ನಮ್ಮ ದೇಶದಲ್ಲಿ ಆದರ್ಶಗಳಿಗೂ ಮತ್ತು ನಿತ್ಯ ಜೀವನದ ವಾಸ್ತವಿಕ ಆಗುಹೋಗುಗಳಿಗೂ ಬಹಳ ವ್ಯತ್ಯಾಸವಿದೆ. ಅವುಗಳ ನಡುವಿನ ಅಂತರಗಳೇ ಅವಾಂತರಗಳಾಗುತ್ತವೆ. ಹಿಂದೆಂದೂ ಸಮಾನತೆಯನ್ನು ಕಾಣದ, ಯಜಮಾನಿಕೆ ಮನೋಭಾವದ, ಧಾರ್ಮಿಕ ಗೊಂದಲಗಳ ಬೀಡಾದ ಭಾರತದಲ್ಲಿ ಪಾಶ್ಚಾತ್ಯ ಮಾದರಿಯ ಸಂವಿಧಾನದ ಪ್ರಯೋಗವು ಪಾಳು ಭೂಮಿಯಲ್ಲಿ ಹುಲುಸಾಗಿ ಬೆಳೆಯುವ ಬೀಜಗಳನ್ನು ಬಿತ್ತಿದಂತಾಗಿದೆ!

ಕಾಲಕಾಲಕ್ಕೆ ನಡೆಯುವ ಚುನಾವಣೆಗಳು ಪ್ರಜಾರಾಜ್ಯದ ಆಧಾರಸ್ತಂಭಗಳಾಗಿವೆ. ಆದರೆ ನಮ್ಮ ಚುನಾವಣೆಗಳು ಹಣಬಲ ಮತ್ತು ತೋಳ್ಬಲಗಳ ಪ್ರಭಾವದಿಂದ, ಧರ್ಮ ಮತ್ತು ಜಾತಿಗಳ ಬಳಕೆಯಿಂದ, ಕಳಂಕಿತರಿಗೆ ನೀಡುವ ಮನ್ನಣೆಯಿಂದ ವಿಚಿತ್ರ ಸರ್ಕಸ್‌ಗಳಂತೆ ಕಾಣುತ್ತಿವೆ.

ಇಂತಹ ಸನ್ನಿವೇಶದಲ್ಲೇ ಈಗ ಮುಂದಿನ ವರ್ಷ ಚುನಾವಣೆ ಬರುತ್ತಿದೆ. ಈ ಚುನಾವಣೆಗೆ ಈಗಿನಿಂದಲೇ ಸಿದ್ದತೆ ಮಾಡಿಕೊಳ್ಳಬೇಕು .ಹಾಗಾಗಿಯೇ ಈಗ ಜಾತಿ,ಧರ್ಮದ ದುರ್ಬಳಿಕೆಯಾಗುತ್ತಿದೆ. ಈ ದುರ್ಬಳಿಕೆ ಈಗ ಒಂದು ಸಮಾಜದ ವ್ಯಾಪಾರ ವರ್ಗದ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಕನಿಷ್ಠ ಪ್ರಜ್ಞೆಯೂ ಇಲ್ಲದೆ ನಡೆದುಕೊಳ್ಳುತ್ತಿರುವ ಈ ರಾಜಕಾರಣಿಗಳಿಗೆ ಏನೆನ್ನಬೇಕು ಹೇಳಿ?

ಬದುಕಲು ಬಲ್ಲ ಬುದ್ಧಿವಂತರು ಕೂಡ ಆಡಳಿತಗಾರರ ಜೊತೆ ಸೇರಿಕೊಂಡು ಜನಸಾಮಾನ್ಯರ ದಿಕ್ಕುತಪ್ಪಿಸುತ್ತಿದ್ದಾರೆ.ಧರ್ಮನಿರಪೇಕ್ಷತೆ ಹಾಗೂ ಜಾತ್ಯತೀತ ರೀತಿಯ ಪದಗಳಿಗೆ ಕಿವುಡಾಗಿರುವ ಹಾಗೂ ಮಾತಿಗೊಮ್ಮೆ ದೇಶದ್ರೋಹ? ಧರ್ಮದ್ರೋಹದ ಕೆಲಸವನ್ನೇ ಮಾಡುತ್ತಿದ್ದಾರೆ.

ಅಲ್ಪಸಂಖ್ಯಾತರ ಹಿತಾಸಕ್ತಿಯ ಬಗ್ಗೆ ಮಾತನಾಡುವ ರಾಜಕಾರಣಿಗಳಿಗೆ ಬಡ ಮುಸ್ಲಿಂ ವ್ಯಾಪಾರಿಗಳ ಬಗ್ಗೆ ನಿಜವಾದ ಸಹಾನುಭೂತಿ ಇದ್ದಲ್ಲಿ, ಶಿವಮೊಗ್ಗದ ಮಾರಿಗುಡಿ ಜಾತ್ರೆಯಲ್ಲಿ ಮುಸ್ಲಿಮರ ಪರವಾಗಿ ಸತ್ಯಾಗ್ರಹ ಮಾಡಬೇಕಾಗಿತ್ತು. ಭಾರತ ದಲ್ಲಿರುವ ಮುಸಲ್ಮಾನರು ಕೂಡ ಭಾರತೀಯರೇ, ಅವರಿಗೆ ಈ ದೇಶಕ್ಕೆ ಸಂಬಂಧಿಸಿದಂತೆ ಹಿಂದೂಗಳಷ್ಟೇ ಹಕ್ಕುಬಾಧ್ಯತೆಗಳಿವೆ ಎನ್ನುವುದನ್ನು ಒಪ್ಪದಿರುವಷ್ಟರ ಮಟ್ಟಿಗೆ ನಮ್ಮಲ್ಲಿ ಅನೇಕರ 'ಧರ್ಮಪ್ರಜ್ಞೆ' ಜಡವಾಗಿದೆ. ಧರ್ಮದ ಬಗ್ಗೆ ಮಾತನಾಡುವ ರಾಜಕಾರಣಿಗಳಿಗೆ ಧರ್ಮದ ಅರ್ಥಸಾಧ್ಯತೆಗಳೇ ತಿಳಿದಂತಿಲ್ಲ. ಅವರ ಪಾಲಿಗೆ ಧರ್ಮವೆಂದರೆ ಹಿಂದೂ ಧರ್ಮ ಮಾತ್ರ. ಆದರೆ, ನಮ್ಮ ಪೂರ್ವಸೂರಿಗಳು ಧರ್ಮಕ್ಕೆ ಹಚ್ಚಿರುವ ಅರ್ಥಗಳು ಒಂದೆರಡಲ್ಲ. ದಾನ, ಔದಾರ್ಯ, ಹೃದಯವೈಶಾಲ್ಯ, ದಾನಶೀಲತೆ, ನ್ಯಾಯ, ನಿಷ್ಠೆ, ಶ್ರದ್ಧೆ, ದರ್ಶನ, ದಯೆ, ಕರುಣೆಯಂಥ ಹಲವು ಗುಣ ಹಾಗೂ ಮೌಲ್ಯಗಳನ್ನು 'ಧರ್ಮ' ಧ್ವನಿಸುತ್ತದೆ. ಈ ಧರ್ಮಕ್ಕೆ ಉತ್ಪಾತ ಮತ್ತು ವಿಷ ಎನ್ನುವ ಅರ್ಥಗಳೂ ಇವೆ. ಸದ್ಯಕ್ಕೆ ರಾಜಕಾರಣಿಗಳು ಪ್ರತಿನಿಧಿಸುತ್ತಿರುವುದು ಕೊನೆಯ ಎರಡು ಸಂಗತಿಗಳನ್ನಷ್ಟೇ. ತಮಗೂ ಒಂದು ಧರ್ಮವಿದೆ ಎನ್ನುವುದೇ ರಾಜಕಾರಣಿಗಳಿಗೆ ತಿಳಿದಂತಿಲ್ಲ. ಅದು ಹಿಂದೂ, ಮುಸ್ಲಿಂ ಅಥವಾ ಕ್ರೈಸ್ತ ಧರ್ಮವಲ್ಲ. ಪ್ರಜೆಗಳನ್ನೆಲ್ಲ ಅಂತಃಕರಣದಿಂದ ನೋಡುವ 'ರಾಜಕಾರಣ ಧರ್ಮ'ವದು.ಆಪತ್ತಿನಲ್ಲಿ ಇರುವವರ ನೆರವಿಗೆ ಒದಗುವುದೇ ಧರ್ಮ, ತಮ್ಮ ಧರ್ಮಾಚರಣೆಯಲ್ಲಿ ದಯೆಯ ಲವಲೇಶವಾದರೂ ಇದೆಯೇ ಎನ್ನುವುದನ್ನು ವಿಶ್ಲೇಷಿಸಿಕೊಳ್ಳಬೇಕು. ಧರ್ಮಕ್ಕೆ ಬದ್ಧನಾದವನು ಇನ್ನೊಬ್ಬರತ್ತ ಬೆರಳು ತೋರುವುದಿಲ್ಲ.

ಹಿಂದೂ ಮಾತ್ರವಲ್ಲ, ಪೂರ್ಣ ಪ್ರಮಾಣದಲ್ಲಿ ಮಾನವೀಯವಾಗುವುದು ಯಾವ ಧರ್ಮಕ್ಕೂ ಸಾಧ್ಯವಾಗಿಲ್ಲ. ಹಾಗಾಗಿ, ತಂತಮ್ಮ ಧರ್ಮಗಳಲ್ಲಿನ ರಾಡಿಯನ್ನು ತಿಳಿಗೊಳಿಸುವುದು ಆಯಾ ಧರ್ಮೀಯರ ಮೊದಲ ಕರ್ತವ್ಯವಾಗಬೇಕು. ಇನ್ನೊಂದು ಧರ್ಮವನ್ನು ನಾವು ಅಸಹನೆಯಿಂದ ಕಾಣುವುದಾದರೆ, ಒಂದೋ ನಾವು ನಂಬಿದ ಧರ್ಮದೊಳಗೇ ಏನೋ ಐಬಿರಬೇಕು ಇಲ್ಲವೇ ಆ ಧರ್ಮದ ಕುರಿತ ನಮ್ಮ ಗ್ರಹಿಕೆಯಲ್ಲೇ ಲೋಪವಿರಬೇಕು.ದುರ್ಬಲರು, ಮಹಿಳೆಯರು, ಮಕ್ಕಳು ಮತ್ತು ಅಲ್ಪಸಂಖ್ಯಾತರ ಬಗ್ಗೆ ಸಂವಿಧಾನ ವಿಶೇಷ ಕಾಳಜಿಯನ್ನು ತೋರುತ್ತದೆ.

ಹೀಗೆ ಜಾತಿ ಧರ್ಮದಲ್ಲಿ ವಿಷ ಬೀಜ ಬಿತ್ತಿ ಎಲ್ಲೋ ತಾವು ಕಟ್ಟಿದ ಸಾಮ್ರಾಜ್ಯದಲ್ಲಿ ಕೂತು ಗಹಗಹಿಸುವ ರಾಜಕಾರಣಿಗಳಿಗೆ ಚುನಾವಣೆಗಳೇ ಮುಖ್ಯವಾಗುತ್ತವೆಯೇ ಹೊರೆತು ಮಾನವೀಯತೆ ಅಲ್ಲ, ಬಡಜನರ ಬವಣೆಗೆ ಸ್ಪಂದಿಸುವುದಲ್ಲ, ಕರುಣೆತಂತೂ ಇಲ್ಲವೆ ಇಲ್ಲ ಅದು ಇದ್ದರೆ ಕೇವಲ ಜಾತಿಯ ದುರ್ಲಬ ಲಾಬ ಪಡೆಯುವುದಷ್ಟೆ.

ಹಿಂದೆ ಟಿಪ್ಪು ಸುಲ್ತಾನ್ ಜಯಂತಿ ಮಾಡುವ ಮೂಲಕ ಅನಾವಶ್ಯಕವಾಗಿ ಧಾರ್ಮಿಕ ಭಾವನೆಗಳಿಗೆ ಕಳಂಕ ತರುವ ರೀತಿಯಲ್ಲಿ ಉಂಟಾದ ವಿಷ ಬೀಜ ಇನ್ನೂ ನಿಂತಿಲ್ಲ ಈಗಲೂ ಅದು ವಿವಿಧ ರೀತಿಯಲ್ಲಿ ಧ್ವನಿಸುತ್ತಿದೆ. ಪಠ್ಯದಲ್ಲಿ ಟಿಪ್ಪುವಿನ ಕುರಿತ ಇತಿಹಾಸವನ್ನು ನಿರ್ಮಲವಾಗಿ ಮಕ್ಕಳು ಓದಿ ಅರ್ಥೈಸಿಕೊಳ್ಳುತ್ತಿದ್ದರು, ಆದರೆ ಟಿಪ್ಪು ಜಯಂತಿ ಎನ್ನುವ ಮೂಲಕ ಉಂಟಾದ ಮತಭೇಟೆ ಒಂದು ಧರ್ಮದ ವಿರುದ್ಧ ದ್ವೇಷ ಸಾಧಿಸುವರ ಮಟ್ಟಿಗೆ ಬೆಳೆದು ನಿಂತ ಮೂಲ ಬೇರು ಈಗ ವಿವಿದೆಡೆ ಚಾಚಿ ನಿಂತಿದೆ.ಅನಾವಶ್ಯಕವಾಗಿ ಟಿಪ್ಪು ಜಯಂತಿ ಯನ್ನು ಆಚರಿಸುವ ನಿರ್ಧಾರ ಅಂದು ಸಿಎಂ ಆಗಿದ್ದ ಸಿದ್ದರಾಮಯ್ಯ ತಗೆದುಕೊಳ್ಳದೆ ಇದ್ದಿದ್ದರೆ ಇಂದು ಅದರ ಇತಿಹಾಸ ಯಥಾಸ್ಥಿತಿಯಲ್ಲಿ ಇರುತ್ತಿತ್ತು. ಈಗ ಅದರ ಆಳ-ಅಗಲ ಅದರ ಸತ್ಯಾ-ಸತ್ಯಗಳ ಕುರಿತು ಪರಿಶೀಲಿಸುವ ಮಟ್ಟಿಗೆ ಬಂದು ನಿಂತಿದೆ ಇಂತ ವಿಷ ಬೀಜ ಬಿತ್ತಿದವರು ಸಿದ್ದರಾಮಯ್ಯ ಅವರೇ ಇದಕ್ಕೆ ಮೂಲ ಕಾರಣ ಎಂದು ಹೇಳಲೇ ಬೇಕಾಗುತ್ತದೆ.

ಇನ್ನೂ ಜಾತಿ ಧರ್ಮದ ವಿಷಯಕ್ಕೆ ಬಂದರೂ ಕೂಡ ಅದೇ ಸಿದ್ದರಾಯ್ಯ ಒಂದು ಜಾತಿಯನ್ನು ಒಡೆಯಲು ಅಸ್ತ್ರವನ್ನಾಗಿ ಮಾಡಿಕೊಂಡಿದ್ದು ಇಂದು ಇತಿಹಾಸವೇ


ಹೌದು. ಇನ್ನೇನು ಸಿಎಂ ಅವಧಿ ಮುಗಿಯುತ್ತದೆ ಮತ್ತೊಂದು ಅವಧಿಗೆ ಸಿಎಂ ಆಗಬೇಕು ಎಂದು ಕನಸುಕಂಡ ಸಿದ್ದುಗೆ ಕಂಡಿದ್ದು ,ಹೀಗಾಗಿ ಲಿಂಗಾಯತ್ತ ವಾಲಿ ಲಿಂಗಾಯ ಮತ್ತು ವಿರಶೈವರು ಒಂದೇ ಧರ್ಮವಲ್ಲ ಬೇರೆ ಬೇರೆ ಎನ್ನುವ ಹೊಸ ವ್ಯಾಖ್ಯಾನಕ್ಕೆ ನಾಂದಿ ಹಾಡಿ ದೊಡ್ಡಕಂದಕವನ್ನೆ ಸೃಷ್ಟಿಸಿದವರು. ಹಾಗಾಗಿಯೇ ಕಾಂಗ್ರೆಸ್ ಪಕ್ಷ ಸೋಲಬೇಕಾಯಿತು.

ಆದರೆ ವೀರಶೈವವೆಂಬ ಒಂದು ಹಿಂದೂ ಪಂಗಡವು ಮಧ್ಯದಲ್ಲಿ ಲಿಂಗಾಯತದಲ್ಲಿ ನುಸುಳಿದೆ. ಆ ವೀರಶೈವರು 'ತಾವೇ ಲಿಂಗಾಯತ ಧರ್ಮದ ಸ್ಥಾಪಕರು' ಎಂದು ಬೀಗುತ್ತ ಅದನ್ನು ಒಳಗಿನಿಂದಲೆ ಭ್ರಷ್ಟಗೊಳಿಸುತ್ತಿದ್ದಾರೆ. ಅವರನ್ನು ವೀರಶೈವ ಮಹಾಸಭೆ ಪ್ರೋತ್ಸಾಹಿಸುತ್ತಿದೆ. ಬಿಜೆಪಿ, ವಿಎಚ್‌ಪಿ ಮತ್ತು ಆರ್‌ಎಸ್‌ಎಸ್‌ಗಳೂ ಬೆಂಬಲಿಸುತ್ತಿವೆ. ಏಕೆಂದರೆ, ವೀರಶೈವರು 'ತಾವು ಹಿಂದೂಗಳೆಂದು, ವೇದ ಆಗಮ ಪುರಾಣಗಳನ್ನು ಒಪ್ಪುತ್ತೇವೆ' ಎಂದೂ ಘೋಷಿಸುತ್ತಾರೆ. ಅವು ಹಿಂದುತ್ವಕ್ಕೆ ಪೂರಕವಾಗಿವೆಯೆಂದು ಬೇರೆ ಹೇಳಬೇಕಿಲ್ಲ.

ಆದ್ದರಿಂದಲೆ ಈ ಚಳವಳಿಯು ವೀರಶೈವ ಮಹಾಸಭೆಯಿಂದ ಹೊರಬಂದು ತನ್ನದೇ ಆದ 'ಲಿಂಗಾಯತ ಮಹಾಸಭೆ'ಯನ್ನು ಕಟ್ಟಿಕೊಂಡಿದೆ. ಪ್ರಜಾಸತ್ತಾತ್ಮಕ ತತ್ವಗಳಿಗೆ ಪೂರಕವಾಗಿ ಬಸವಣ್ಣನವರು ಬೋಧಿಸಿದ ತತ್ವಗಳಿಗೆ ಮಾನ್ಯತೆ ನೀಡಿ ಮತ್ತೊಮ್ಮೆ ಸ್ಥಾಪಿಸುವುದು ಇದರ ಗುರಿಯಾಗಿದೆ. ಚುನಾವಣೆಗಳು ಬರಲಿ ಹೋಗಲಿ, ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ಹೋಗಲಿ, ಈ ಚಳವಳಿ ನಿಲ್ಲವುದಿಲ್ಲ. ಆದರೆ ರಾಜಕಾರಣಿಗಳು ಮಾತ್ರ ತಮ್ಮ ಲಾಭದಾಯಕದತ್ತ ದೃಷ್ಟಿ ಹರಿಸುತ್ತಾರೆಯೇ ವಿನಃ ಬೇರೆ ಏನು ಅಲ್ಲ .

# ರಂಗಭೂಮಿಯ ಧ್ಯಾನಸ್ಥ ಮಲ್ಲಿಕಾರ್ಜುನ ಮಹಾಮನೆ

**ಇಂಥವರು**



ರಂಗಭೂಮಿ ಮತ್ತು ಸಾಂಸ್ಕೃತಿಕ ವಲಯದಲ್ಲಿ ಮಲ್ಲಿಕಾರ್ಜುನ ಮಹಾಮನೆ ಎಂದರೆ ಅದೊಂದು ವಿಶಿಷ್ಟ ರೀತಿಯ ಕಲಾವಿದ ಎನ್ನುವ ಮಾತಿದೆ , ಅದಕ್ಕೆ ತಕ್ಕಂತೆ ಸಾಸ್ಕೃತಿಕ ವಲಯದಲ್ಲಿ ಹಲವಾರು ಪ್ರಯೋಗಗಳನ್ನು ಮಾಡುವ ಮೂಲಕ ಮಹಾಮನೆ ತಮ್ಮ ಹೆಸರನ್ನು ಅಜರಾಮರಾಗಸಿಕೊಂಡಿದ್ದಾರೆ. ರಂಗಭೂಮಿಯನ್ನೇ ಮೂಲ ವೃತ್ತಿಯನ್ನಾಗಿ ಮಾಡಿಕೊಂಡು ಅನವರಿತವೂ ಅದರ ಧ್ಯಾನದಲ್ಲೇ ತೊಡಗಿರುವ ಅವರು ಒಂದಲ್ಲಾ ಒಂದು ಹೊಸ ಅವಿಷ್ಕಾರದತ್ತ ಮುಖಮಾಡಿರುವವರು ತನ್ನ ಮನೆಯನ್ನೇ ರಂಗಭೂಮಿಯನ್ನಾಗಿ ಮಾಡಿ ರಂಗಚಟುವಟಿಕೆಯ ಕ್ಷೇತ್ರದಲ್ಲಿ ತನ್ನದೇ ಸಾಧನೆಯಲ್ಲಿ ತೊಡಗಿದ್ದಾರೆ.

ವಿಶ್ವರಂಗಭೂಮಿಯ ದಿನಾಚರಣೆ ಈ ಸಂದರ್ಭದಲ್ಲಿ ಇಂಥವರ ಹೆಸರನ್ನು ನೆನಪಿಸಿಕೊಳ್ಳದಿದ್ದರೆ ಈ ದಿನಾಚರಣೆಗಳಿಗೆ ಅರ್ಥವಿರುವುದಿಲ್ಲ. ಲಕ್ಷಾಂತರ ಮಂದಿ ರಂಗಭೂಮಿಗೆ ವಿಶಿಷ್ಟ ಕೊಡುಗೆ ಕೊಟ್ಟಿದ್ದಾರೆ ಆದರೆ ಮಲ್ಲಿಕಾರ್ಜುನ ಮಹಾಮನೆಯ ಕೊಡುಗೆಯೂ ಒಂದು ವಿಶಿಷ್ಟವಾದದ್ದೇ ಏಕೆಂದರೆ ಮನೆಯೇ ರಂಗಭೂಮಿಯನ್ನು ಮಾಡಿಕೊಳ್ಳುವ ಮೂಲಕ ಹೊಸ ದಾಖಲೆಯನ್ನು ಬರೆದಿದ್ದಾರೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಾಪುರದಲ್ಲಿ ಶಿಕ್ಷಕ ಡಿ.ಎಸ್.ಬಸೆಟ್ಟಪ್ಪ ಮತ್ತು ಮಂಗಳ ಗೌರಮ್ಮ ಅವರ ದಂಪತಿಗೆ ಜನಸಿದ ಮಹಾಮನೆ ಮಾನಸ ಗಂಗೋಂತ್ರಿಯಲ್ಲಿ ಎಂಎ ಮಾಡಿರುವ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂಪಿಎ(ಮಾಸ್ಟರ್ ಆಫ್‌ಪರ್ಫಾಮೆನ್ಸ್) ಮಾಡಿರುವ ಅವರು ಮೂಡಲ ಪಾಯ ಮತ್ತು ಪಡುವಲಪಾಯ ಎನ್ನುವ ವಿಷಯದ ಮೇಲೆ ಎಂ ಪೀಲ್ ಪ್ರಬಂಧ ಮಂಡಿಸಿದ್ದಾರೆ. ನಂತರ ರಂಗಭೂಮಿ ಚಟುವಟಿಯಲ್ಲಿ ನಿರತರಾಗಿದ್ದವರು. 2007 ರಲ್ಲಿ ನಡೆದ ರಸ್ತೆ ಅಫಘಾತದಲ್ಲಿ ಅವರ ಪತ್ನಿ ಗಂಗಾಂಬಿಕೆ,ಇಬ್ಬರು ಮಕ್ಕಳಾದ ಕವಿತಾ ವರ್ಷ ಮಹಾಮನೆ, ಸಿಂಧ ಭಾರತಿ ಮಹಾಮನೆ ಸೇರಿದಂತೆ ಅವರ ಇಡೀ ಕುಟುಂಬವೆ ಬಲಿಯಾಗಿತ್ತು. ಇದಾದ ಕೆಲವು ವರ್ಷಗಳ ನಂತರ ಬದುಕು ಮುನ್ನೆಡೆಗೆ ವೀಣಾ ಅವರನ್ನು ವರಿಸಿದ್ದರು ದುರದೃಷ್ಟವಶಾತ್ ಅವರೂ ಕೂಡ ಕಳೆದ ಒಂದು ವರ್ಷದ ಹಿಂದೆ ಸಾವನ್ನಪ್ಪಿದ್ದು ವಿದಿ ಅವರ ಬಾಳಿಗೆ ಅತ್ಯಂತ ಕ್ರೂರಿಯಾಗಿದ್ದಾನೆ. ಆದರೂ ಅವರು ಅವೆಲ್ಲವನ್ನು ಮೆಟ್ಟಿ ನಿಂತು ರಂಗ ಚಟುವಟಿಕೆಯಲ್ಲಿ ಸದಾ ಸೃಜನಶೀಲರಾಗಿ ಯೋಚಿಸುತ್ತಿದ್ದಾರೆ ಹಲವಾರು ನಾಟಕಗಳನ್ನು ತಮ್ಮ ಸಿವಗಂಗಾ ರಂಗಮಂದಿರದಲ್ಲಿ ಪ್ರದರ್ಶಿಸುವಮೂಲಕ ತಮ್ಮ ಕ್ಷೇತ್ರದ ಸಾಧಕರಾಗಿಯೇ ನಿಂತಿದ್ದಾರೆ.

ತಮ್ಮ ಮುದ್ದಿನ ಮಗಳು ಕವಿತಾ ಹೆಸರಲ್ಲಿ ಈಗ ಅವರು ಪ್ರತಿವಾರವೂ ರಾಜ್ಯದ ವಿವಿಧ ಯುವ ಕವಿಗಳ ಕವನಗಳನ್ನು ಓದುವ ಮೂಲಕ ದಾಖಲೆಯತ್ತ ಸಾಗಿದ್ದಾರೆ.

ಕಳೆದ 45 ವರ್ಷಗಳಿಂದಲೂ ನಿರಂತರವಾಗಿ ರಂಗಭೂಮಿಯಲ್ಲಿವಿವಿಧ ಪ್ರಯೋಗಗಳನ್ನು ಮಾಡಿದ್ದಾರೆ.ಒಂದಲ್ಲಾ ಒಂದು ರಂಗ ಚಟುಟಿಕೆಯಲ್ಲಿ ನಿರತರಾಗಿರುವ ಅವರು ಕತೆ,ಕವನ ಮತ್ತು ಕಾದಂಬರಿಯನ್ನು ಬರೆದಿದ್ದಾರೆ, 'ಆಲಿಕಲ್ಲು' ಎನ್ನುವ ಕವನ ಸಂಕಲನ 'ಬುಡ್ಡಿ ದೀಪದ ಬೆಳಕು' ಎನ್ನುವ ಪ್ರಬಂಧ ಸಂಕಲನಕ್ಕೆ ಪುಸ್ತಕ ಪ್ರಾಧಿಕಾರಿದಂದ ಪ್ರಶಸ್ತಿಯೂ ದೊರಕಿದೆ.

ಅಲ್ಲದೆ ದೇವಗಿರಿಯ ತಾರಾತಿಗಡಿ ಎನ್ನುವ ಕಾದಂಬರಿಯನ್ನೂ ಬರೆದಿದ್ದಾರೆ ಹೀಗೆ ವಿವಿದ ಸಾಂಸ್ಕೃತಿಕ ಲೋಕದಲ್ಲಿ ತಮ್ಮದೆ ಹೆಸರು ಮಾಡಿರುವ ಮಹಾಮನೆ ಅವಿರಗೆ ಕರ್ನಾಟಕ ನಾಟಕ ಆಕಾಡೆಮಿ ಪ್ರಶಸ್ತಿ, ಪುಸ್ತಕ ಪ್ರಧಿಕಾರದಿಂದ ನೀಡುವ ಪ್ರಶಸ್ತಿ .ಕನ್ನಡ ಸಾಹಿತ್ಯ ಪರಿಷತ್ ನೀಡುವ ದತ್ತಿನಿದಿ ಪ್ರಶಸ್ತಿ, ಕುವೆಂಪು ಹೆಸರಿನಲ್ಲಿ ನೀಡುವ ಪ್ರಶಸ್ತಿ, ಸ್ವಾಭಿಮಾನ ರತ್ನ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಅವರು 'ಬೀದಿ' ಪತ್ರಿಕೆಯ ಸಂಪಾದಕರಿಗಿಯೂ ಕಾರ್ಯನಿರ್ವಹಿಸಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಅವರು ಪ್ರತಿವಾರವೂ ತಮ್ಮ ಮನೆಯ ಸಿವಗಂಗ ರಂಗಮಂದಿರದಲ್ಲಿ ಸದಾ ಒಂದಲ್ಲಾ ಒಂದು ನಾಟಕ ಪ್ರದರ್ಶನ ಅಥವಾ ವಿವಿದ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಲೇ ಇದ್ದಾರೆ.




ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.


## ಅನಾವರಣ

# ಮತಬ್ಯಾಂಕ್‌ಗಾಗಿ ಜಯಂತಿ ಆಚರಣೆಗಳು ಅಗತ್ಯವೇ?

ಇತ್ತೀಚೆಗೆ ಬಂದ ಸರ್ಕಾರಗಳು ಸಮುದಾಯಗಳನ್ನು ಓಲೈಸಲು ಜಯಂತಿಗಳನ್ನು ಆಚರಿಸುವ ಮೂಲಕ ಹೊಸ ಸಂಕಷ್ಟಕ್ಕೆ ಸಿಲುಕಿಸಿದೆ.

ಜಾತಿ, ಧರ್ಮದ ಹಂಗು ತೊರೆದು ಸಮಾಜ ಮತ್ತು ಸಮಷ್ಠಿ ಹಿತಕ್ಕೆ ಶ್ರಮಿಸಿದ ಮಹಾಪುರುಷರನ್ನು ಮತ್ತೆ ಜಾತಿಯ ಪರಿಧಿಯೊಳಗೆ ಕಟ್ಟಿಹಾಕುವ ಪ್ರಯತ್ನಗಳ ಹಿಂದೆ ವೋಟ್‌ಬ್ಯಾಂಕ್ ರಾಜಕೀಯವೂ ಸೇರಿಕೊಂಡಿದೆ.

ಕೆಲವೇ ಕೆಲವು ಜಯಂತಿಗಳಿಗೆ ಮಾತ್ರ ಸೀಮಿತವಾಗಿತ್ತು ಆದರೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾದ ನಂತರ ಆರಂಭವಾದ ಈ ಜಯಂತಿಗಳು ಪ್ರತಿವರ್ಷವೂ ಒಂದಲ್ಲಾ ಒಂದು ಜಯಂತಿಗಳು ಸೇರಿಕೊಳ್ಳುತ್ತಿವೆ ಈ ಮೂಲಕ ಆ ಸಮುದಾಯದ ಜನರನ್ನು ತಮ್ಮ ಪಕ್ಷದತ್ತ ಸೆಳೆಯುವ ಹುನ್ನಾರ ನಡೆಯುತ್ತಲೇ ಇದೆ.

ಬಿ.ಎಸ್.ಯಡಿಯೂರಪ್ಪ ಅವರ ಅಧಿಕಾರಾವಧಿಯಿಂದ ಆರಂಭವಾದ ಜಯಂತಿಗಳ ಆಚರಣೆಯ ಪರ್ವ ಸಿದ್ದರಾಮಯ್ಯ ಅವರ ಆಡಳಿತದ ಕಾಲ ಮಾತ್ರವಲ್ಲದೆ ಇದೀಗ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರದಲ್ಲೂ ಮುಂದುವರಿದಿದೆ. ಧ್ವನಿ ಇಲ್ಲದ ಸಮುದಾಯಗಳಿಗೆ ಜಯಂತಿಗಳು ಸಂಘಟನೆಗೆ ದಾರಿ ಮಾಡಿಕೊಡಬೇಕಾಗಿತ್ತು. ಆದರೆ ಅವು ಮಹಾಪುರುಷರ ಜಾತಿ ಬಿಂಬಿಸುವ ಕಾರ್ಯಕ್ರಮಗಳಾಗುವ ಮೂಲಕ ಮತ್ತಷ್ಟು ಜಾತೀಯತೆಗೆ ಕಾರಣವಾಗುತ್ತಿವೆ. ರಾಷ್ಟ್ರೀಯ ನಾಯಕರಿಗೆ ಸೀಮಿತವಾಗಿದ್ದ ಜಯಂತಿಗಳ ಸಾಲಿಗೆ ನಾಡಿನ ಐತಿಹಾಸಿಕ ಪುರುಷರ ಜಯಂತಿಗಳು ಸೇರಿದವು. ಇದೀಗ ಪೌರಾಣಿಕ ಪುರುಷರ ಜಯಂತಿಗಳು ಆರಂಭವಾಗಿವೆ. ಇದು ಎಲ್ಲಿಗೆ ಹೋಗಿ ನಿಲ್ಲುವುದೋ? ಗೊತ್ತಿಲ್ಲ ಆದರೆ ಜಾತಿಗೊಬ್ಬ ಪುರಷರ ಜಯಂತಿಗಳನ್ನು ಮಾಡುವಷ್ಟರ ಮಟ್ಟಿಗೆ ಸರ್ಕಾರ ಬಂದು ನಿಂತಿದೆ ಎಂದರೆ ಅದರ ಹಿಂದೆ ಇರುವುದೆಲ್ಲವೂ ಮತಬ್ಯಾಂಕ್ ಎನ್ನುವುದನ್ನು ಬೇರೆ ಹೇಳಬೇಕಿಲ್ಲ.

ಯಾಕೆ ಈ ಜಯಂತಿಗಳು ಬೇಕು ? ಈ ಮೂಲಕ ಮಹಾಪುರಷರನ್ನು ಆ ಜಾತಿಗೆ ಸೀಮಿತ ಮಾಡಿ ಅವರ ಆದರ್ಶಬದುಕನ್ನು ಸೀಮಿತಗೊಳಿಸುವ ಕಾರ್ಯವೂ ನಡೆಯುತ್ತಿದೆ , ಜಯಂತಿಗಳು ನಡೆದರೆ ಮಾತ್ರ ಅವರನ್ನು ನೆನಪು ಮಾಡಿಕೊಳ್ಳುವುದಲ್ಲ ಅಂತ ಮಹಾಪುರುಷರು ಎಲ್ಲರ ಹೃದಯದಲ್ಲೂ ಇರುತ್ತಾರೆ ಆದರೆ ಜಯಂತಿ ಮಾಡುವ ಮೂಲಕ ಕೇವಲ ಒಂದು ಜಾತಿಗೆ ಸೀಮಿತಮಾಡಿ ಆದರ್ಶಗಳನ್ನು ಗಾಳಿಗೆ ತೂರುವ ಕೆಲವಾಗುತ್ತಿದೆ

ಇಂತ ಜಯಂತಿಗಳ ಮೂಲಕ ಧರ್ಮ ಸಂಘರ್ಷಕ್ಕೂ ಕಾರಣವಾಗುತ್ತಿದೆ. ಮಕ್ಕಳು ಪಠ್ಯಪುಸ್ತಕದಲ್ಲಿ ಟಿಪ್ಪುವನ್ನು ಓದಿ ಅವರ ಆದರ್ಶಗಳನ್ನು ತಿಳಿದುಕೊಳ್ಳುತ್ತಿದ್ದರು ತಾವೂ ಮೈಗೂಡಿಸಿಕೊಳ್ಳುತ್ತಿದ್ದರು ಆದರೆ ಅವರ ಜಯಂತಿ ಮಾಡಲು ಹೋಗಿ ಈಗ ಧರ್ಮಸಂಕಟಕ್ಕೆ ಸಿಲುಕಿದೆ. ಅವರ ಆದರ್ಶದ ಬದುಕು ಕೂಡ ಪಠ್ಯಪುಸ್ತಕದಲ್ಲಿ



ತಗೆಯುವ ಹುನ್ನಾರವೂ ನಡೆದಿದೆ. ಇವೆಲ್ಲವೂ ರಾಜಕಾರಣಿಗಳು ಆ ಸಮುದಾಯದ ಮತಗಳನ್ನು ಓಲೈಸುವ ತಂತ್ರಕ್ಕೆ ಈಗ ಧರ್ಮ ಸಂಘರ್ಷದತ್ತ ದಾರಿಗೆ ಕಾರಣವಾಗಿದೆ.

ಸಿ.ಟಿ.ರವಿ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ವೇಳೆ ಜಯಂತಿಗಳನ್ನು ರದ್ದು ಮಾಡುವ ಮಾತುಗಳನ್ನಾಡಿದ್ದರು ಆದರೆ ಅದು ಸಾಧ್ಯವಾಗದಿದ್ದಾಗ ಜಯಂತಿಗಳ ಆಚರಣೆಗೆ ಹೊಸ ಸ್ವರೂಪವೊಂದನ್ನು ತರಲು ಪ್ರಯತ್ನ ನಡೆಸಿದ್ದರು. ಯಾಕೆಂದರೆ ಜಯಂತಿಗಳಿಗೆ ಬ್ರೇಕ್ ಹಾಕುವುದು ಸುಲಭದ ಕೆಲಸವಲ್ಲ.ಈಗಾಗಲೇ ಆಚರಿಸುತ್ತಿರುವ ಜಯಂತಿಗಳನ್ನು ರದ್ದು ಮಾಡಿದರೆ ಅದು ರಾಜಕೀಯ ಆಯಾಮ ಪಡೆದುಕೊಳ್ಳುವುದರಲ್ಲಿಅನುಮಾನ 'ವಿಲ್ಲ. ಜಯಂತಿಗಳ ಆಚರಣೆಯ ಹಿಂದೆ ವೋಟ್ ಬ್ಯಾಂಕ್ ರಾಜಕೀಯದ ಮರ್ಮವೂ ಇದೆ. ಹೀಗಾಗಿ ಜಯಂತಿಗಳನ್ನು ರದ್ದು ಮಾಡುವ ಬದಲು ಸ್ವರೂಪ ಬದಲಿಸಲು ಸರಕಾರ ಚಿಂತನೆ ನಡೆಸಲಾಗಿತ್ತು

ಎಲ್ಲಮಹಾಪುರುಷರ ಜಯಂತಿಗಳನ್ನು ಆಚರಿಸಿದರೆ ವರ್ಷದ 365 ದಿನವೂ ಸಾಕಾಗುವುದಿಲ್ಲಎಂಬುದು ತಮಾಷೆಯ ಮಾತಲ್ಲ. ಜತೆಗೆ ಮಹಾಪುರಷರ ತತ್ವ, ಆದರ್ಶಗಳ ಪಾಲನೆಗೆ ಪ್ರೇರಣೆ ನೀಡುವುದಕ್ಕಿಂತ ಆಯಾ ಜಾತಿಯ ಅಸ್ತಿತ್ವ ಸಾರುವುದಕ್ಕೆ ಜಯಂತಿಗಳು ಸೀಮಿತವಾಗುತ್ತಿರುವ ಆರೋಪಗಳೂ ಇವೆ.

ಪ್ರತಿ ಜಿಲ್ಲೆಗಳಲ್ಲಿಆಚರಿಸುತ್ತಿರುವ ಶಿಷ್ಟಾಚಾರದ ಜಯಂತಿಗಳ ಸ್ವರೂಪವನ್ನು ಬದಲಿಸಲು ಸಿದ್ಧತೆಗಳು ನಡೆಯುತ್ತಿವೆ. ಪ್ರತಿವರ್ಷ ಒಂದೊಂದು ಜಯಂತಿಯನ್ನು ರಾಜ್ಯ ಮಟ್ಟದ ಜಯಂತಿಯನ್ನಾಗಿ ಮಾರ್ಪಡಿಸಿ ಒಂದೊಂದು ಜಿಲ್ಲೆಯಲ್ಲಿಆಚರಿಸುವುದು. ಪ್ರಸಕ್ತ ವರ್ಷ ನಡೆಯುವ ರಾಜ್ಯ ಮಟ್ಟದ ಜಯಂತಿಯಲ್ಲೇ ಮುಂದಿನ ವರ್ಷ ಯಾವ ಜಿಲ್ಲೆಯಲ್ಲಿರಾಜ್ಯ ಮಟ್ಟದ ಈ ಜಯಂತಿ ನಡೆಯುತ್ತದೆ ಎಂಬುದನ್ನು ಘೋಷಣೆ ಮಾಡಲು ತಯಾರಿ ನಡೆಸಿತ್ತು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂದೆ ಯಾವ ಜಿಲ್ಲೆಯಲ್ಲಿನಡೆಯುತ್ತದೆ ಎಂಬುದನ್ನು ಘೋಷಣೆ ಮಾಡಿದ ರೀತಿಯಲ್ಲೇ ಮಹಾಪುರುಷರ ರಾಜ್ಯ ಮಟ್ಟದ ಜಯಂತಿಗಳನ್ನು ಘೋಷಣೆ ಮಾಡುವ ನಿರ್ಧಾರಕ್ಕೂ ಬರಲಾಗಿತ್ತು

ಒಬ್ಬರು ಮಹಾಪುರುಷರ ರಾಜ್ಯ ಮಟ್ಟದ ಜಯಂತಿ ಒಂದು ಜಿಲ್ಲೆಯಲ್ಲಿನಿಗದಿಯಾದ ಮೇಲೆ ಬೇರೆ ಜಿಲ್ಲೆಮತ್ತು ತಾಲೂಕುಗಳಲ್ಲಿಆ ಜಯಂತಿಯನ್ನು ಸರಕಾರದಿಂದ ಆಯೋಜಿಸುವುದಿಲ್ಲ. ಬದಲಿಗೆ ಜಿಲ್ಲಾಮಟ್ಟದಲ್ಲಿಶಾಲಾ ಕಾಲೇಜುಗಳಲ್ಲಿಆ ಮಹಾಪುರುಷರ ಬಗ್ಗೆ ಅರ್ಧ ಗಂಟೆ ಉಪನ್ಯಾಸ ಆಯೋಜಿಸಬಹುದು. ಆದರೆ, ಇದಕ್ಕೆ ಯಾವುದೇ ಶಿಷ್ಟಾಚಾರ, ಅನುದಾನ ಇರುವುದಿಲ್ಲ. ರಾಜ್ಯ ಮಟ್ಟದಲ್ಲಿಜಯಂತಿ ಆಯೋಜಿಸುವುದರಿಂದ ಆಯಾ ಜನಾಂಗದವರು ಸಂಘಟಿತರಾಗಲು, ಬೇಡಿಕೆಗಳನ್ನು ಕ್ರೋಢೀಕರಿಸಿ ಸರಕಾರಕ್ಕೆ ಸಲ್ಲಿಸಲು ಸಾಧ್ಯವಾಗುತ್ತದೆ. ಜತೆಗೆ ಎಲ್ಲಜಿಲ್ಲೆಗಳಿಗೂ ಪ್ರಾತಿನಿಧ್ಯವೂ ಸಿಕ್ಕಿದಂತಾಗುತ್ತದೆ ಎನ್ನುವುದಾಗಿತ್ತು.

ವರ್ಷಕ್ಕೆ ಇರುವುದು ಹನ್ನೆರಡೇ ತಿಂಗಳು. ಆದರೆ, ವರ್ಷಕ್ಕೆ 23 ಜಯಂತಿಗಳನ್ನು ಅಧಿಕೃತವಾಗಿ ಸರಕವಾರವೇ ಆಯೋಜಿಸುತ್ತಿದೆ. ಒಟ್ಟು ಇದ್ದ 24 ಜಯಂತಿಗಳಲ್ಲಿಟಿಪ್ಪು ಜಯಂತಿ ರದ್ದಾಗಿದ್ದು, ಈಗ 23 ಜಯಂತಿಗಳಿವೆ. ಇದಲ್ಲದೆ ಅಕ್ಕಮಹಾದೇವಿ, ನಾಲ್ವಡಿ ಕೃಷ್ಣರಾಜ ಒಡೆಯರ್, ವ್ಯಸನ ಮುಕ್ತ ಜಯಂತಿಗಳ ಆಚರಣೆಯೂ ಇವೆ. ಜಿಲ್ಲಾಕೇಂದ್ರದಲ್ಲಿನಡೆಯುವ ಪ್ರತಿ ಜಯಂತಿಗೆ 69 ಸಾವಿರ, ಪ್ರತಿ ತಾಲೂಕು ಕೇಂದ್ರಕ್ಕೆ ಪ್ರತಿ ಜಯಂತಿಗೆ 19 ಸಾವಿರ ಅನುದಾನವನ್ನು ಸರಕಾರ ಭರಿಸುತ್ತಿದೆ. ಪ್ರತಿಯೊಂದು ಜಯಂತಿಗೂ ಶಿಷ್ಟಾಚಾರ ಪಾಲನೆ ಮಾಡಬೇಕು. ಜಯಂತಿಗಳನ್ನು ಆಯೋಜಿಸುವುದರಲ್ಲೇ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತಗಳು ಹೈರಾಣಾಗುತ್ತಿವೆ. ಬಹುತೇಕ ಜಯಂತಿಗಳು ಜಾತಿಕೇಂದ್ರಿತವಾಗಿದ್ದು, ಆಯಾ ಜಾತಿಯವರು ಪಾಲ್ಗೊಳ್ಳುವುದು ಬಿಟ್ಟರೆ ಅವು ಸರ್ವಜನಾಂಗವನ್ನು ಒಳಗೊಳ್ಳುತ್ತಿಲ್ಲ. ತಮ್ಮ ಜಾತಿಯ ಮಹಾಪುರುಷನ ಹೆಸರಿನಲ್ಲಿಒಂದು ದಿನದ ಸಂಭ್ರಮ ಬಿಟ್ಟರೆ ಅವರ ವಿಚಾರಧಾರೆಗಳು ಜನರನ್ನು ತಲುಪುತ್ತಿಲ್ಲಎಂಬುದು ವಾಸ್ತವ.

ಆದರೆ ಈ ವಾಸ್ತವ ಅರಿತರೂ ಕೂಡ ಮತ್ತೇ ಮತ್ತೇ ಜಯಂತಿಗಳು ಸೇರ್ಪಡೆಯಾಗುತ್ತಲೇ ಇವೆ ಈಗ ಬಸವರಾಜ ಬೊಮ್ಮಾಯಿ ಅವರು ಮತ್ತೊಂದು ಜಯಂತಿ ಅಚರಣೆಗೆ ಆದೇಶ ಹೊರಡಿಸಿದ್ದಾರೆ. ಹೀಗಾಗಿ ಜಾತಿಯ ಮತಗಳ ಬ್ಯಾಂಕ್‌ಗೆ ಇದೊಂದು ಹೊಸ ಸೇರ್ಪಡೆಯಾಗಿದೆ ಹೀಗೆ ಸೇರ್ಪಡೆಯಾಗುತ್ತಾ ಹೋದರೆ ಜಯಂತಿಗೆ ಬದಲಾಗಿ ಧರ್ಮ ಜಾತಿ ಸಂಘರ್ಷಕ್ಕೆ ಕಾರಣವೂ ಆಗಬಹುದು. ಹಾಗಾಗಿ ಈ ಜಯಂತಿಗಳನ್ನು ಮಾಡುವ ಬದಲಾಗಿ ಅವರ ಜಯಂತಿಯನ್ನು ಶಾಲೆಗಳಲ್ಲಿ ಅಥವ ಸಾರ್ವಜನಿಕವಾಗಿ ಒಂದು ಕಾರ್ಯಕ್ರಮ ಮಾಡಿ ಆ ಕಾರ್ಯಕ್ರಮದ ಮೂಲಕ ಆ ಮಹಾಪುರಷರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವ ಕರೆ ನೀಡಿದರೆ ಸಾಕು ಎನಿಸುತ್ತದೆ. ಆದರೆ ಅದರ ಸ್ವರೂಪಗಳೇ ಬೇರೆಯಾಗುತ್ತಿದೆ ಈ ರಾಜಕೀಯ ನಾಯಕರು ಯಾವುದೇ ಕಾರ್ಯ ಮಾಡಿದರು ಅದು ಅಲ್ಲಿ ಮತಬ್ಯಾಂಕ್‌ಇರಬೇಕು ಹಾಗಾಗಿಯೇ ಜಯಂತಿಗಳ ಪಟ್ಟಿ ಇನ್ನೂ ಉದ್ದವಾಗುತ್ತಲೇ ಇದೆ.

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಭಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |


# ಹೊಣೆಗಾರಿಕೆ ಮರೆತ ಮಾಧ್ಯಮಗಳು

## ಹಿಟ್ & ರನ್

ಪತ್ರಿಕೋದ್ಯಮ ಎನ್ನುವುದು ಏನು ಬೇಕಾದರೂ ಸುದ್ದಿ ಮಾಡಬಹುದು, ನಾನು ಮಾಡಿದ್ದೇ ಸುದ್ದಿ ಎನ್ನುವ ಪರಿಪಾಠ ಇತ್ತೀಚೆಗೆ ಆಗಿದೆ. ಹೊಣೆಗಾರಿಕೆಯನ್ನು ಮರೆತು ಕೇವಲ ಟಿಆರ್‌ಪಿ ಮತ್ತು ಸಮಾಜಕ್ಕೆ ಬೇಡದ್ದನ್ನು ವಿವಾದಗಳನ್ನು ಸೃಷ್ಟಿಸಿ ಟಿಆರ್‌ಪಿ ರೇಟ್ ಹೆಚ್ಚಿಸಿಕೊಳ್ಳುವ ಬರದಲ್ಲಿ ಬೇಡವಾದ್ದನ್ನೆಲ್ಲ ಪ್ರಸಾರ ಮಾಡುವ ಗೀಳು ಹಚ್ಚಿಸಿಕೊಂಡಿವೆ.

ದೇಶದಲ್ಲಿ ನಿರಂತರವಾಗಿ ತೈಲ ಬೆಲೆ ಏರಿಕೆಯಾಗುತ್ತಿದೆ, ಅಡಿಗೆ ಎಣ್ಣೆ 200ರ ಗಡಿ ದಾಟಿದೆ, ವಿದ್ಯುತ್ ದರ ಏರಿಕೆಯಾಗುತ್ತಿದೆ, ಔಷಧಿಗಳ ಬೆಲೆ ಕೂಡ ಏರಿಕೆಯಾಗುತ್ತಿದೆ ಇವೆಲ್ಲವೂ ಜನಸಾಮಾನ್ಯರಿಗೆ ಬೇಕಾದ ವಿಷಯಗಳು, ಜನರು ಈ ಕುರಿತು ಯೋಚಿಸುವ ಸಮಸ್ಯೆಗಳು ಇಂತ ಸಮಸ್ಯೆಗಳನ್ನು ಬಿಟ್ಟು , ಜೆಮ್ಸ್ ಚಿತ್ರ ಇಂದು ಎಷ್ಟು ಗಳಿಸಿತು, ಕಾಶ್ಮೀರ ಫೈಲ್,ಕೆ.ಜಿ.ಎಫ್.ವೀಕ್ಷಣೆ ಕುರಿತು ಇಡೀ ದಿನ ಪ್ರಸಾರ ಮಾಡುವುದು ಕೋಮು ಕಲಹಗಳ ಹಿಂದೆ ಬಿದ್ದು ಅನಾವಶ್ಯಕ ಜನರ ಭಾವನೆಗಳನ್ನು ಕೆಡೆಸುವುದು, ವಿವಾದಗಳ ಕುರಿತು ಹಂತ ಹಂತವಾಗಿ ಪ್ರಸಾರ ಮಾಡುವುದು ಇವು ಸಾಮಾಜಿಕ ಕಾಳಜಿಯೇ?

ಕನಿಷ್ಠ ಪ್ರಜ್ಞೆ ಇದ್ದ ನ್ಯೂಸ್ ಚಾನಲ್‌ಗಳಾಗಿದ್ದರೆ ಬೆಲೆ ಏರಿಕೆ ಕುರಿತು ನಿರಂತರ ಸುದ್ದಿಗಳನ್ನು ಪ್ರಸಾರ ಮಾಡಬೇಕಿತ್ತು. ಹಾಗೆ ನೋಡಿದರೆ ಒನ್ನೊಂದು ಚಾನೆಲ್ ಕೂಡ ಒನ್ನೊಂದು



ಸಾಮಾಜಿಕ ಕಳ ಕಳಿಯ ಘೋಷ ವಾಕ್ಯವನ್ನು ಹಾಕಿಕೊಂಡಿವೆ, 'ನೇರ ದಿಟ್ಟ ನಿರಂತರ'.., 'ಉತ್ತಮ ಸಮಾಜಕ್ಕಾಗಿ', ಇನ್ನೊಂದು ಚಾನೆಲ್" ಜಾಲ ನಮ್ಮದು ಬಲ ನಿಮ್ಮದು"' ಇದು ನಿಮ್ಮ ಚಾನೆಲ್' 'ಇದು ಕನ್ನಡಿಗರ ಚಾನೆಲ್' ಎಲ್ಲವೂ ಸಾಮಾಜಿಕ ಕಳಕಳಿಯ ಘೋಷ ವಾಕ್ಯವೇ ಆದರೆ ಘೋಷ ವಾಕ್ಯಕ್ಕೂ ಚಾನೆಲ್‌ಗಳು ನಡೆದುಕೊಳ್ಳುವುದಕ್ಕೂ ಸಂಬಂಧವೇ ಇಲ್ಲ ಉತ್ತಮ ಸಮಾಜ ನಿರ್ಮಾಣದ ಬದಲಾಗಿ ಸಂಘರ್ಷಕ್ಕೆ ನಾಂದಿ ಹಾಡುವ ಈ ಚಾನೆಲ್‌ಗಳಿಂದ ಕಲಿಯುವ ಪಾಠಗಳು ಹೀಗಿವೆ ನಮ್ಮ ಚಾನೆಲ್‌ಗಳ ಪರಿಸ್ಥಿತಿ.

ಇಂತ ಚಾನೆಲ್‌ಗಳಿಂದ ಪಾಠ ಕಲಿಯುವುದಿರಲಿ ಒಂದಿಷ್ಟು ಸಮಾಜ ಉದ್ದಾರವಾಗುವ ಕಾರ್ಯಗಳನ್ನಾದರೂಮಾಡಿದರೆ ಸಾಕು.ಚಾನಲ್‌ಗಳ ಮುಖ್ಯಸ್ಥರಿಗೂ ಪ್ರಜ್ಞೆ ಇದ್ದಂತೆ ಕಾಣುತ್ತಿಲ್ಲ ಒಬ್ಬ ಸಂಪಾದಕನಿಗೆ ಕನಿಷ್ಠ ಪ್ರಜ್ಞೆ ಇದ್ದಿದ್ದರೆ ಇಂತ ವಿಪಾರ್ಯಸ ಉಂಟಗುತ್ತಿರಲಿಲ್ಲ.

ಇಷ್ಟು ವರ್ಷ ಇಲ್ಲದ ಕೋಮು ಸಮಸ್ಯೆಯನ್ನು ಈಗೇಕೆ ಉಲ್ಬಣಗೊಳಿಸುತ್ತಿದ್ದೀರಿ, ಇದರಿಂದ ಜನರ ಭಾವನೆಗಳು ಹಾಳಾಗುತ್ತವೆ, ಸಾಮಾಜಿಕ ಸ್ಥಳಗಳ ವಾತಾವರಣ ಕೆಡುತ್ತದೆ ಎಂಬ ತಿಳುವಳಿಕೆಯನ್ನು ಒಬ್ಬರಾದರೂ ನೀಡಿದರೇ? ದಿನಕ್ಕಿಷ್ಟು ಎಂಬಂತೆ ದಲಿತರ ಮೇಲೆ ಹಲ್ಲೆ, ಹೆಣ್ಣು ಮಕ್ಕಳ ಅತ್ಯಾಚಾರ ಮತ್ತು ಜನ ಸಾಮಾನ್ಯರ ಕೊಲೆಗಳು ನಿರಂತರವಾಗಿ ನಡೆಯುತ್ತಿದ್ದು, ಗೊತ್ತಾದ ಪ್ರಕರಣಗಳಲ್ಲಿಯೂ ಅವರಿಗೆ ನ್ಯಾಯ ಸಿಗುವ ಸಾಧ್ಯತೆ ಕಡಿಮೆ ಅಂತವರ ಬಗ್ಗೆ ಕಾಳಜಿ ತೋರಿಸುವ ಬದಲು ಇಂತ ಸಂಘರ್ಷಕ್ಕೆ ಎಡೆ ಮಾಡುವ ವರದಿಗಳನ್ನು ಪ್ರಸಾರ ಮಾಡಿ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿವೆ.

ಈ ಬಗ್ಗೆ ಒಬ್ಬರಾದರೂ ಸಹ ಆ ಸತ್ತವರಿಗೆ ಇಲ್ಲವೇ ಹಲ್ಲೆಗೆ ಒಳಗಾದವರಿಗೆ ನ್ಯಾಯ ಸಿಗುವ ತನಕ ತಮ್ಮ ವೇದಿಕೆಯನ್ನು ಬಳಸಿಕೊಂಡು ಹೋರಾಟ ನಡೆಸಿದ ಉದಾಹರಣೆ ಇದೆಯೇ? ಇನ್ನು ಹೊನ್ನಾಳಿಯ ಶಾಸಕ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನೇ ಪಡೆದರೂ ಅದು ಅಸಂವಿಧಾನಿಕ ಎಂದು ಗಟ್ಟಿಯಾಗಿ ಹೇಳುವ ಧೈರ್ಯವನ್ನು ತೋರಲಿಲ್ಲ. ರೇಣುಕಾ ಚಾರ್ಯರ ಆ ಘಟನೆಯನ್ನು ಗಟ್ಟಿ ದ್ವನಿಯಲ್ಲಿ ಯಾವ ಚಾನಲ್‌ಗಳು ಎತ್ತಲಿಲ್ಲ ಹೀಗಿರುವಾಗ ಈ ಚಾನಲ್‌ಗಳು ಇನ್ಯಾವ ಸಮಾಜ ನಿರ್ಮಾಣ ಮಾಡುತ್ತವೆ ,ಯಾವ ಉದ್ದೇಶಕ್ಕೆ ಚಾನಲ್‌ಗಳನ್ನು ವೀಕ್ಷಿಸಬೇಕು? ಇಂತ ಪ್ರಶ್ನೆಗಳು ಈಗ ಜನರಲ್ಲಿ ಕಾಡುತ್ತಿವೆ. ಮುಂದೆ ಹೀಗೆ ಆದರೆ ಚಾನಲ್‌ಗಳ ಸ್ಥಿತಿ ನಿಜಕ್ಕೂ ಶೋಚನೀಯ ಸ್ಥಿತಿಗೆ ತಲುಪುವುದರಲ್ಲಿ ಎರಡು ಮಾತಿಲ್ಲ.

# ಪ್ರಾಚೀನ ಕಲಾಕೃತಿಗಳು- ಕೊಳ್ಳೆಯೇಕೆ ನಿಂತಿಲ್ಲ?

ದೆಹಲಿ ದೃಷ್ಟಿ
ಡಿ.ಉಮಾಪತಿ
ಹಿರಿಯ ಪತ್ರಕರ್ತರು






ವರ್ಷ ವರ್ಷವೂ ಲೂಟಿಯಾಗುತ್ತಿರುವ ಈ ಸಾವಿರಾರು ಪ್ರಾಚ್ಯ ವಿಗ್ರಹಗಳು- ಕಲಾಕೃತಿಗಳ ಜೊತೆಯಲ್ಲಿ ಫೋಟೋ ತೆಗೆಯಿಸಿಕೊಳ್ಳುವ ನೇರವಂತಿಕೆಯನ್ನೂ ಆಳುವವರು ತೋರಬೇಕಲ್ಲವೇ?

ಸಾವಿರ ವರ್ಷ ಹಳೆಯ ಪ್ರಾಚೀನ ವಿಗ್ರಹಗಳನ್ನು ಇತ್ತೀಚೆಗೆ ಭಾರತಕ್ಕೆ ವಾಪಸು ಮಾಡಿತು ಆಸ್ಟ್ರೇಲಿಯಾ. ಮಾನ್ಯ ಪ್ರಧಾನಮಂತ್ರಿಯವರು ಅವುಗಳನ್ನು ಮುಟ್ಟಿ ತಡವಿ ನೋಡುತ್ತಿದ್ದ ಛಾಯಾಚಿತ್ರಗಳು ಮಾಧ್ಯಮಗಳಲ್ಲಿ ಕವಿದು ಮೂಡಿದವು.

ಹತ್ತಿಪ್ಪತ್ತು, ನೂರಿನ್ನೂರು ಕಲಾಕೃತಿಗಳು, ದೇವರ ವಿಗ್ರಹಗಳನ್ನು ವಾಪಸು ತಂದು ಫೋಟೋ ತೆಗೆಯಿಸಿಕೊಳ್ಳುವುದೇನೋ ಸರಿ. ಆದರೆ ವರ್ಷವೊಂದರಲ್ಲೇ ಸಾವಿರಾರು ಕಲಾಕೃತಿಗಳು ದೇವರ ವಿಗ್ರಹಗಳು ಕಳವಾಗಿ ಕಳ್ಳದಾರಿಯಲ್ಲಿ ದೇಶದ ಗಡಿ ದಾಟುತ್ತಿವೆ. ದೇಶಭಕ್ತಿಗೆ, ಧರ್ಮಕ್ಕೆ ಹೊಸ ವ್ಯಾಖ್ಯೆ ಬರೆದು, ಅವುಗಳ ಹೆಸರಲ್ಲಿ ಮನುಷ್ಯರನ್ನು ಕೊಲ್ಲುತ್ತಿರುವವರ ಸರ್ಕಾರವು ದೇಶದ ಗಡಿಗಳನ್ನೇಕೆ ಸುಭದ್ರಗೊಳಿಸಿಲ್ಲ. ಸುಭದ್ರಗೊಳಿಸಿದ್ದೇ ಆಗಿದ್ದಲ್ಲಿ ದೇಶದ ಸಾಂಸ್ಕೃತಿಕ ಸಂಪತ್ತು ಗಡಿ ದಾಟುವುದಾದರೂ ಹೇಗೆ ಸಾಧ್ಯವಿತ್ತು?




ವರ್ಷ ವರ್ಷವೂ ಲೂಟಿಯಾಗುತ್ತಿರುವ ಈ ಸಾವಿರಾರು ಪ್ರಾಚ್ಯ ವಿಗ್ರಹಗಳು- ಕಲಾಕೃತಿಗಳ ಜೊತೆಯಲ್ಲಿ ಫೋಟೋ ತೆಗೆಯಿಸಿಕೊಳ್ಳುವ ನೇರವಂತಿಕೆಯನ್ನೂ ಆಳುವವರು ತೋರಬೇಕಲ್ಲವೇ?

ಭಾರತವನ್ನು ಆಳಿದ ಬ್ರಿಟಿಷರು ಪುರಾತನ ಸಾಂಸ್ಕೃತಿಕ ಸಂಪತ್ತನ್ನೂ ಭಾರೀ ಪ್ರಮಾಣದಲ್ಲಿ ಲೂಟಿ ಹೊಡೆದರು.

ಹೊರದೇಶಗಳಿಗೆ ಮಾಡಲಾಗುತ್ತಿರುವ ಭಾರತದ ಸಾಂಸ್ಕೃತಿಕ ಸಂಪತ್ತಿನ ಸತತ ಕಳ್ಳಸಾಗಣೆ ಈಗಲೂ ನಿಂತಿಲ್ಲ. ಅಮೆರಿಕೆ ನಡೆಸಿರುವ ತನಿಖೆಯ ಪ್ರಕಾರ ಕಳ್ಳದಾರಿಯಲ್ಲಿ ಭಾರತದಿಂದ ಅಮೆರಿಕೆಯನ್ನು ತಲುಪಿರುವ ಭಾರತೀಯ ಪ್ರಾಚೀನ ವಿಗ್ರಹಗಳ ಸಂಖ್ಯೆ ಹತ್ತಾರು ಸಾವಿರ!

ಭಾರತ ಸರ್ಕಾರದ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (ಎನ್.ಸಿ.ಆರ್.ಬಿ) ಅಂಕಿ ಅಂಶಗಳ ಪ್ರಕಾರ 2014–20121ರ ನಡುವೆ ಆಮೆರಿಕೆ, ಕೆನಡಾ, ಆಸ್ಟ್ರೇಲಿಯ, ಸಿಂಗಪುರ, ಜರ್ಮನಿ, ಇಂಗ್ಲೆಂಡ್ ನಿಂದ ಹಿಂತಿರುಗಿಸಲಾದ ಒಟ್ಟು ಪ್ರಾಚೀನ ವಿಗ್ರಹಗಳು ಕೇವಲ 200.ದೇಶದಿಂದ ಹೊರಕ್ಕೆ ಕಳ್ಳಸಾಗಣೆ ಮಾಡಲಾಗಿರುವ ವಿಗ್ರಹಗಳು ಮತ್ತು ಕಲಾಕೃತಿಗಳ ಪೈಕಿ ಬಹಳಷ್ಟು ಈವರೆಗೂ ಪತ್ತೆಯಾಗಿಲ್ಲ. 2018–19ರ ಸಾಲಿನಲ್ಲಿ ಕೇವಲ ತಮಿಳುನಾಡೊಂದರಿಂದಲೇ 1,200 ಪ್ರಾಚೀನ ಮೂರ್ತಿಗಳನ್ನು ಕದಿಯಲಾಯಿತು ಎನ್ನುತ್ತವೆ ಸರ್ಕಾರಿ ಮೂಲಗಳು. ಇದೇ ಅವಧಿಯಲ್ಲಿ ದೇಶದೆಲ್ಲೆಡೆಯ 3,676 ಸಂರಕ್ಷಿತ ಸ್ಮಾರಕಗಳಿಂದ ಕದಿಯಲಾದ ಕಲಾಕೃತಿಗಳು 4,408. ಈ ಪೈಕಿ ವಲ 1,493 ಕಲಾಕೃತಿಗಳನ್ನು ಮಾತ್ರ ಪೊಲೀಸರು ಪತ್ತೆ ಮಾಡಿದರು. ಉಳಿದವುಗಳು ಜಗತ್ತಿನ ನಾನಾ ಭಾಗಗಳ ಹರಾಜು ಸದನಗಳನ್ನು ತಲುಪಿವೆ.




ಎಸ್. ವಿಜಯಕುಮಾರ್ ನೌಕಾ ಉದ್ಯಮಿ ಭಾರತೀಯ ಕಲಾ ಆರಾಧಕ. ಭಾರತೀಯ ಕಲಾ ಸಂಪತ್ತಿನ ಕೊಳ್ಳೆಯನ್ನು ತಡೆಯಲು ಭಾರತ ಮತ್ತು ಅಮೆರಿಕೆಯ ಸರ್ಕಾರಗಳೊಂದಿಗೆ ಕೈಜೋಡಿಸಿದಾತ.

ಪ್ರಸಿದ್ಧ ವಸ್ತುಸಂಗ್ರಹಾಲಯಗಳು, ಹರಾಜು ಸದನಗಳು, ಕಲಾ ಸಂಗ್ರಹಕಾರರೊಂದಿಗೆ ಶಾಮೀಲಾಗಿರುವ ಜಗತ್ತಿನ ಸಂಘಟಿತ ಪಾತಕ ಜಾಲ ಈ ಹಗಲುದರೋಡೆಯ ಹಿಂದಿದೆ. ಈ ಪಾತಕಿಗಳ ಜಾಲವನ್ನು ಹರಿದೊಗೆಯುವ ಪ್ರಯತ್ನದ ಹಿಂದೆ ವಿಜಯಕುಮಾರ್ ಅವರ ಶ್ರಮವಿದೆ. ಭಾರತದ ದೇವಾಲಯಗಳ ಕೊಳ್ಳೆಯ ಅಸಲು ಕತೆಯೇನು ಎಂಬ ಕುರಿತ ಖಜಒಟ ಖುಜಜಿ ಎಂಬ ಪುಸ್ತಕದ ಲೇಖಕ.

ಜಾಗತಿಕ ಕಲೆ ಮತ್ತು ಪ್ರಾಚ್ಯ ಕಲಾಕೃತಿಗಳ ಮಾರುಕಟ್ಟೆಯ ಖರೀದಿದಾರರು ಭಾರತವನ್ನು ಪ್ರಾಚ್ಯಕಲಾಕೃತಿಗಳ ಗಣಿ ಎಂದು ಬಗೆಯುತ್ತಾರೆ. ಗಣಿಗಾರಿಕೆ ಮಾಡುವುದು ಅವರ ಉದ್ದೇಶ ಎನ್ನುತ್ತಾರೆ ವಿಜಯಕುಮಾರ್.

ಭಾರತದಿಂದ ಪ್ರತಿವರ್ಷ ಸಾವಿರ ಪುರಾತನ ಕಲಾಕೃತಿಗಳನ್ನು ದೇವಸ್ಥಾನಗಳಿಂದ ಕದ್ದು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ತಲುಪಿಸಲಾಗುತ್ತಿದೆ. ಈ ಪೈಕಿ ವರದಿಯಾಗುತ್ತಿರುವ ಕಳವುಗಳ ಪ್ರಮಾಣ ಕೇವಲ ಶೇ.5.

ಭಾರತದ ವಸ್ತುಸಂಗ್ರಹಾಲಯಗಳು ಮತ್ತು ದೇವಾಲಯಗಳಿಂದ ಕದಿಯಲಾಗುವ ವಿಗ್ರಹಗಳು ಮತ್ತು ಕಲಾಕೃತಿಗಳನ್ನು ನಾನಾ ದೇಶಗಳಿಗೆ ಸಾಗಿಸಲಾಗುತ್ತದೆ. ಜಾಗತಿಕ ಖ್ಯಾತಿಯ ಹರಾಜು ಸದನಗಳು ನಡೆಸುವ ಹರಾಜಿಗೆ ಕಳಿಸಿಕೊಡಲಾಗುತ್ತದೆ. ಹೀಗೆ ಕದ್ದ ಕಲಾಕೃತಿಗಳ ದಾಖಲೆ ದಸ್ತಾವೇಜುಗಳಿರುವುದಿಲ್ಲ, ಹೀಗಾಗಿ ಅವುಗಳ ವಿವರಗಳು ಕಳೆದು ಹೋದಂತೆಯೇ ಸರಿ ಎನ್ನುತ್ತಾರೆ ವಿಜಯಕುಮಾರ್.

ವಿಶ್ವದ ಅತಿದೊಡ್ಡ ಕಲೆ ಮತ್ತು ಪ್ರಾಚ್ಯ ಕಲಾಕೃತಿಗಳ ಮಾರುಕಟ್ಟೆ ಅಮೆರಿಕಾ (ಶೇ.29.5). ಬ್ರಿಟನ್ನಿನದು ಎರಡನೆಯ ಸ್ಥಾನ (ಶೇ.28.5). ಮೂರನೆಯ ದೊಡ್ಡ ಮಾರುಕಟ್ಟೆ ಚೀನಾ ದೇಶ (ಶೇ.18). ಪ್ರಾಚ್ಯ ಕಲಾಕೃತಿಗಳ ಕಾಳಸಂತೆ ಸಕ್ರಿಯವಾಗಿದೆಯೆಂದು ಶೇ.99ರಷ್ಟು ಪ್ರಾಚ್ಯವಸ್ತು ತಜ್ಞರು ಹೇಳುತ್ತಾರೆ. ಕಪ್ಪುಹಣವನ್ನು ಬಿಳಿಯ ನಗದನ್ನಾಗಿ ಬದಲಾಯಿಸಲು ಈ ಮಾರುಕಟ್ಟೆಯನ್ನು ಬಳಸಲಾಗುತ್ತಿದೆ. ಇದೇ ಮಾರುಕಟ್ಟೆಯಿಂದ ಭಯೋತ್ಪಾದನೆಗೆ ಹಣ ಪೂರೈಕೆ ಮಾಡಲಾಗುತ್ತದೆ. ನಿರ್ದಿಷ್ಟ ಪ್ರಾಚ್ಯ ಕಲಾಕೃತಿಯೊಂದನ್ನು ಮಾರಿದರೆ ಎಷ್ಟು ಬಂದೂಕಗಳಿಗೆ ಹಣ ಹೊಂದಿಸಿಕೊಳ್ಳಬಹುದೆಂಬ ಲೆಕ್ಕಾಚಾರ ನಡೆಯುತ್ತದೆ. ಹೀಗಾಗಿ ಅಮೆರಿಕೆ ಈ ಮಾರುಕಟ್ಟೆಯ ಮೇಲೆ ದಾಳಿ ನಡೆಸತೊಡಗಿದೆ. ಭಾರೀ ಶ್ರೀಮಂತರು ಸ್ವಿಸ್ ಬ್ಯಾಂಕುಗಳಲ್ಲಿ ಹಣವನ್ನಿಡುವ ಬದಲು ಪ್ರಾಚ್ಯ ಕಲಾಕೃತಿಗಳ ಮೇಲೆ ಹೂಡಿಕೆ ಮಾಡುತ್ತಿದ್ದಾರೆ.



ವ್ಯವಸ್ಥಿತ ಸಮೀಕ್ಷೆ ನಡೆಸಿ ವಿಗ್ರಹಕಳ್ಳರ ಮೂಲಕ ವಿಗ್ರಹಗಳ ಕಳವು ಮಾಡಿಸಿದ ಆಪಾದನೆಗಳನ್ನು ವಿಶ್ವದ ಪ್ರಸಿದ್ಧ ಹರಾಜು ಮಾರುಕಟ್ಟೆ ಸೋತೆಬೀಸ್ ಮೇಲಿದೆ. ಕದ್ದ ಮೂರ್ತಿಗಳನ್ನು ಸಾಗಿಸಿ ಅವುಗಳ ಜಾಗದಲ್ಲಿ ನಕಲಿ ಮೂರ್ತಿಗಳನ್ನು ಇಟ್ಟಿರುವ ಪ್ರಕರಣಗಳೂ ಹೇರಳ.



ತಮಿಳುನಾಡಿನ ಪ್ರಸಿದ್ಧ ಕಂಚಿನ ನಟರಾಜ ವಿಗ್ರಹವನ್ನು (56 ಲಕ್ಷ ಡಾಲರುಗಳ ಮಾರುಕಟ್ಟೆ ಮೌಲ್ಯ) ವಿಲಾಸೀಸೌಧದ ಅಂಗಳದ ಉದ್ಯಾನದ ಪೀಠೋಪಕರಣವೆಂಬ ಹೆಸರಿನಲ್ಲಿ ಕಳ್ಳಸಾಗಣೆದಾರರು ಅಮೆರಿಕೆಯೊಳಕ್ಕೆ ಸಾಗಿಸಿದ್ದರು. ಭಾರತೀಯ ದೇವಾನುದೇವತೆಗಳು ವಿದೇಶಗಳಲ್ಲಿನ ಈಜುಕೊಳಗಳ ದಂಡೆಯನ್ನು ಅಲಂಕರಿಸುತ್ತಿವೆ.

1979–1989ರ ನಡುವಿನ ಹತ್ತು ವರ್ಷಗಳಲ್ಲಿ 50 ಸಾವಿರಕ್ಕೂ ಹೆಚ್ಚು ಪ್ರಾಚೀನ ಕಲಾಕೃತಿಗಳನ್ನು ಭಾರತದಿಂದ ಹೊರಕ್ಕೆ ಕದ್ದು ಸಾಗಿಸಲಾಯಿತೆಂದು ಯುನೆಸ್ಕೋ ಅಂದಾಜು ಮಾಡಿದೆ.

ಕೋಹಿನೂರ್ ವಜ್ರ, ಕ್ರಿಸ್ತಪೂರ್ವ ಮೂರನೆಯ ಶತಮಾನದ ಅಮರಾವತಿ ಸ್ತೂಪ, ಟಿಪ್ಪು ಸುಲ್ತಾನನ ಮರದ ಹುಲಿಯಂತಹ ಅಮೂಲ್ಯ ಸಂಪತನ್ನು ವಾಪಸು ತೆಗೆದುಕೊಳ್ಳುವಲ್ಲಿ ಭಾರತ ಸಫಲವಾಗಿಲ್ಲ. ಆಗುವ ಸೂಚನೆಗಳೂ ಇಲ್ಲ. ಕರ್ನಲ್ ಮೆಕೆಂಜಿ ಎಂಬಾತನು ಸಂಗ್ರಹಿಸಿದ 6,218 ಪುರಾತನ ನಾಣ್ಯಗಳು, 106 ಚಿತ್ರಗಳು, 40 ಪ್ರಾಚೀನ ಕಲಾಕೃತಿಗಳು, 1,568 ಹಸ್ತಪ್ರತಿಗಳು, ದೇವಾಲಯಗಳ ತಾಮ್ರಪತ್ರಗಳು 1828ರಲ್ಲಿ ಆತನ ಮರಣದ ನಂತರ ಲಂಡನ್ ತಲುಪಿದವು.



ಕೊಹಿನೂರ್ ಜೊತೆಗೆ ಶಹಜಹಾನ್ ಚಕ್ರವರ್ತಿ ಬಳಸುತ್ತಿದ್ದ ಅಮೂಲ್ಯ ಮಧುಬಟ್ಟಲು ಈಗಲೂ ವಿಕ್ಟೋರಿಯಾ–ಆಲ್ಬರ್ಟ್ ವಸ್ತುಸಂಗ್ರಹಾಲಯದಲ್ಲಿದೆ. ಏಳನೆಯ ಶತಮಾನದ ಸುಲ್ತಾನ್ ಗಂಜ್ ಬುದ್ಧನ ಸುಂದರ ಮೂರ್ತಿ ಬರ್ಮಿಂಗ್ ಹ್ಯಾಮ್ ವಸ್ತುಸಂಗ್ರಹಾಲಯದಲ್ಲಿದೆ. 1849ರ ಆಂಗ್ಲ–ಸಿಖ್ ಯುದ್ಧ ಗೆದ್ದ ಬ್ರಿಟಿಷರು ಕೊಹಿನೂರ್ ವಜ್ರವನ್ನು ವಶಪಡಿಸಿಕೊಂಡರು. ಕೋಹಿನೂರ್ ವಜ್ರವನ್ನು ಈಗಲೂ ಲಂಡನ್ ಟವರ್ ನಲ್ಲಿ ಇರಿಸಲಾಗಿದ್ದು ಭಾರೀ ಆಕರ್ಷಣೆಯ ಕೇಂದ್ರವಾಗಿದೆ. ಬೆಲೆಬಾಳುವ ಬಂಗಾರದ ಹಾಳೆಗಳನ್ನು ಹೊದಿಸಿರುವ ಮಹಾರಾಜಾ ರಣಜಿತ್ ಸಿಂಗ್ ಕುಳಿತುಕೊಳ್ಳುತ್ತಿದ್ದ ಸಿಂಹಾಸನವನ್ನೂ ಬ್ರಿಟಿಷರು ಆಂಗ್ಲ–ಸಿಖ್ ಯುದ್ಧದ ನಂತರ ತಮ್ಮ ವಶಕ್ಕೆ ಪಡೆದರು. ಟಿಪ್ಪು ಸುಲ್ತಾನನಿಂದ ವಶಪಡಿಸಿಕೊಂಡ 18ನೆಯ ಶತಮಾನದ ಯಾಂತ್ರೀಕೃತ ಗೊಂಬೆ ಟಿಪ್ಪೂವಿನ ಹುಲಿ ((ಖಿಠಿಣ' ಖಿಂಜಡಿ) ಲಂಡನ್ ನ ಆಲ್ಬರ್ಟ್ ಮ್ಯೂಸಿಯಂನಲ್ಲಿದೆ.

ಬ್ರಿಟಿಷರು ಕಾನೂನಿನ ಪ್ರಕಾರ ಹೊಡೆದ ಈ ಕೊಳ್ಳೆಯು ಅವರು ಭಾರತವನ್ನು ತೊರೆದ ನಂತರ ಕಾನೂನುಬಾಹಿರ ಲೂಟಿ ಎನಿಸಿಕೊಂಡಿತು. ಆದರೆ ಅವ್ಯಾಹತವಾಗಿ ಮುಂದುವರೆಯಿತು. ಬ್ರಿಟಿಷರು ಖಾಲಿ ಮಾಡಿದ ಜಾಗವನ್ನು ಭಾರತೀಯ ಕಳ್ಳಸಾಗಣೆದಾರರು ತುಂಬಿದ್ದಾರೆ ಅಷ್ಟೇ. ಸುಭಾಷ್ ಕಪೂರ್, ದೀನದಯಾಳನ್, ವಿಜಯ್ ನಂದಾ ಹೆಸರುಗಳು ದಶಕಗಳಿಂದ ತನಿಖೆಗೆ ಒಳಪಟ್ಟಿವೆ.

1965–1970ರ ನಡುವೆ ಖಜುರಾಹೋ ನಿಂದ 100 ಕಾಮೋತ್ತೇಜಕ ಪ್ರತಿಮೆಗಳನ್ನು ಕದ್ದು ವಿದೇಶಕ್ಕೆ ಸಾಗಿಸಲಾಯಿತು. ಜೈಪುರ ಅರಮನೆಯ ವಸ್ತುಸಂಗ್ರಹಾಲಯದಿಂದ 2,492 ಚಿತ್ರಕಲಾಕೃತಿಗಳು ಕಾಣೆಯಾದವು. 1968ರಲ್ಲಿ ದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಿಂದ 125 ಪ್ರಾಚೀನ ಆಭರಣಗಳು ಮತ್ತು 32 ಅಪರೂಪದ ಚಿನ್ನದ ನಾಣ್ಯಗಳು ಕಳವಾದವು.

ಕೊಹಿನೂರ್ ವಜ್ರ ಮತ್ತು ಅಮರಾವತಿ ಸ್ತೂಪದಂತಹ ಅಪಾರ ಬೆಲೆಬಾಳುವ ಪ್ರಾಚ್ಯವಸ್ತುಗಳನ್ನು ಹಿಂದಿರುಗಿಸಬೇಕೆಂಬ ಬೇಡಿಕೆಯನ್ನು ಬ್ರಿಟನ್ ತಿರಸ್ಕರಿಸಿದೆ. 2013ರಲ್ಲಿ ಬ್ರಿಟನ್ನಿನ ಅಂದಿನ ಪ್ರಧಾನಿ ಡೇವಿಡ್ ಕೆಮರೂನ್ ಭಾರತಕ್ಕೆ ಭೇಟಿ ನೀಡಿದ್ದರು. ಕೊಹಿನೂರ್ ವಜ್ರವನ್ನು ವಾಪಸು ಮಾಡಬೇಕೆಂಬ ಬೇಡಿಕೆಯನ್ನು ಅವರು ನಿಚ್ಚಳವಾಗಿ ತಳ್ಳಿ ಹಾಕಿದ್ದರು. ಹಾಗೆ ವಾಪಸು ಮಾಡಲು ಹೊರಟರೆ ಬ್ರಿಟಿಷ್ ವಸ್ತುಸಂಗ್ರಹಾಲಯಗಳು ಬರಿದಾಗಿ ಭಣಗುಡುತ್ತವೆ ಎಂದು ಉದ್ಗರಿಸಿದ್ದರು.

ದೇಶದ ಐತಿಹಾಸಿಕ ಸಂಪತ್ತಿನ ಕಳವನ್ನು ತಡೆಯಲು ಬಲಿಷ್ಠ ಕಾಯಿದೆಗಳಿಲ್ಲ ಎನ್ನಲಾಗಿದೆ. 1972ರ ಪ್ರಾಚೀನ ವಸ್ತುಗಳು ಮತ್ತು ಕಲಾಭಂಡಾರಗಳ ಕಾಯಿದೆಯು ನೂರು ವರ್ಷಗಳಷ್ಟು ಹಳೆಯದು. ಈ ಕಾಯಿದೆಯ ಉಲ್ಲಂಘನೆಗೆ ನೀಡಲಾಗುವ ಗರಿಷ್ಠ ಶಿಕ್ಷೆ ಆರು ವರ್ಷಗಳವರೆಗಿನ ಜೈಲುವಾಸ ಮತ್ತು ಮೂರು ಸಾವಿರ ರುಪಾಯಿಗಳ ದಂಡ. ಆದರೆ ಪ್ರಾಚೀನ ವಿಗ್ರಹಗಳು ಮತ್ತು ಕಲಾಕೃತಿಗಳ ಕಳ್ಳಸಾಗಣೆದಾರರು ಅಪಾರ ಪ್ರಮಾಣದ ಹಣವನ್ನು ಗಳಿಸುತ್ತಿದ್ದಾರೆ. ಈ ಮೊತ್ತವನ್ನು ಆರು ಶತಕೋಟಿ ಡಾಲರುಗಳೆಂದು ಅಂದಾಜು ಮಾಡಲಾಗಿದೆ. ಶತಕೋಟಿ ಡಾಲರುಗಳು 10 ಸಾವಿರ ಲಕ್ಷ ರುಪಾಯಿಗಳಿಗೆ ಸಮ. ಈ ಸಾಂಸ್ಕೃತಿಕ ಸಂಪತ್ತನ್ನು ಸಂರಕ್ಷಿಸಬೇಕಿದ್ದರೆ ಎಲ್ಲ ಪ್ರಾಚೀನ ಕಲಾಕೃತಿಗಳ ಒಂದು ರಾಷ್ಟ್ರೀಯ ಯಾದಿಯನ್ನು ತಯಾರು ಮಾಡಬೇಕಿದೆ. ಇವುಗಳ ಕಳ್ಳಸಾಗಣೆಯನ್ನು ತಡೆಯಲು ವಿಶೇಷ ಕಾರ್ಯದಳವನ್ನು ರಚಿಸಬೇಕಿದೆ ಎಂಬುದು ತಜ್ಞರ ಅಭಿಮತ. ನಮ್ಮ ಸಂಸ್ಕೃತಿ ಮತ್ತು ಪರಂಪರೆ ಕುರಿತು ಬರಿದೇ ಭಾರೀ ಸದ್ದು ಮಾಡುವ ನಾವು ಅದರ ಸಂರಕ್ಷಣೆಗೆ ಏನನ್ನೂ ಮಾಡುತ್ತಿಲ್ಲ, ಅದೊಂದು ಆದ್ಯತೆಯ ವಿಷಯವೇ ಆಗಿಲ್ಲ ಎನ್ನುತ್ತಾರೆ ಖಒಓಖಿಂಅಊ ಸಂಸ್ಥೆಯ ನಿರ್ದೇಶಕ ವಿಜಯ ಅಮುಜುರೆ.





# ಬೆಲೆ ಏರಿಕೆಯಾದರೂ ಈ ಮೌನ ಯಾಕೆ?


## ವಿಶ್ವ ರಾಜಕೀಯ ಸಂಘರ್ಷಕ್ಕೆ ಬೆಲೆ ಏರಿಕೆ ಬಿಸಿ

● ತುರುವನೂರು ಮಂಜುನಾಥ

ಪ್ರತಿ ದಿನ ತೈಲ ಬೆಲೆ ಏರುತ್ತಲೇ ಇದೆ . ಇದಕ್ಕೆ ಕಾರಣವೇನಿರಬಹುದು ?? ಯುದ್ಧ ಎನ್ನುವುದು ಸಿದ್ದ ಉತ್ತರ. ಯುದ್ಧವೊಂದೇ ಕಾರಣವಲ್ಲ. ಯುದ್ಧವಿಲ್ಲದ ಸಮಯದಲ್ಲಿ ಕೂಡ ತೈಲ ಬೆಲೆ ಹೆಚ್ಚಾಗಿತ್ತು ಎನ್ನುವುದನ್ನ ಮರೆಯಬಾರದು.


ಕೇವಲ ತೈಲ ಬೆಲೆ ಮಾತ್ರವಲ್ಲ ಅಡುಗೆ ಎಣ್ಣೆ 200 ಗಡಿ ದಾಟಿದೆ, ಔಷಧಿಗಳ ಬೆಲೆ ಏರಿಕೆಯಾಗುತ್ತಿದೆ, ರಾಜ್ಯದಲ್ಲಿ ವಿದ್ಯುತ್ ದರ ಏರಿಕೆಯಾಗುತ್ತಿದೆ..ಎಲ್ಲವೂ ಬೆಲೆ ಏರಿಕೆಯಾಗುತ್ತಲೆ ಇದೆ ಆದರೆ ಪ್ರತಿಪಕ್ಷಗಳು ನೆಪ ಮಾತ್ರಕ್ಕೆ ಅಲ್ಲೊಂದು ಇಲ್ಲೊಂದು ಪ್ರತಿಭಟನೆ ಮಾಡಿ ತಮ್ಮ ಮಾನ ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿವೆ.ಯಾಕೆ ಪ್ರಭಲವಾಗಿ ಆಡಳಿತ ಪಕ್ಷದ ವಿರುದ್ಧ ಬೆಲೆ ಏರಿಕೆಯ ನೆಪದಲ್ಲಿ ಪ್ರತಿಭಟಿಸಬಾರದು ಈಗ ಆ ಶಕ್ತಿ ಕುಂದಿದೆ ಓಟಿನ ಮರ್ಜಿಗಾದರೂ ಕೆರಳಬೇಕಿದ್ದ ಪ್ರತಿಪಕ್ಷ ಬಹುತೇಕ ತಮ್ಮ ಅಸ್ತ್ರಗಳನ್ನು ಕೆಳಗಿಳಿಸಿದಂತೆ ಕಾಣುತ್ತಿದೆ.

ಒಂದು ಕಾಲದಲ್ಲಿ 1 ರೂಪಾಯಿ ಬೆಲೆ ಏರಿಕೆಯಾಗಿದ್ದಾಗ ದೇಶಾದ್ಯಂತ ಉಗ್ರ ಪ್ರತಿಭಟನೆಗೆ ಇಳಿದಿದ್ದವು, ಕೇವಲ 10 ಪೈಸೆ ದೋಸೆ ಹೆಚ್ಚಾಗಿದ್ದಕ್ಕೆ ರಾಜ್ಯಾದ್ಯಂತ ದೊಡ್ಡ ಪ್ರತಿಭಟನೆಗಳು ನಡೆದಿದ್ದವು ಈಗ ಕಳೆದ ಒಂದು ವಾರದಲ್ಲಿ ಆರು ರೂಪಾಯಿ ಪೆಟ್ರೋಲ್ ಬೆಲೆ ಹೆಚ್ಚಾಗಿದೆ. 40 ರೂ ಅಡಿಗೆ ಅನಿಲ ಹೆಚ್ಚಾಗಿದೆ. 50 ರೂ ಅಡಿಗೆ ಎಣ್ಣೆ ಹೆಚ್ಚಾಗಿದೆ. ಈಗ ವಿದ್ಯುತ್ ಬೆಲೆಯೂ ಹೆಚ್ಚಾಗುತ್ತಿದೆ ಇದರ ಜೊತೆಗೆ ಔಷಧಿಯ ಬೆಲೆ ಹೆಚ್ಚಾಗುತ್ತಿದೆ ಹೀಗಿದ್ದರೂ ಪ್ರತಿಭಟನೆ ಯಾಕೆ ಮಾಡುತ್ತಿಲ್ಲ ಆಳುವ ಪಕ್ಷಗಳನ್ನು ಈ ಮೂಲಕ ಕಟ್ಟಿಯಾಕುವ ಪ್ರಯತ್ನಗಳು ಯಾಕೆ ಆಗುತ್ತಿಲ್ಲ ಎನ್ನುವ ಬೇಸರವೂ ಜನರಲ್ಲಿ ಇದೆ. ಸಾರ್ವಜನಿಕ ಸಂಘಟನೆಗಳೇ ಈಗ ಪ್ರತಿಭಟನೆಗಿಳಿಯುವ ಕಾಲ ಬಂದಿದೆ. ಒಂದು ಕಾಲದಲ್ಲಿ ಕಮ್ಯೂನಿಷ್ಟ್ ಪಕ್ಷ ಇಂತ ಸಂದರ್ಭವನ್ನು ಉಪಯೋಗಿಸಿಕೊಂಡು ಆಳುವ ಪಕ್ಷಗಳನ್ನು ಮುಜುಗರಕ್ಕೆ ತಳ್ಳುವ ಪ್ರಯತ್ನಗಳು ನಡೆದಿದ್ದವು




ಆದರೆ ಯಾಕೆ ಈಗ ಆ ಪಕ್ಷಗಳು ಮೌನ ವಹಿಸಿವೆ?

ಇವೆಲ್ಲವಕ್ಕೂ ಈಗ ಜನರ ಮನೋಸ್ಥಿತಿ ಬದಲಾಗಿದೆ. “ನಮಗೇಕೆ ಉಸಾಬರಿ” ಎನ್ನುವ ಮೂಲಕ ಮೌನ ವಹಿಸಿವೆ ಆದರೆ ಈ ದೇಶದಲ್ಲಿ 60 ವರ್ಷ ಸುದೀರ್ಘವಾಗಿ ಆಳಿದ ಕಾಂಗ್ರೆಸ್ ಪಕ್ಷ ಪ್ರತಿಪಕ್ಷವಾಗಿ ಪ್ರಭಲವಾಗಿ ಇಲ್ಲದಿರುವುದೇ ಇಂತ ಪರಿಸ್ಥಿತಿಗೆ ಕಾರಣವಾಗಿದೆ. ಒಂದು ವೇಳೆ ಆಳುವ ಪಕ್ಷ ಕಾಂಗ್ರೆಸ್ ಆಗಿದ್ದು ಪ್ರತಿಪಕ್ಷ ಬಿಜೆಪಿಯಾಗಿದ್ದರೆ ಇಷ್ಟೊತ್ತಿಗೆ ಇಡೀ ದೇಶದಲ್ಲಿ ದೊಡ್ಡ ಪ್ರತಿಭಟನೆ ಮೂಲಕ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ಹರಾಜು ಆಕುತ್ತಿತ್ತು. ದುರದೃಷ್ಟ ವಶಾತ್ ಈ ಎರಡು ಪಕ್ಷಗಳು ಈಗ ತದ್ವಿರುದ್ದವಾಗಿವೆ ಹಾಗಾಗಿ ಪ್ರತಿಪಕ್ಷವಾಗಿರುವ ಕಾಂಗ್ರೆಸ್ ಕೈನಲ್ಲಿ ಶಕ್ತಿ ಇಲ್ಲ ಮನೋಸ್ಥಿತಿ ಇಲ್ಲ ಬದಲಾಗಿ ಒಗ್ಗಟ್ಟು ಇಲ್ಲ ಇಂತ ಅವಕಾಶವನ್ನು ಉಪಯೋಗಿಸಿಕೊಳ್ಳುವ ಸಾಮರ್ಥ್ಯವೂ ಇಲ್ಲ ಹೀಗಾಗಿ ಜನರು ಇವೆಲ್ಲವನ್ನು ಕಷ್ಟದಲ್ಲಿಯೇ ಅನುಭವಿಸಬೇಕಾಗುತ್ತದೆ.



ಅದರೆ ಒಂದು ಸತ್ಯ ಹೀಗೆ ರಾಜಕಾರಣಿಗಳ ಧೋರಣೆಗಳು, ಆಳುವ ಪಕ್ಷಗಳ ಬೆಲೆ ಏರಿಕೆ ನಿಯಂತ್ರಣ ಮಾಡದೆ ಉದ್ಧಟತನ ತೋರಿಸಿದರೆ ಜನರಂತೂ ಬೀದಿಗಿಳಿದು ಹೋರಾಟ ಮಾಡುತ್ತಾರೆ ಅಂತ ಕಾಲ ದೂರವಿಲ್ಲ ಇನ್ನು ಕೆಲವೇ ದಿನಗಳಲ್ಲಿ ಸಾರ್ವಜನಿಕರು ಇಂತ ಅಕ್ರೋಶವನ್ನು ವ್ಯಕ್ತಪಡಿಸುತ್ತಾರೆ ಎನ್ನುವುದನ್ನು ಮರೆಯಬಾರದು.

ಈಗ ಒಂದು ರೀತಿ ಬಡಜನರ ಬದುಕು ದುಸ್ತರವಾಗಿದೆ ಕೊರೊನಾ ಕಾಲದಲ್ಲಿ ಸಂಕಷ್ಟದಲ್ಲಿದ್ದ ಜನರು ಇದೀಗ ತಾನೆ ಚೇತರಿಸಿಕೊಳ್ಳುತ್ತಿರುವಾಗಲೆ ದಿನನಿತ್ಯದ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕು ಮತ್ತಷ್ಟು ದುಸ್ತರವಾಗುತ್ತಿದೆ. ಆದರೆ ಆಳುವ ಪಕ್ಷ ಇದರ ಬಗ್ಗೆ ಒಂದಿಷ್ಟು ಕನಿಕರವಿಲ್ಲದಂತೆ ಇದು ನಮಗೆ ಸಂಬಂಧವಿಲ್ಲದಂತೆ ರಷ್ಯಾ ಉಕ್ರೇನ್ ಯುದ್ಧದ ಪರಿಣಾಮ ಬೆಲೆ ಏರಿಕೆಯಾಗಿದೆ ಎನ್ನುವ ನೆಪ ಹೇಳಿಕೊಂಡು ಧರ್ಮ ಯುದ್ಧದವನ್ನು ಮಾಡುತ್ತಾ ಅಸ್ವಾದಿಸುತ್ತಿದೆ.

ತೈಲಬೆಲೆಗೆ ಹಾಕಿರುವ ಸ್ವಿಸ್ ಅನ್ನು ಕಡಿಮೆ ಮಾಡಿದರೆ ತೆರಿಗೆಯನ್ನು ಕಡಿತಗೊಳಿಸಿದರೆ ಸಹಜವಾಗಿಯೇ ತೈಲ ಬೆಲೆ ಕಡಿಮೆಯಾಗುತ್ತದೆ ಎನ್ನುವ ಅರಿವು ಇದ್ದರೂ ಕೂಡ ಒಂದು ವೇಳೆ ಸ್ವಿಸ್ ಕಡಿತಗೊಳಿಸಿದರೆ ಆಳುವ ಸರ್ಕಾರದ ಮೇಲೆ ಆರ್ಥಿಕ ಪರಿಣಾಮ ಬೀರುತ್ತದೆ ಎನ್ನುವ ಕಾರಣಕ್ಕೆ ಬಡವರ ಕಣ್ಣೀರನ್ನು ಒರಿಸುವ ಬದಲು ತಮ್ಮ ಸ್ಥಾನದ ಭದ್ರತೆಯನ್ನು ಕಾಪಾಡಿಕೊಳ್ಳುತ್ತಿವೆ ಎಂದರೆ ಇದೆಂಥಾಸರ್ಕಾರ ಈ ಸರ್ಕಾರಗಳಿಗೆ ಬಡವರ ಬದುಕಿಗಿಂತ ತಮ್ಮ ಆಡಳಿತದ ಭದ್ರತೆಯೇ ಮುಖ್ಯವಾಗಿದೆ. ತಮ್ಮ ಆರ್ಥಿಕ ಪರಿಸ್ಥಿತಿಯೇ ಮುಖ್ಯವಾಗಿದೆ ಇಂತ ಮನೋಸ್ಥಿತಿ ಇರುವ ಪಕ್ಷಗಳು ನಗೆ ಬೇಕೆ ಯಾವುದೇ ಪಕ್ಷವಾಗಲಿ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಆದರೆ ಎಲ್ಲಿ ಸ್ಪಂದಿಸುತ್ತಿವೆ ಎಲ್ಲೋ ಒಂದು ಕಡೆ ರೈತರಿಗೆ ಹಣ ಹಾಕಿ ರೈತರ ಪರ ಎಂದರೆ ಸಾಲದು ದಿನ ನಿತ್ಯ ಬದುಕುವ ಕೈಗಳಿಗೆ ಕೆಲಸ ಕೊಡಬೇಕು, ಹಾಗೆ ಕೆಲಸಕೊಟ್ಟು ಬೆಲೆ ಏರಿಕೆಯನ್ನು ಹೊರೆಯಾಗಿ ಮಾಡಬಾರದು ಬೆಲೆ ಏರಿಕೆಗೆ ಕಡಿವಾಣ ಹಾಕದಿದ್ದರೆ ಇನ್ನು ಬಡವರ ಬದುಕು ಹದಗೆಟ್ಟು ಬೀದಿ ಬೀದಿಯಲ್ಲಿ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಲೂ ಬಹದು.

### ಪಂಚರಾಜ್ಯ ಚುನಾವಣೆ ಮುಗಿಯುತ್ತಿದ್ದಂತೆ ಬೆಲೆ ಏರಿಕೆ ಬಿಸಿ

ಪಂಚರಾಜ್ಯ ವಿಧಾನಸಭೆ ಚುನಾವಣೆಗೆ ಮುನ್ನ ನವೆಂಬರ್ 4 ರಿಂದ ಬೆಲೆ ತಟಸ್ಥವಾಗಿತ್ತು. ಈ ಅವಧಿಯಲ್ಲಿ ಕಚ್ಚಾ ವಸ್ತುಗಳ (ಕಚ್ಚಾ ತೈಲ) ಬೆಲೆ ಪ್ರತಿ ಬ್ಯಾರೆಲ್ಗೆ ಸುಮಾರು ಯುಎಸ್‌ಡಿ 30 ರಷ್ಟು ಏರಿಕೆಯಾಗಿದೆ.

● 10ನೇ ಪುಟಕ್ಕೆ...

# ವ್ಯಾಪಾರ ಬಹಿಷ್ಕಾರ: ಕೋಮುವಾದಿಗಳ ಹೊಸ ತಂತ್ರ





ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ನಾಡಿನಲ್ಲಿ ನಡೆಯುತ್ತಿರುವ ಜಾತ್ರೆ ,ಉತ್ಸವಗಳಲ್ಲಿ ಮುಸಲ್ಮಾನರು ವ್ಯಾಪಾರ ಮಾಡಲು ಅವಕಾಶ ನೀಡುವದಿಲ್ಲ ಎಂದು ಕೋಮುವಾದಿ ಗೂಂಡಾ ಶಕ್ತಿ ಗಳು ಪುಂಡಾಟಿಕೆ ನಡೆಸಿವೆ.

ಇತ್ತೀಚಿನ ವರೆಗೆ ಜನಾಂಗೀಯ ಸಾಮರಸ್ಯದ ತಾಣಗಳಾಗಿದ್ದ ಜಾತ್ರೆಗಳು ಈಗ ಕೋಮು ವ್ಯಾಧಿಯಿಂದ ಎಂದಿನ ಸಂಭ್ರಮವನ್ನು ಕಳೆದುಕೊಂಡು ಪೊಲೀಸ್ ಬಂದೋಬಸ್ತಿನಲ್ಲಿ ಜಾತ್ರೆ ಮಾಡಬೇಕಾಗಿ ಬಂದಿದೆ.ಇದಕ್ಕೆ ಕಾರಣ ಏನೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ದೇವರು ಮತ್ತು ಧರ್ಮ ಮನೆಯೊಳಗಿದ್ದರೆ,ಗುಡಿಯೊಳಗಿದ್ದರೆ ಹೀಗಾಗುತ್ತಿರಲಿಲ್ಲ.ದೇವರನ್ನು ರಸ್ತೆಗೆ ತಂದು ಧರ್ಮವನ್ನು ಓಟಗಳನ್ನು ಒಟ್ಟುಗೂಡಿಸುವ ದುರ್ಬಳಕೆಯ ರಾಜಕಾರಣ ಪ್ರವೇಶ ಮಾಡಿದರೆ ಭಯವೇ ಧರ್ಮದ ಮೂಲವಾಗುತ್ತದೆ

ಕರ್ನಾಟಕವನ್ನು ಕಟ್ಟುವಲ್ಲಿ ಕೈ ಜೋಡಿಸಿದ ಒಂದು ಸುಮುದಾಯವನ್ನು ವ್ಯಾಪಾರ, ವ್ಯವಹಾರ ಗಳಿಂದ ದೂರವಿಡುವ,ಬೀದಿ ಗೂಂಡಾಗಿರಿ ಮ?ಲಕ ಬೆದರಿಸುವ ಈ ದಿನಗಳಲ್ಲಿ ನಾಡಿನ ಬೌದ್ಧಿಕ ವಲಯಗಳಲ್ಲಿ ಗಾಢ ಮೌನ ಆವರಿಸಿದೆ.ಶಿವಮೊಗ್ಗದಲ್ಲಿ ಹತ್ಯೆ ಗೀಡಾದ ಯುವಕನ ಮನೆಗೆ ಹೋಗಿ ಸಂತೈಸಿ ಬಂದ ಮುರುಘಾಶರಣರಾದಿಯಾಗಿ ಮಠಾಧೀಶರು ಜಾಣ ಮೌನ ತಾಳಿದ್ದಾರೆ.ಪಂಡಿತಾರಾಧ್ಯ,ಕೂಡಲ ಸಂಗಮದಂಥ ಕೆಲವೇ ಕೆಲವು ಸ್ವಾಮಿಗಳು ಮಾತಾಡಿದ್ದಾರೆ.ಇನ್ನು ಪ್ರತಿಪಕ್ಷ ಗಳಲ್ಲಿ ಸಿದ್ದರಾಮಯ್ಯ,ಪ್ರಿಯಾಂಕ ಖರ್ಗೆ ಮಾತ್ರ ಮಾತಾಡುತ್ತಿದ್ದಾರೆ.ಸಿದ್ದರಾಮಯ್ಯ ನವರನ್ನು ಏಕಾಕಿಯನ್ನಾಗಿ ಮಾಡಿ ಹಣಿಯುವ ಮೂಲೆಗುಂಪು ಮಾಡುವ ಮಸಲತ್ತುಗಳು ನಡೆಯುತ್ತಿವೆ. ರಾಜ್ಯದಲ್ಲಿ ಇಂಥ ಭಯಾನಕ ಆತಂಕದ ಸನ್ನಿವೇಶ ಹಿಂದೆಂದೂ ನಿರ್ಮಾಣ ವಾಗಿರಲಿಲ್ಲ. ಹಿಂದೆಲ್ಲ ಪಿ.ಲಂಕೇಶ್, ಅನಂತಮೂರ್ತಿ, ಕಲಬುರ್ಗಿ, ಚಂಪಾ,ಜಿ.ಕೆ.ಗೋವಿಂದ ರಾವ ,ಗಿರೀಶ ಕಾರ್ನಾಡ್ ,ತೇಜಸ್ವಿ ಹೀಗೆ ಬೀದಿಗೆ ಬಂದು ನಿಲ್ಲುವ ಚಿಂತಕರು, ಲೇಖಕರು ಇಲ್ಲಿದ್ದರು.ಅವರೆಲ್ಲರ ನಿರ್ಗಮನದ ನಂತರ ಒಂದು ವಿಧದ ಶೂನ್ಯ ಆವರಿಸಿದೆ.

ಹಿಂದೂ ದೇವಳದ ಸಮೀಪ ಮುಸಲ್ಮಾನ ವ್ಯಾಪಾರಿಗಳಿಗೆ ಅಂಗಡಿ ಹಾಕಲು ಅವಕಾಶವಿಲ್ಲ ಎಂದು ಬೊಬ್ಬಿರುವ ಕೋಮುವಾದಿಗಳಿಗೆ ಹಿಂದು ಧರ್ಮದ ಮೇಲೆ ಪ್ರೇಮವಿಲ್ಲ.ಶ್ರದ್ಧೆಯಿಂದ ಈ ಬೆದರಿಕೆಯನ್ನು ಅವರು ಹಾಕುವದಿಲ್ಲ.ಮುಸ್ಲಿಮರನ್ನು ಓಡಿಸಿ ಎಲ್ಲ ಲಾಭವನ್ನು ದೋಚುವ ವ್ಯಾಪಾರಿ ಕುತಂತ್ರ ಬುದ್ದಿ ಅವರಲ್ಲಿದೆ ಎಂಬುದು ಈಗಾಗಲೇ ಬಹಿರಂಗವಾಗಿದೆ

ಮುಸಲ್ಮಾನರನ್ನು ಓಡಿಸಿ ಭಜರಂಗದಳದವರು ಹಾಕಿದ ಅಂಗಡಿಗಳಲ್ಲಿ ದುಬಾರಿ ಬೆಲೆಗೆ ಪದಾರ್ಥಗಳ ಮಾರಾಟ ಮಾಡುತ್ತಿರುವದರಿಂದ ರೋಸಿ ಹೋದ ಭಕ್ತರು ದೂರದಲ್ಲಿ ಇದ್ದ ಮುಸ್ಲಿಮರ ಅಂಗಡಿಗಳಿಂದ ಪದಾರ್ಥಗಳ ನ್ನು ಖರೀದಿಸಿ ತಂದ ವರದಿಗಳು ಬಂದಿವೆ.

ಮೊದಲು ಕೇವಲ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಕೆಲ ಪ್ರದೇಶಗಳಿಗೆ ಸೀಮಿತವಾಗಿದ್ದ ಕೋಮು ದ್ವೇಷದ ವಾತಾವರಣ ಈಗ ನಿಧಾನವಾಗಿ ರಾಜ್ಯದ ತುಂಬಾ ವ್ಯಾಪಿಸತೊಡಗಿರುವದು ಕಳವಳಕಾರಿ ಸಂಗತಿಯಾಗಿದೆ.ಶಿವಮೊಗ್ಗ ,ಶಿರಸಿಗಳ ಮಾರಿಕಾಂಬಾ ಜಾತ್ರೆಗಳಲ್ಲಿ ಮುಸ್ಲಿಮರಿಗೆ ಅಂಗಡಿ ಹಾಕಲು ಬಿಡಲಿಲ್ಲ. ಕೊಡಗಿನ ಶನಿವಾರ ಸಂತೆಯ ಹತ್ತಿರದ ತಪೋವನ ಕ್ಷೇತ್ರದ ಮನೇಹಳ್ಳಿ ಮಠದ ಬಿಲ್ವ ಗೋ ಶಾಲೆಯ ದಶಮಾನೋತ್ಸದ ಅಂಗವಾಗಿ ಆಯೋಜಿಸಿದ್ದ ಸಮ್ಮೇಳನದಲ್ಲಿ ಮುಸಲ್ಮಾನ ರಿಗೆ ವ್ಯಾಪಾರ ನಡೆಸಲು ಭಜರಂಗದಳದವರು ಅವಕಾಶ ನೀಡಲಿಲ್ಲ. ಮಂಡ್ಯ ನಗರದ ಲಕ್ಷ್ಮಿ ನಾರಾಯಣ ದೇವಾಲಯಕ್ಕೆ ಸೇರಿದ ನಿವೇಶನದಲ್ಲಿ ಅಂಗಡಿ ಮಳಿಗೆಗಳಲ್ಲಿ ವ್ಯಾಪಾರ ನಡೆಸಲು ಹಿಂದುಗಳಿಗೆ ಮಾತ್ರ ಅವಕಾಶವನ್ನು ನೀಡಬೇಕು ಎಂದು ಭಜರಂಗದಳದ ಕಾರ್ಯಕರ್ತರು ಪುಂಡಾಟಿಕೆ ನಡೆಸಿದ ವರದಿ ಬಂದಿದೆ.ಸೂಫಿ ಶರಣರ ನಾಡಾದ ಕಲಬುರಗಿಯಲ್ಲೂ ಶರಣ ಬಸವೇಶ್ವರ ಜಾತ್ರೆಯಲ್ಲಿ ಹಿಂದೂ ಧರ್ಮದ ವಿರೋಧಿಗಳಾದ ಅನ್ಯ ಕೋಮಿನವರ ಬಳಿ ವ್ಯಾಪಾರ ಮಾಡಬಾರದು ಎಂದು ಸಂಘ ಪರಿವಾರದ ಮಹಿಳಾ ಜಾಗ್ರತಿ ವೇದಿಕೆ ಒತ್ತಾಯಿಸಿದೆ

ಎಂಟು ನೂರು ವರ್ಷಗಳ ಇತಿಹಾಸವಿರುವ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನ ವನ್ನು ನಿರ್ಮಿಸಿದವನು ಮಲಬಾರಿನ ಮುಸ್ಲಿಂ ವ್ಯಾಪಾರಿ ಬಪ್ಪ ಬ್ಯಾರಿ .ಇಲ್ಲಿ ಮುಸಲ್ಮಾನರು ಮೊದಲು ಪ್ರಸಾದ ಸ್ವೀಕರಿಸುವ ಸಂಪ್ರದಾಯವಿದೆ.ಇಂಥಲ್ಲೂ ಕೂಡ ಮುಸ್ಲಿಂ ವ್ಯಾಪಾರಿಗಳಿಗೆ ಭಜರಂಗಿಗಳು ಅವಕಾಶ ನೀಡಲಿಲ್ಲ. ಹೀಗಾಗಿ ಅಂಗಡಿಗಳ ಬಾಡಿಗೆಗಳಿಗೆಂದು ಕಟ್ಟಿದ ಮುಂಗಡ ಹಣವನ್ನು 58 ಮಂದಿ ಮುಸ್ಲಿಂ ವ್ಯಾಪಾರಿಗಳು ವಾಪಸು ಪಡೆದು ಕಣ್ಣೀರು ಹಾಕುತ್ತ ವಾಪಸು ಹೋದರು.ಅವರಲ್ಲಿ ಒಬ್ಬ ಅದೇ ಹಣವನ್ನು ದೇವಳದ ಹುಂಡಿಗೆ ಹಾಕಿ ಹೋದ .ಮುಸ್ಲಿಮರು ಅಂಗಡಿ ಹಾಕಲು ದೇವಳದ ಆಡಳಿತ ಮಂಡಲಿ ಆಕ್ಷೇಪವಿಲ್ಲ.ಆದರೆ ಯಾರೋ ಸಂಬಂಧ ಪಡದವರು ಈಗ ಜಾತ್ರೆ ಉತ್ಸವಗಳನ್ನು ನಿಯಂತ್ರಿಸುತ್ತಿದ್ದಾರೆ. ರಾಜ್ಯದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಎಲ್ಲ ಗೊತ್ತಿದ್ದೂ ಕಣ್ಣು ಮುಚ್ಚಿ ಕುಳಿತಿದೆ.

ಈ ಪುಂಡಾಟಿಕೆ ಇಲ್ಲಿಗೆ ನಿಲ್ಲುವ ಸೂಚನೆಗಳಿಲ್ಲ.ಬರುವ ವಿಧಾನ ಸಭಾ ಚುನಾವಣೆಯ ವರೆಗೆ ಇದೇ ಪರಿಸ್ಥಿತಿ ಮುಂದುವರಿಯುವದು ಬಿಜೆಪಿ ಸರ್ಕಾರಕ್ಕೂ ಬೇಕಾಗಿದೆ.ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆ. ಮುಂಚೆ ಪ್ರತಿಭಟಿಸುತ್ತಿದ್ದ ಸೌಹಾರ್ದ ಮತ್ತು ಜನಪರ ಸಂಘಟನೆಗಳ ಧ್ವನಿ ಉಡುಗಿ ಹೋಗಿದೆ.

ಭಾರತ ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶದ ಯಾವುದೇ ಪ್ರದೇಶದಲ್ಲಿ ವ್ಯಾಪಾರ,ವಹಿವಾಟು ನಡೆಸಲು ಹಿಂದುಗಳಂತೆ ಮುಸಲ್ಮಾನರಿಗೂ ಹಾಗೂ ಎಲ್ಲ ಸಮುದಾಯಯದವರಿಗೂ ಸಂವಿಧಾನ ಅವಕಾಶ ನೀಡಿದೆ.ಸಂವಿಧಾನ ಕಲ್ಪಿಸಿರುವ ವ್ಯವಸ್ಥೆಗೆ ಯಾರಾದರೂ ಅಡ್ಡಿಯನ್ನುಂಟು ಮಾಡಿದರೆ ಅಂಥವರಿಗೆ ಕಡಿವಾಣ ಹಾಕಲು ಸರಕಾರ ಕ್ರಮ ಕೈಗೊಳ್ಳಬೇಕು. ಆದರೆ ರಾಜ್ಯ ಸರಕಾರಕ್ಕೆ ಇದು ಬೇಕಾಗಿಲ್ಲ

ಕರ್ನಾಟಕದ ಸಾಮಾಜಿಕ ಬದುಕು ಸೌಹಾರ್ದ ದಿಂದ ಕೂಡಿದ್ದರೂ ಕೋಮುವಾದಿ ಶಕ್ತಿಗಳು ಕುತಂತ್ರದಿಂದ ಸೌಹಾರ್ದ ತಾಣಗಳ ನೆಮ್ಮದಿ ಮತ್ತು ಶಾಂತಿ ಹಾಳಾಗುತ್ತಿದೆ.

ಹಿಂದುಗಳಲ್ಲದವರಿಗೆ ದೇವಸ್ಥಾನ ಮತ್ತು ಜಾತ್ರೆಗಳಲ್ಲಿ ನಿರ್ಬಂಧ ಎಸ್.ಎಂ.ಕೃಷ್ಣ ಮುಖ್ಯ ಮಂತ್ರಿಯಾಗಿದ್ದಾಗಲೇ ರೂಪು ಗೊಂಡಿದೆ ಎಂಬ ಇನ್ನೊಂದು ನೆಪವನ್ನು ಅಧಿಕಾರದಲ್ಲಿ ಇರುವವರು ಹೇಳುತ್ತಿದ್ದಾರೆ.ಆದರೆ ಅದನ್ನೂ ತಿರುಚಿ ಹೇಳುತ್ತಿದ್ದಾರೆ.ಆಗ ಮುಜರಾಯಿ ಕಾನೂನಿಗೆ ತಂದ ತಿದ್ದುಪಡಿ "ದೇವಾಲಯದ ಆವರಣದೊಳಗೆ ನಿರ್ಬಂದಿಸಲಾಗಿದೆ" ಎಂದಿದೆ. ಜಾತ್ರೆ, ಉತ್ಸವ ಗಳಲ್ಲಿ ದೇವಾಲಯದ ಹೊರಗೆ ಜನ ಸೇರುವಲ್ಲಿನಿರ್ಬಂಧವಿಲ್ಲ.ಇದನ್ನು ಯಾರೂ ಪ್ರಶ್ನಿಸುತ್ತಿಲ್ಲ.

ಈಗ ಈ ಅತಿರೇಕದ ಹುಚ್ಚು ಎಲ್ಲಿಯವರೆಗೆ ಹೋಗಿದೆಯೆಂದರೆ ಕೊಲ್ಲೂರು ಮೂಕಾಂಬಿಕಾ ದೇವಾಲಯದಲ್ಲಿ ಟಿಪ್ಪು ಸುಲ್ತಾನ್ ಹೆಸರಿನಲ್ಲಿ ನಡೆಯುತ್ತಿದ್ದ ಮಹಾ ಮಂಗಳಾರತಿಯನ್ನು ನಿಲ್ಲಿಸಬೇಕೆಂದು ಭಜರಂಗದಳ ಬೆದರಿಕೆ ಹಾಕುತ್ತಿದೆ. ಇನ್ನೊಂದೆಡೆ ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುವ ಮುಸ್ಲಿಂ ಮತ್ತು ಕ್ರೈಸ್ತ ನೌಕರರನ್ನು ತೆಗೆದು ಹಾಕಲು ಪ್ರಮೋದ ಮುತಾಲಿಕ ಒತ್ತಾಯಿಸುತ್ತಿದ್ದಾರೆ

ವಾಸ್ತವವಾಗಿ ಇವರೆಷ್ಟೇ ದೊಂಬಿ ಎಬ್ಬಿಸಲಿ ಹಿಂದು ,ಮುಸಲ್ಮಾನರು ಮತ್ತು ಕ್ರೈಸ್ತರು ನಡೆದುಕೊಳ್ಳುವ ಮಂದಿರ,ದರ್ಗಾ,ಚರ್ಚ್ ಗಳು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಇವೆ.ನಾನು ಅವುಗಳ ಪಟ್ಟಿ ಮಾಡಿರುವೆ.ಆದರೆ ಇಲ್ಲಿ ಹಾಕಲು ಹೆದರಿಕೆ ಆಗುತ್ತಿದೆ.ಇದೇ ಪಟ್ಟಿ ಹಿಡಿದುಕೊಂಡು ಹೋಗಿ ಆ ಸೌಹಾರ್ದ ತಾಣಗಳಿಗೆ ಕೊಳ್ಳಿ ಇಟ್ಟರೆ ಮುಂದೇನು ಎಂಬುದು ತೋಚುತ್ತಿಲ್ಲ.

ಭಾರತದ ಕೋಮುವಾದ ಈಗ ಹಿಟ್ಲರ್, ಮುಸಲೋನಿ ಮಾದರಿಯ ಫ್ಯಾಸಿಸ್ಟ್ ಕುರೂಪ ತಾಳಿದೆ.ಕಳೆದ ಶತಮಾನದ ಮೂವತ್ತರ ದಶಕದಲ್ಲಿ ಜರ್ಮನ್ ಮತ್ತು ಇಟಲಿಗಳಲ್ಲಿ ನಾಜಿ,ಫ್ಯಾಸಿಸ್ಟ್ ಜನಾಂಗ ದ್ವೇಷ ( ಯೆಹೂದಿ ದ್ವೇಷ) ಭಯಾನಕ ರೂಪ ತಾಳಿದಾಗ ಸಮಾಜವಾದಿ ಸೋವಿಯತ್ ರಷ್ಯ ಇತ್ತು.ಸ್ಟಾಲಿನ್ ನಂಥ ಬಲಿಷ್ಠ ನಾಯಕರಿದ್ದರು.ಸೋವಿಯತ್ ಕೆಂಪು ಸೇನೆ ಇತ್ತು.ಹೀಗಾಗಿ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡು ಸತ್ತ.ಮುಸಲೋನಿಯನ್ನು ಜನಸಾಮಾನ್ಯರೇ ಹಿಡಿದು ಒದ್ದು ಕೊಂದು ಬೀದಿಗೆಸೆದರು.ಆದರೆ ಈಗ ಸಮಾಜವಾದಿ ದೇಶಗಳು ವಿರಳ.ಅಂತಾರಾಷ್ಟ್ರೀಯ ಪರಿಸ್ಥಿತಿ ಭಿನ್ನ. ವಿಶ್ವ ಬಂಡವಾಳ ಶಾಹಿ ಅಳಿವು ಉಳಿವಿನ ಪ್ರಾಣ ಸಂಕಟ ಅನುಭವಿಸುತ್ತಿದೆ. ಇದನ್ನು ಎದುರಿಸಬೇಕಾದ ದುಡಿಯುವ ವರ್ಗ ಎಲ್ಲಿದೆ? ಅದು ಕೂಡ ಜಾತಿ,ಕೋಮು,ಆಧಾರದಲ್ಲಿ ವಿಭಜನೆಗೊಂಡಿದೆ.ಮುಷ್ಕರ ಗಳಿಗೆ ಬರುವವರು ಕೋಮುವಾದ ವಿರುದ್ಧ ಹೋರಾಟಕ್ಕೆ ಬರುವದಿಲ್ಲ. ಅವರ ಮತ ಅದೇ ವಿಷ ಪರಿವಾರದ ಪಕ್ಷಕ್ಕೆ. ಹೀಗಾಗಿ ಮುಂದಿನ ದಾರಿ ಸುರುಳಿತವಾಗಿಲ್ಲ.

ಇಂಥ ಹುಚ್ಚಾಟಗಳಿಂದ ಜಾಗತಿಕ ವಾಗಿ ಭಾರತದ ಬಗ್ಗೆ ಎಷ್ಟು ತಪ್ಪು ಕಲ್ಪನೆ ಉಂಟಾಗುತ್ತದೆ.ವಿದೇಶಾಂಗ ನೀತಿಯ ಮೇಲೆ ಎಂಥ ದುಷ್ಪರಿಣಾಮ ಬೀರುತ್ತದೆ ಎಂಬುದು ಮೆದುಳಲ್ಲಿ ಸಗಣಿ ತುಂಬಿದ ಈ ಅವಿವೇಕಿಗಳಿಗೆ ಗೊತ್ತಿಲ್ಲ. ಮುಸಲ್ಮಾನರು ಬೇಡವೆಂದಾದರೆ ಮುಸ್ಲಿಂ ರಾಷ್ಟ್ರಗಳಿಂದ ಬರುವ ಪೆಟ್ರೋಲಿಯಂ ಉತ್ಪನ್ನಗಳನ್ನು ಏಕೆ ಬಳಸಿಕೊಳ್ಳುತ್ತಾರೆ? ಇಸ್ಲಾಮಿಕ್ ದೇಶಗಳ ಜೊತೆ ವ್ಯಾಪಾರ ,ವಹಿವಾಟು ನಿಲ್ಲಿಸಲು ಮೋದಿ ನೇತೃತ್ವದ ಒಕ್ಕೂಟ ಸರ್ಕಾರ ತಯಾರಿದೆಯೇ? ಐದಾರು ಲಕ್ಷ ಭಾರತೀಯರು ಇಸ್ಲಾಂ ದೇಶಗಳಾದ ದುಬೈ, ಕತಾರ,ಮುಂತಾದ ಕಡೆ ಕೆಲಸ ಮಾಡಿ ಸ್ವದೇಶದಲ್ಲಿರುವ ತಮ್ಮ ಕುಟುಂಬಗಳನ್ನು ಸಲಹುತ್ತಿದ್ದಾರೆ.ನೀವು ಮಾಡಿದಂತೆ ನಾಳೆ ಅಲ್ಲಿನ ಸರಕಾರಗಳು ಮತ್ತು ಜನ ಭಾರತೀಯರನ್ನು ಹೊರ ದಬ್ಬಿದರೆ ವಿಶ್ವ ಹಿಂದೂ ಪರಿಷತ್ತು ಮತ್ತು ಭಜರಂಗದಳಗಳು ಅವರ ಖರ್ಚು ವೆಚ್ಚಗಳನ್ನು ನಿಭಾಯಿಸುತ್ತವೆಯೇ?

ಭಾರತದ ಕೋಮುವಾದ ಫ್ಯಾಸಿಸ್ಟ್ ಕುರೂಪ ತಾಳಿ ಎರಡು ದಶಕಗಳೇ ಗತಿಸಿದವು. ಅಲ್ಪಸಂಖ್ಯಾತರು ಮಾತ್ರವಲ್ಲ ಅವರ ಪರವಾಗಿ ಮಾತಾಡುವ,ಸಮಾನತೆಯ ಪರವಾಗಿ ಧ್ವನಿಯೆತ್ತುವ ಚಿಂತಕರನ್ನು 'ಅರ್ಬನ್ ನಕ್ಸಲ್' ಎಂದು ಕರೆದು ಅವರನ್ನು ಪಟ್ಟಿ ಮಾಡಿ ಒಬ್ಬೊಬ್ಬರನ್ನಾಗಿ ಕೊಲ್ಲುವ ದುಷ್ಕ್ರತ್ಯಕ್ಕೆ ಕೈ ಹಾಕಿದ ಫ್ಯಾಸಿಸ್ಟ್ ಶಕ್ತಿಗಳು ಮೊದಲು ಮಹಾರಾಷ್ಟ್ರದ ಅಂಧಶ್ರದ್ಧೆ ವಿರೋದಿ ಹೋರಾಟಗಾರ ಡಾ,ನರೇಂದ್ರ ದಾಬೋಳ್ಕರ್ ಅವರನ್ನು ಹಾಡು ಹಗಲೇ ಹತ್ಯೆ ಮಾಡಿದವು.ನಂತರ ಕೊಲ್ಹಾಪುರದ ಜನಪ್ರಿಯ ಕಮ್ಯುನಿಸ್ಟ್ ನಾಯಕ ,ಚಿಂತಕ ಗೋವಿಂದ ಪಾನ್ಸರೆ ಹಂತಕರ ಗುಂಡಿಗೆ ಬಲಿಯಾದರು.ಅವರ ನಂತರದ ಸರದಿ ನಮ್ಮ ಡಾ,ಎಂ.ಎಂ.ಕಲಬುರ್ಗಿ ಅವರದು .ಧಾರವಾಡದ ಕಲ್ಯಾಣ ನಗರದ ಅವರ ಮನೆಯಲ್ಲಿ ಹಾಡುಹಗಲೇ ಮನೆ ಹೊಕ್ಕು ಹಣೆಗೆ ಗುಂಡಿಕ್ಕಿ ಕೊಂದರು.ಕಲಬುರ್ಗಿ ನಂತರ ಗೌರಿ ಲಂಕೇಶರನ್ನು ಹತ್ಯೆ ಮಾಡಿದರು.ಈ ಹತ್ಯೆಗಳ ವಿರುದ್ಧ ಬರಬೇಕಾದ ಉಗ್ರ ಪ್ರತಿರೋಧ ಬರಲೇ ಇಲ್ಲ.ಕಲಬುರ್ಗಿ ಹತ್ಯೆಯ ನಂತರ ನಡೆದ ಚುನಾವಣೆಯಲ್ಲಿ ಯಾರು ಗೆದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.ಇದರ ಅರ್ಥವಿಷ್ಟೆ. ತಮ್ಮ ಹತ್ಯೆಗಳನ್ನು ಸಮರ್ಥನೆ ಮಾಡುವ ಬಹುದೊಡ್ಡ ಸಂಖ್ಯೆಯ ಜನ ಸಮೂಹವನ್ನು ಫ್ಯಾಸಿಸ್ಟರು ತಯಾರು ಮಾಡಿದ್ದಾರೆ.ಸಮಾಜದ ಬಹುತೇಕ ಜನರ ಅಂತಕರಣದ ಸೆಲೆ ಬತ್ತಿ ಹೋಗಿದೆ.

ಜಾತಿ,ಮತ,ಧರ್ಮ ,ಭಾಷೆ ,ದೇಶ,ಪ್ರದೇಶವೆನ್ನದೇ ಎಲ್ಲರ ಪ್ರಾಣಕ್ಕೂ ಅಪಾಯವನ್ನು ತಂದೊಡ್ಡಿದ,ಅನೇಕರ ಸಾವಿಗೆ ಕಾರಣವಾದ ಕೋವಿಡ್ ಕಾಲದಲ್ಲಿ.ಸತ್ತ ಎಷ್ಟೋ ಬ್ರಾಹ್ಮಣರ ಶವಗಳನ್ನು ಅಂತ್ಯಕ್ರಿಯೆ ಮಾಡಲು ಅವರ ಸಂಬಂಧಿಕರೇ ಮುಂದೆ ಬರಲಿಲ್ಲ.ಶವ ಮುಟ್ಟಿದರೆ ಎಲ್ಲಿ ಕೊರೊನಾ ಬಂದೀತೆಂದು ಹೆದರಿದರು. ಆಗ ಕೆಲ ಮುಸ್ಲಿಂ ಯುವಕರು ಅಸು ನೀಗಿದ ವ್ಯಕ್ತಿಯ ಧಾರ್ಮಿಕ ನಂಬಿಕೆಗಳ ಪ್ರಕಾರ ಅಂತ್ಯ ಸಂಸ್ಕಾರ ನೆರವೇರಿಸಿ ಗೌರವದ ಬೀಳ್ಕೊಡುಗೆ ನೀಡಿದರು.ಇದರಿಂದಲೂ ಕೋಮು ವೈರಾಣು ಅಂಟಿಸಿಕೊಂಡವರು ಬದಲಾಗಲಿಲ್ಲ.ಕೊರೊನಾ ಕೂಡ ಮನುಷ್ಯನಲ್ಲಿನ ಕ್ರೌರ್ಯ ವನ್ನು ಕಡಿಮೆ ಮಾಡಲಿಲ್ಲ.ಈಗ ಮತ್ತೆ ಅದೇ ಹಳೆಯ ರಾಗ,ದ್ವೇಷದ ರೋಗ.

ಹಿಟ್ಲರನಂತೆ ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದವರಿಗೆ ಚುನಾವಣೆಯ ಮೂಲಕ ಪಾಠ ಕಲಿಸಿ ಅಧಿಕಾರದಿಂದ ಅವರನ್ನು ದೂರವಿಡುವದೇ ತುರ್ತು ಅಗತ್ಯ.ಆದರೆ ಚುನಾವಣೆ ಬರುವವರೆಗೆ ಬಿಜೆಪಿ ಯನ್ನು ವಿರೋಧಿಸುವ ಪ್ರತಿಪಕ್ಷ ಗಳು ಚುನಾವಣೆ ಬಂದಾಗ ಪರಸ್ಪರ ಕಚ್ಚಾಟಕ್ಕೆ ಇಳಿಯುತ್ತವೆ.ಸಿಬಿಐ,ಐಡಿ ಅಸ್ತ್ರಗಳನ್ನು ಬಳಸಿ ವಿರೋಧ ಪಕ್ಷಗಳು ಒಂದಾಗದಂತೆ ಬಿಜೆಪಿ ಸರ್ಕಾರ ನಾನ ತಂತ್ರ,ಕುತಂತ್ರಗಳನ್ನು ಮಾಡುತ್ತದೆ.ಕೇರಳದ ಕಮ್ಯುನಿಸ್ಟರು ಮಾತ್ರ ಇಂಥ ಸಂಕಷ್ಟದ ದಿನಗಳಲ್ಲೂ ನಿತ್ಯವೂ ಕಾರ್ಯಕರ್ತರನ್ನು ಕಳೆದುಕೊಳ್ಳುತ್ತ ತಮ್ಮ ನೆಲೆಯನ್ನು ಉಳಿಸಿಕೊಂಡಿದ್ದಾರೆ.ನಾರಾಯಣ ಗುರು ಗಳ ರಕ್ಷಾ ಕವಚ,ದಶಕಗಳ ತ್ಯಾಗ,ಬಲಿದಾನ ಅವರನ್ನು ಅಲ್ಲಿ ಕಾಪಾಡಿದೆ.

ಬಹುತ್ವ ಭಾರತದ ಜೀವ ಸೆಲೆಗಳು ಒಂದೊಂದಾಗಿ ನಾಶವಾಗುತ್ತಿರುವ ಈ ದಿನಗಳಲ್ಲಿ ಹಳೆಯ ತಂತ್ರಗಳಿಂದ ,ಟೌನ್ ಹಾಲ್ ಮುಂದಿನ ಸಾಂಕೇತಿಕ ಪ್ರತಿಭಟನೆಗಳಿಂದ ಹೆಚ್ಚಿನ ಪ್ರಯೋಜನವಾಗುವದಿಲ್ಲ.ಹೊಸ ನಿರೂಪಣೆ, ನವೀನ ಆಲೋಚನೆಗಳೊಂದಿಗೆ ಬಹು ವ್ಯಾಪಕವಾದ ಸಾಂಸ್ಕೃತಿಕ ಪ್ರತಿರೋಧ ಮಾತ್ರ ಹಳಿ ತಪ್ಪುತ್ತಿರುವ ಭಾರತವನ್ನು ಹಳಿಗೆ ತರಬಹುದು. ಅವರಂತೆ ಮನೆ ಮನೆಗೆ ಹೋಗಿ ಮನ ಮನದ ಬಾಗಿಲು ತಟ್ಟಬೇಕು.ಅನೇಕ ಪ್ರಗತಿಪರರ ಮನೆಗಳಲ್ಲೇ ಭಕ್ತರು ಹುಟ್ಟಿಕೊಂಡ ಈ ದಿನಗಳಲ್ಲಿ ಇದು ಅಷ್ಟು ಸುಲಭವಲ್ಲ. ಇದರ ಜೊತೆಗೆ ರಾಜಕೀಯ ಅಧಿಕಾರದಿಂದ ಫ್ಯಾಸಿಸ್ಟ್ ಶಕ್ತಿಗಳನ್ನು ದೂರವಿಡಬೇಕು.ದೂರವಿಟ್ಟರೆ ಸಾಲದು ಪ್ರತಿರೋಧದ ನೆಲೆಗಳನ್ನು ಗಟ್ಟಿ ಗೊಳಿಸಿಕೊಳ್ಳಬೇಕು.ಧರ್ಮ, ವ ೦ಠ,ಮಠಾಧಿಪತಿಗಳು,ಮಂದಿರಗಳು ಎಲ್ಲ ಅವರ ಜೊತೆಗಿವೆ.ಈಗ ರಾಜ್ಯಾಧಿಕಾರವೂ ಅವರ ಕೈಯಲ್ಲಿ ಇದೆ.ಶಾಸಕಾಂಗ, ಕಾರ್ಯಾಂಗ,ನ್ಯಾಯಾಂಗ,ಹೀಗೆ ಸಕಲಾಂಗಗಳಲ್ಲೂ ವ್ಯಾಪಿಸಿದ ಕೋಮು ದ್ವೇಷದ ಸಾಂಕ್ರಾಮಿಕ ವೈರಾಣುವನ್ನು ತೊಲಗಿಸುವದು ನಮ್ಮೆಲ್ಲರ ಇಂದಿನ ಮೊದಲ ಏಕೈಕ ಆದ್ಯತೆಯಾಗಬೇಕಾಗಿದೆ.

**2023ರ ಮೇ ಅಂತ್ಯದ ವೇಳೆಗೆ ಕರ್ನಾಟಕದಲ್ಲಿ ಹೊಸ ಸರ್ಕಾರ ಬರಬೇಕಿದೆ. ಕಾಂಗ್ರೆಸ್ ಕೈಗೆ ಮತ್ತೆ ಅಧಿಕಾರ ಖಚಿತ ಎಂಬ ವಿಶ್ವಾಸದಲ್ಲಿರುವ ನಾಯಕರಾದ ಸಿದ್ದರಾಮಯ್ಯ, ಶಿವಕುಮಾರ್ ನಡುವೆ ಸಿಎಂ ಸ್ಥಾನಾಕಾಂಕ್ಷೆ ಹೆಚ್ಚುತ್ತಿದೆ. ಪರಸ್ಪರರ ಸಾಮರ್ಥ್ಯವನ್ನು ಅರಿಯುವ ಮೂಲಕ ಶಾಸಕಾಂಗ ಪಕ್ಷವನ್ನು ಕಬ್ಜಾಕ್ಕೆ ತೆಗೆದುಕೊಳ್ಳುವ ರಾಜಕೀಯ ತಂತ್ರವಾಗಿ ಜನಮನದ ಸಮೀಕ್ಷಾ ಕಾರ್ಯಕ್ಕೆ ಇಬ್ಬರೂ ಮುಂದಾಗಿದ್ದಾರೆಂಬ ಸುದ್ದಿ ಆ ಪಕ್ಷದೊಳಗೆ ಸಂಚಲನ ಮೂಡಿಸಿದೆ.**

# ಡಿಕೆಶಿ-ಸಿದ್ದು ಆಟ: ಸಮೀಕ್ಷೆ ಕಲಿಸೀತೆ ಪಾಠ?

## ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ರಾಜ್ಯದ ಹಾಲಿ ವಿಧಾನ ಸಭೆ 2023ರ ಮೇ 24ಕ್ಕೆ ಅಂತ್ಯಗೊಳ್ಳಲಿದ್ದು ಆ ತಿಂಗಳ ಮೂರನೆ ವಾರದೊಳಗಾಗಿ ಚುನಾವಣೆ ನಡೆಯಬೇಕಿದೆ. ಜನತಂತ್ರಾತ್ಮಕ ವ್ಯವಸ್ಥೆ ಪ್ರಕ್ರಿಯೆಯ ಭಾಗವಾಗಿ ಇವೆಲ್ಲವೂ ಪ್ರಕಟಿತ ಚುನಾವಣಾ ವೇಳಾ ಪಟ್ಟಿಗೆ ಅನುಗುಣವಾಗಿ ನಡೆಯುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ನಡೆಯುತ್ತಿರುವುದೆಂದರೆ ಒಂದಿಷ್ಟು ಚರ್ಚೆ. ಮುಂದೆ ಯಾವ ಪಕ್ಷದ ಸರ್ಕಾರ...? ಯಾರು ಮುಖ್ಯಮಂತ್ರಿ...? ಎಂಬ ಪ್ರಶ್ನೆ ಎಲ್ಲರಲ್ಲಿದೆ. ಹಾಲಿ ಬಿಜೆಪಿ ಸರ್ಕಾರ ಪುನಃ ಅಧಿಕಾರಕ್ಕೆ ಮರಳುತ್ತದೆಯಾ... ಬಸವರಾಜ ಬೊಮ್ಮಾಯಿ ಅವರೆ ಸಿಎಂ ಆಗಿ ಮುಂದುವರಿಯುತ್ತಾರಾ...? ಕುತೂಹಲ ಸಹಜ. ಐದು ವರ್ಷದ ಹಿಂದೆ ಅಧಿಕಾರ ಕಳೆದುಕೊಂಡ ಕಾಂಗ್ರೆಸ್ಸು ಮತ್ತೆ ಅದನ್ನು ಗಳಿಸುತ್ತದೆಯಾ...? ಪಕ್ಷ ಬಹುಮತ ಪಡೆದಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವಿನ ಪೈಪೋಟಿಯಲ್ಲಿ ಯಾರು ಸಿಎಂ ಕುರ್ಚಿಯಲ್ಲಿ ಕೂರುತ್ತಾರೆ....? ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬ ಪಂಚತಂತ್ರ ಕಥೆಯ ನೀತಿಯಂತೆ ಬಬಲೇಶ್ವರ ಕ್ಷೇತ್ರದ ಎಂ.ಬಿ. ಪಾಟೀಲರು ಸೋನಿಯಾ ಕೃಪಾಶೀರ್ವಾದ ಹೊತ್ತು ಬರುತ್ತಾರಾ...? ತ್ರಿಶಂಕು ವಿಧಾನ ಸಭೆಯಾದರೆ ಅನುಕೂಲ ಎಂಬ ರಾಜಕೀಯ ಮಂತ್ರ ಪಠಿಸುತ್ತಿರುವ ಎಚ್.ಡಿ.ಕುಮಾರಸ್ವಾಮಿ ಈ ಹಿಂದಿನಂತೆ ಅತಂತ್ರ ವಿಧಾನ ಸಭೆಯ ದೊಡ್ಡ ಫಲಾನುಭವಿ ಆಗುತ್ತಾರಾ...? ಈ ಎಲ್ಲ ಪ್ರಶ್ನೆಗಳಿಗೆ ಸದ್ಯಕ್ಕಂತೂ ಇದಮಿತ್ಥಂ ಎಂಬ ಉತ್ತರವಿಲ್ಲ. ಹಾರಾಡುತ್ತಿರುವ ಪ್ರಶ್ನೆಗಳಿಗೆ ಕೈಗೆ ಸಿಗದಂತೆ ಹಾರಾಡುತ್ತಿವೆಯೆ ಉತ್ತರಗಳು?!



2018ರ ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹೀಗೆ ಯಾವ ಪಕ್ಷಕ್ಕೂ ಬಹುಮತ ಬರಲಿಲ್ಲ. ಆಡಳಿತದಲ್ಲಿದ್ದ ಕಾಂಗ್ರೆಸ್ಸು ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ನೀಡುವ ಮಾತಾಡಿ ಜೇನುಗೂಡಿಗೆ ಕಲ್ಲು ಹೊಡೆಯಿತು. ಅದರ ಪರಿಣಾಮ ವಿಧಾನ ಸಭೆಯಲ್ಲಿ ಎರಡನೆ ಸ್ಥಾನಕ್ಕೆ ಕುಸಿದಿದ್ದು. ವೀರಶೈವ–ಲಿಂಗಾಯತ ಧರ್ಮದ ವಿಚಾರದಲ್ಲಿ ತಲೆ ಹಾಕದೆ ಪಕ್ಷದ "ಘೋಷಿತ ಸಿದ್ಧಾಂತ"ಕ್ಕೆ ಸೀಮಿತಗೊಂಡ ನೇರಾನೇರಾ ರಾಜಕೀಯವನ್ನು ಸಿದ್ದರಾಮಯ್ಯ ಮಾಡಿದ್ದರೆ ಪಕ್ಷ ಅಧಿಕಾರಕ್ಕೆ ಬರುತ್ತಿತ್ತು ಎಂಬ ಮಾತು ಇದೆ. "ಕರ್ಣಾದಿಗೆಳೆಯರ ಮಾತು ಕೇಳಿ ದುರ್ಯೋಧನ ಕೆಟ್ಟ" ಎಂದು ಮಹಾಭಾರತದಲ್ಲಿ ಭೀಷ್ಮ ಆಡುವ ಮಾತಿನಂತೆ ಎಂ.ಬಿ. ಪಾಟೀಲ, ಬಸವರಾಜ ರಾಯರೆಡ್ಡಿ, ಶರಣಪ್ರಕಾಶ ಪಾಟೀಲ, ವಿನಯ್ ಕುಲಕರ್ಣಿ ಮುಂತಾದ ಅತ್ಯುತ್ಸಾಹಿಗಳ ವಿವೇಕದ ಕೊರತೆಯ ಮಾತನ್ನು ನಂಬಿದ ಸಿದ್ದರಾಮಯ್ಯ ತಮ್ಮ ಕಾಲ ಮೇಲೆ ತಾವೇ ಚಪ್ಪಡಿ ಎಳೆದುಕೊಂಡರು. ಹೋಗಲಿ,ಈಗ ದಾರಿ ಸುಗಮವಾಗಿದೆಯೆ ಎಂದರೆ ಅಲ್ಲಿ ಡಿಕೆಶಿ ಎಂಬ ಬಂಡೆ ಅಡ್ಡ ನಿಂತಿದೆ. ಬಂಡೆಯನ್ನು ಸರಿಸಬೇಕು ಇಲ್ಲವೆ ಒಡೆದು ದಾರಿ ಸುಗಮ ಮಾಡಿಕೊಳ್ಳಬೇಕು. ಸಿದ್ದರಾಮಯ್ಯ ಯಾವ ಯೋಚನೆಯಲ್ಲಿದ್ದಾರೊ, ಬಹಿರಂಗವಾಗಿಲ್ಲ.



"ಮುಂದಿನ ರಾಜಕೀಯ: ಜನತೆಯ ಒಲವು ನಿಲುವು" ಕುರಿತಂತೆ ಕರ್ನಾಟಕದ ಕೆಲವು ರಾಜಕಾರಣಿಗಳು ತಲೆ ಬಿಸಿ ಮಾಡಿಕೊಂಡಿದ್ದಾರೆ. ಅಂಥವರ ಪೈಕಿ ಇದೀಗ ಪ್ರಧಾನವಾಗಿ ಕೇಳಿ ಬರುತ್ತಿರುವ ಎರಡು ಹೆಸರೆಂದರೆ ಸಿದ್ದರಾಮಯ್ಯ ಮತ್ತು ಡಿಕೆಶಿಯವರದು. ಚುನಾವಣೆ ಹತ್ತಿರಹತ್ತಿರವಾಗುತ್ತಿರುವಂತೆ ರಾಜಕೀಯ ಪಕ್ಷಗಳು, ರಾಜಕೀಯ ಮುಖಂಡರು ಸಮೀಕ್ಷಾ ಸಂಸ್ಥೆಗಳ ಬೆನ್ನು ಹತ್ತುತ್ತಾರೆ. ಸಿದ್ದು ಮತ್ತು ಡಿಕೆಶಿ ಮಾಡಿಸುತ್ತಿದ್ದಾರೆಂದು ಹೇಳಲಾಗಿರುವ ಸಮೀಕ್ಷೆಗಳೆರಡೂ ಅವರಿಬ್ಬರ ವೈಯಕ್ತಿಕ ತೀರ್ಮಾನ. ಪಕ್ಷದ ಹಾಲಿ ಶಾಸಕರಲ್ಲಿ ಯಾರೆಲ್ಲ ಗೆದ್ದಾರು, ಯಾರೆಲ್ಲ ಸೋತಾರು; ಕಳೆದ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳಲ್ಲಿ ಯಾರ್ಯಾರು ಗೆಲ್ಲಬಹುದು; ಕಾಂಗ್ರೆಸ್ ಗೆದ್ದ ಮತ್ತು ಸೋತ ಕ್ಷೇತ್ರಗಳಲ್ಲಿ ಹೊಸ ಮುಖಗಳನ್ನು ಹೂಡುವ ಅಗತ್ಯ ಇದ್ದಲ್ಲಿ ಯಾವ ಮುಖ ಮತದಾರರಿಗೆ ಒಪ್ಪಿಗೆಯಾಗಿ ಅಂಗೀಕಾರವಾಗಬಹುದು; ಚುನಾವಣೆ ಗೆಲ್ಲುವುದಕ್ಕೆ ಬಹುಮುಖ್ಯವಾಗಿ ಬೇಕಾಗಿರುವ ಹಣ ಬಲ, ಜಾತಿ ಬಲದ ಜೊತೆಗೆ ವಿರೋಧಿಗಳನ್ನು ಓಲೈಸಿಕೊಳ್ಳುವ ಚಾಣಾಕ್ಷತನ ಯಾರಿಗೆ ಇದೆ ಅಥವಾ ಯಾರಿಗೆ ಇಲ್ಲ ಎನ್ನುವುದರ ಮಾಹಿತಿ ಕಲೆ ಹಾಕುವಂತೆ ಸಮೀಕ್ಷಾ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಪ್ರಶ್ನಾವಳಿಯಲ್ಲಿರುವ ಈ ಕೆಲವು ಅಂಶಗಳ ಜೊತೆಗೆ ಇನ್ನಷ್ಟು ಮಾಹಿತಿಯನ್ನು ಬಯಸಲಾಗಿದೆ ಎಂಬ ಸುದ್ದಿಯೂ ಇದೆ. ಸಮೀಕ್ಷಾ ಕೆಲಸವನ್ನು ಡಿಕೆಶಿ ಒಂದು ಸಂಸ್ಥೆಗೆ ವಹಿಸಿದ್ದರೆ ಸಿದ್ದರಾಮಯ್ಯ ಮತ್ತೊಂದು ಸಂಸ್ಥೆಗೆ ವಹಿಸಿದ್ದಾರೆ ಎನ್ನಲಾಗಿದೆ. ಕಣ್ಣು ಕುಕ್ಕುವಂತೆ ಇದರಲ್ಲಿ ಎದ್ದು ಕಾಣಿಸುವ ವಿಶೇಷವೆಂದರೆ ಕೆಪಿಸಿಸಿ ಸಮೀಕ್ಷೆಯನ್ನು ಮಾಡಿಸುತ್ತಿಲ್ಲ ಎನ್ನುವುದು.

ಕಾಂಗ್ರೆಸ್ ನಾಯಕರು ಈ ಬಗೆಯ ಸಮೀಕ್ಷೆ ಮಾಡಿಸಿಕೊಳ್ಳುವುದು ಹೊಸದೇನೂ ಅಲ್ಲ. ಹೀಗೆಂದ ಮಾತ್ರಕ್ಕೆ ಬಿಜೆಪಿಯಲ್ಲಿ ಇಂಥದ್ದು ನಡೆಯುವುದಿಲ್ಲ ಎಂದೂ ಅಲ್ಲ. ಆ ಪಕ್ಷದ ಕೆಲವರಾದರೂ ನಾಯಕರು ಗುಟ್ಟಾಗಿ ಸಮೀಕ್ಷೆ ಮಾಡಿಸುವುದು ಇದ್ದೇ ಇದೆ. ಸಮೀಕ್ಷೆ ನಡೆಸುವ ಸಂಸ್ಥೆಗಳು ದುಡ್ಡಿಗಾಗಿ ಮಾಡುವ ಕೆಲಸ ಇದಾಗಿರುವುದರಿಂದ ಅವು ತಾವಾಗಿಯೆ ಸಂಗ್ರಹಿತ ಅಂಕಿಅಂಶವನ್ನು ಬಹಿರಂಗ ಮಾಡುವ ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಸಮೀಕ್ಷಾ ಫಲಶ್ರುತಿ ಹೇಗೋ ಸೋರಿಕೆ ಆಗಿಬಿಡುತ್ತದೆ. ಮತ್ತೆ ಕೆಲವು ಬಾರಿ ಅವು ಹೊರಕ್ಕೆ ಬಾರದೆ ಅಲ್ಲೇ ಕಾಲಗರ್ಭದಲ್ಲಿ ಹೂತು ಹೋಗುತ್ತವೆ. ಇದೀಗ ಸಿದ್ದರಾಮಯ್ಯ ಮತ್ತು ಡಿಕೆಶಿ ನಡೆಸಿರುವ ಸಮೀಕ್ಷೆಯ ಮುಖ್ಯ ಉದ್ದೇಶ ಸಿಎಂ ಗಾದಿಗಾಗಿ ನಡೆದಿರುವ ತಮ್ಮಿಬ್ಬರ ನಡುವಿನ ಪೈಪೋಟಿಯಲ್ಲಿ ಯಾರ ಕೈ ಮೇಲು ಎನ್ನುವುದನ್ನು ತಿಳಿದುಕೊಳ್ಳುವುದು.ಇದು ಗೊತ್ತಾದರೆ ಎಲ್ಲಿ ಯಾರಿಗೆ ಯಾವ ಮದ್ದನ್ನು ಯಾವ ಸ್ವರೂಪದಲ್ಲಿ ಅರೆಯಬೇಕು ಎನ್ನುವುದು ಗೊತ್ತಾಗುತ್ತದೆ ಎನ್ನುವುದು ಇಬ್ಬರೂ ನಾಯಕರ ಒಳಮನಸ್ಸಿನ ಲೆಕ್ಕಾಚಾರ. ಹಾಲಿ ಶಾಸಕರಲ್ಲಿ, ಸೋತ ಅಭ್ಯರ್ಥಿಗಳಲ್ಲಿ ಎಷ್ಟು ಜನ ಸಿದ್ದು ಪರ ಎನ್ನುವುದು ಡಿಕೆಶಿಗೆ ಬೇಕಾಗಿದೆ; ಇಂಥದೇ ಕುತೂಹಲ ಡಿಕೆಶಿ ಮತ್ತು ಅವರ ಬೆಂಬಲಿಗರ ವಿಚಾರದಲ್ಲಿ ಸಿದ್ದುಗೆ ಇದೆ. ಒಬ್ಬರ ಪರವಾಗಿರುವ ಅಭ್ಯರ್ಥಿ ಇನ್ನೊಬ್ಬರಿಗೆ ಬೇಡ ಎನ್ನುವುದು ಇವರಿಬ್ಬರ ನಡುವಿನ ಕದನ ಕುತೂಹಲದ ಸ್ವಾರಸ್ಯ. ಶಾಸಕಾಂಗ ಪಕ್ಷದಲ್ಲಿ ತಮ್ಮ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು ಎನ್ನುವುದು ಸಿದ್ದು ಮತ್ತು ಡಿಕೆಶಿ ಹಂಬಲ. ಅದನ್ನು ಚುನಾವಣೆ ಪೂರ್ವದಲ್ಲೇ ಗೊತ್ತುಪಡಿಸಿಕೊಂಡರೆ ಮುಂದಿನ ಆಟ ಸುಲಭ ಎನ್ನುವುದು ಅವರ ಭಾವನೆಯಾಗಿರುವಂತಿದೆ.



ಪ್ರದೇಶ ಕಾಂಗ್ರೆಸ್ ಮುಖಂಡರಲ್ಲಿ ಈ ಬಗೆಯ ಸಮೀಕ್ಷೆ ಹೊಸದೂ ಅಲ್ಲ ಅಪರೂಪದ್ದೂ ಅಲ್ಲ ಎಂದೆನಲ್ಲ. 2018ರ ಚುನಾವಣೆ ಸಮೀಪದಲ್ಲಿತ್ತು. 2013ರ ಚುನಾವಣೆಯಲ್ಲಿ 122 ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದಿದ್ದರೂ ಕೆಲವು ಜೆಡಿಎಸ್ ಶಾಸಕರಿಗೆ ಗಾಳ ಹಾಕಿ ತನ್ನತ್ತ ಸೆಳೆದುಕೊಂಡಿತ್ತು. ಆಪರೇಷನ್ ಕಮಲ ಎಂಬ ಅನೈತಿಕ, ಅಸಂವೈಧಾನಿಕ ರಾಜಕೀಯವನ್ನು ಬಿಜೆಪಿ ಮಾಡಿದಾಗ ಅದನ್ನು ಟೀಕಿಸಿದವರೆಲ್ಲರೂ ಸಿದ್ದು ಸರ್ಕಾರ ಜೆಡಿಎಸ್ ಶಾಸಕರನ್ನು ಸೆಳೆದಾಗ ತಮಗೆ ಅದು ಗೊತ್ತೇ ಇಲ್ಲ ಎಂಬಂತೆ ಮೌನ ತಾಳಿದರು. ಅದೇನೇ ಇರಲಿ, 2018ರ ಚುನಾವಣೆ ಆಸಕ್ತಿ ಕೆರಳಿಸಿತ್ತು. ಪಕ್ಷದ ಹಿರಿಯ ನಾಯಕರೊಬ್ಬರು ಸ್ವಂತ ವೆಚ್ಚದಲ್ಲಿ "ಬರಲಿರುವ ಚುನಾವಣೆ ಏನು ಎತ್ತ" ಎಂಬ ಸಮೀಕ್ಷೆ ನಡೆಸುವ ನಿರ್ಧಾರಕ್ಕೆ ಬಂದು ಉತ್ತರ ಭಾರತದ ಹೆಸರಾಂತ ಸಂಸ್ಥೆಯೊಂದಕ್ಕೆ ಹೊಣೆ ವಹಿಸಿದರು. ಚುನಾವಣೋತ್ತರದಲ್ಲಿ ಕಾಂಗ್ರೆಸ್ ಶಾಸಕ ಸ್ಥಾನ ಬಲ ಎರಡನೆ ಸ್ಥಾನಕ್ಕೆ ಕುಸಿಯಲಿದೆ ಎಂದು ವರದಿ ನಿಕರವಾಗಿ ಹೇಳಿತ್ತು. ಹಣ ಹಾಕಿ ಸಮೀಕ್ಷೆ ಮಾಡಿಸಿದ್ದ ನಾಯಕರು ವರದಿಯನ್ನು ಗಮನಿಸುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಆಗ ರಾಜ್ಯದ ಉಸ್ತುವಾರಿ ಆಗಿದ್ದ ಕೆ.ಸಿ. ವೇಣುಗೋಪಾಲರಿಗೆ ಮನವಿ ಮಾಡಿದರು. ಕ್ಷೇತ್ರವಾರು ಸಮೀಕ್ಷಾ ವರದಿ ಅವಲೋಕನಕ್ಕೆಂದೇ ಬೆಂಗಳೂರಿನ ಕುಮಾರಕೃಪಾದಲ್ಲಿ ಮುಹೂರ್ತ ನಿಗದಿಯಾಯಿತು.







ಹಳೆ ಮೈಸೂರು ಭಾಗದಿಂದ ವರದಿಯನ್ನು ಸಮೀಕ್ಷಾ ತಂಡದವರು ಎಲ್ಲ ಅಂಕಿಅಂಶ ಸಹಿತ ವಿವರಿಸಲಾರಂಭಿಸಿದರು. ಹತ್ತೋ ಹದಿನೈದೋ "ಕ್ಷೇತ್ರ ದರ್ಶನ" ಮುಗಿದ ಬಳಿಕ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ವಿವರ ಲ್ಯಾಪ್‌ಟಾಪ್ ಪರದೆಯ ಮೇಲೆ ಮೂಡಲಾರಂಭವಾಯಿತು. ಎಷ್ಟೆಂದರೂ ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಕ್ಷೇತ್ರ. ಕುತೂಹಲ ಸಹಜ. ವರದಿಯಲ್ಲಿ ಶಬ್ದನುಂಗದೆ ಹೇಳಿದಂತೆ ಅಲ್ಲಿ ಸಿದ್ದರಾಮಯ್ಯ ಅಜಮಾಸು 30 ಸಾವಿರ ಮತಗಳ ಅಂತರದಿಂದ ಸೋಲಲಿದ್ದರು. ಇದನ್ನು ಕೇಳಿದ್ದೇ ತಡ, ವೇಣುಗೋಪಾಲ್ ಸಿಡಿದೆದ್ದರು. ಕೆಂಡಾಮಂಡಲರಾಗಿ ಕುಳಿತಲ್ಲಿಂದ ಎದ್ದು ವರದಿ ಸಲ್ಲಿಸಿದ ತಂಡಕ್ಕೆ ಕ್ಯಾಕರಿಸಿ ಉಗಿಯಲಾರಂಭಿಸಿದರು. ಹಾಲಿ ಮುಖ್ಯಮಂತ್ರಿ ಜನಾನುರಾಗಿ ನಾಯಕ ಸ್ವಂತ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲ್ತಾರೆ ಎಂದರೆ ನಂಬಲಾಗದು. ಸಮೀಕ್ಷೆಯನ್ನು ತಾವು ಒಪ್ಪುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ ಅವರು, ಅಲ್ಲಿಗೇ "ಕ್ಷೇತ್ರ ದರ್ಶನ" ನಿಲ್ಲಿಸಿ ಮುಚ್ಚಿಕೊಂಡು ಹೊರಡುವಂತೆ ತಂಡಕ್ಕೆ ಬಾಗಿಲು ತೋರಿಸಿದರು. ಪಕ್ಷ ಒಟ್ಟು ಗಳಿಸಿದ ಸ್ಥಾನಕ್ಕೂ ವರದಿ ಹೇಳಿದ್ದಕ್ಕೂ ಬಹಳ ವ್ಯತ್ಯಾಸವೇನೂ ಇರಲಿಲ್ಲ. ಯಾವಾಗಲೂ ಸತ್ಯ ಕಹಿಯೇ. ಚುನಾವಣೆ ಮುಗಿದು ಫಲಿತಾಂಶ ಹೊರಬಿದ್ದಾಗ ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 36 ಸಾವಿರ ಮತಗಳಿಂದ ಪರಾಭವಗೊಂಡಿದ್ದರು.!

ಯಾವುದೇ ಪಕ್ಷದ ಯಾವುದೇ ನಾಯಕರಿಗೂ ಸತ್ಯ ಯಾವ ಕಾಲಕ್ಕೂ ಕರ್ಣ ರಸಾಯನ ಆಗಿರುವ ಉದಾಹರಣೆ ಇಲ್ಲ. ನಾಯಕತ್ವಕ್ಕೆ ಆ ಕ್ಷಣದಲ್ಲಿ ಖುಷಿ ನೀಡುವುದೇ ಹಲವು ಸಂಸ್ಥೆಗಳ ಉದ್ದೇಶವಾಗಿರುತ್ತದೆ. ಈ ಮಾತಿಗೆ ಇಂದಿರಾ ಗಾಂಧಿ ಕಾಲದಲ್ಲೂ ಉದಾಹರಣೆ ಇದೆ. ಸಂವಿಧಾನದ ಆಶಯವನ್ನೆಲ್ಲ ಬದಿಗೊತ್ತಿದ ಪ್ರಧಾನಿ ಇಂದಿರಾ ಗಾಂಧಿ ದೇಶದ ಮೇಲೆ ಏಕಪಕ್ಷೀಯವಾಗಿ ತುರ್ತು ಪರಿಸ್ಥಿತಿಯನ್ನು ಹೇರಿದ್ದರು. ಅದೇ ಕಾರಣವಾಗಿ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಯಲಿಲ್ಲ. ಮಾಧ್ಯಮಗಳು ನಿಜ ಚಿತ್ರಣ ನೀಡುವುದಕ್ಕೆ ನಿರ್ಬಂಧವಿತ್ತು. ಸರ್ಕಾರಕ್ಕೆ ಬೇಡವಾದ ಯಾವುದೂ ಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ. ಜನರ ಮನಸ್ಸು ಏನನ್ನು ಹೇಳುತ್ತಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಾಗುವ ಮರ್ಗವೆಲ್ಲವೂ ಮುಚ್ಚಿ ಹೋಗಿದ್ದ ಆ ಸಂದರ್ಭದಲ್ಲಿ ಸರ್ಕಾರಿ ಒಡೆತನದ ಬೇಹುಗಾರಿಕೆ ದಳದ ಮೂಲಕ ಜನಮನ ಅರಿಯುವ ಯತ್ನಕ್ಕೆ ಇಂದಿರಾ ಮುಂದಾದರು. ಈ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ; ಇಂದಿರಾ ಗಾಂಧಿ ಬಗ್ಗೆ ನೀವೇನು ಹೇಳುತ್ತೀರಿ; ಅವರ ಮಗ ಸಂಜಯ್ ಗಾಂಧಿ ಕಾರ್ಯವೈಖರಿ ಹೇಗಿದೆ; ಜನ ತಮ್ಮ ಗೋಳು ಸಮಸ್ಯೆ ಹೇಳಿಕೊಂಡಾಗ ಸರ್ಕಾರಿ ಕಚೇರಿಗಳಲ್ಲಿ ಸ್ಪಂದನ ಹೇಗಿದೆ...ಇತ್ಯಾದಿ ಪ್ರಶ್ನೆಗಳಿಗೆ ಜನ ಕೊಟ್ಟ ಉತ್ತರ "ಎಲ್ಲವೂ ಬಹಳ ಚೆನ್ನಾಗಿದೆ". ಚೆನ್ನಾಗಿಲ್ಲ ಎಂಬ ಸತ್ಯ ಹೇಳಿದರೆ ಎಲ್ಲಿ ಒದ್ದು ಒಳಕ್ಕೆ ಹಾಕುತ್ತಾರೋ ಎಂಬ ಭಯ ಜನರ ಬಾಯಲ್ಲಿ ಸುಳ್ಳನ್ನು ಹೇಳಿಸಿತ್ತು. ಆದರೆ ಇಂಟೆಲಿಜೆನ್ಸ್ ವರದಿ ಹೇಳಿದ್ದ ಮೂರನೇ ಎರಡು ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಂಬ ಮಾತನ್ನು ಇಂದಿರಾ ಗಾಂಧಿ, ಸಂಜಯ ಗಾಂಧಿ ಮತ್ತು ಅವರನ್ನು ಸುತ್ತುವರಿದಿದ್ದ "ಚಾಂಡಾಲ ಚೌಕಡಿ" (ಇಂದಿರಾರನ್ನು ಸುತ್ತುವರಿದಿದ್ದ ಜನರನ್ನು ಚಾಂಡಾಲ ಚೌಕಡಿ ಎಂದು ಎಚ್.ವಿ. ಕಾಮತ್ ಕರೆದಿದ್ದರು. ಕರ್ನಾಟಕ ಕರಾವಳಿ ಮೂಲದವರಾದ ಕಾಮತ್, ಮಧ್ಯ ಪ್ರದೇಶದ ಹೊಷಂಗಾಬಾದ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು) ಇದನ್ನು ನಂಬಿಕೊಂಡು ಚುನಾವಣೆಗೆ ಮುಂದಾಯಿತು. ಜನಾಕ್ರೋಶ ಸ್ಫೋಟಿಸಿ ಇಂದಿರಾ, ಸಂಜಯ್ ಸೇರಿದಂತೆ ಇಡೀ ಪಕ್ಷವೇ ದೂಳೀಪಟವಾಯಿತು ಎನ್ನುವುದು ಎಲ್ಲ ಬಲ್ಲ ಸಂಗತಿ.

2013ರಲ್ಲಿ ಸಿದ್ದರಾಮಯ್ಯ ಸಿಎಂ ಆದರು. ಈಗ ಡಿಕೆಶಿ ಆ ಯತ್ನದಲ್ಲಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲಿ ಕೆಲವು ಸಮಸ್ಯೆಗಳಿವೆ. ಈ ಇಬ್ಬರೂ ಮುಖಂಡರು ದಕ್ಷಿಣ ಕರ್ನಾಟಕದವರು. ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂಬ ಆರೋಪವನ್ನು ಅರಗಿಸಿಕೊಳ್ಳುವ ಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ. ಉತ್ತರ ಕರ್ನಾಟಕದ ಎಸ್.ಆರ್. ಪಾಟೀಲರನ್ನು ಮತ್ತೆ ಎಂಎಲ್‌ಸಿ ಮಾಡದೇ ಇರುವುದು ಆ ಪಕ್ಷದಲ್ಲಿರುವ ಲಿಂಗಾಯತರ ಬೇಗುದಿಯನ್ನು ಹೆಚ್ಚಿಸಿದೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿ ಬಿ.ಕೆ. ಹರಿಪ್ರಸಾದ್‌ರನ್ನು ಸೋನಿಯಾ ನೇಮಿಸಿದ್ದಾರೆ. ವಿಧಾನ ಸಭೆ, ವಿಧಾನ ಪರಿಷತ್‌ಗಳೆರಡರಲ್ಲೂ ವಿರೋಧ ಪಕ್ಷದ ನಾಯಕ ಸ್ಥಾನವನ್ನು ಹಿಂದುಳಿದ ವರ್ಗಕ್ಕೆ ನೀಡಿರುವ ಕ್ರಮಕ್ಕೆ ವಿರೋಧ ವ್ಯಕ್ತವಾಗಿದೆ. ಸಿ.ಎಂ. ಇಬ್ರಾಹಿಂ ಪಕ್ಷಕ್ಕೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ದಲಿತ ಎಡಗೈ ಸಮುದಾಯಕ್ಕೆ ಸೇರಿದ ಹಿರಿಯ ಶಾಸಕ ಆರ್.ಬಿ. ತಿಮ್ಮಾಪುರ ಅಸಮಾಧಾನ ಹೊರಕ್ಕೆ ಹಾಕಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾದವರೇ ಸಿಎಂ ಆಗುವ ಪರಂಪರೆ ಕಾಂಗ್ರೆಸ್‌ನಲ್ಲಿದೆ ಎಂದು ಡಿಕೆಶಿ ಬೆಂಬಲಿಗರು ಹೇಳುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ ಅಧ್ಯಕ್ಷರಾಗಿದ್ದೂ ಸಿಎಂ ಸ್ಥಾನ ವಂಚಿತರಾದರೆನ್ನುವ ಸತ್ಯ ಇವರ ನೆನಪಿನಲ್ಲಿಲ್ಲ. ಇದೀಗ ಉಲ್ಕೆಯಂತೆ ಎಂ.ಬಿ. ಪಾಟೀಲರು ಮುಂದೆ ಬಂದಿದ್ದಾರೆ. ಅವರೀಗ ಪ್ರಚಾರ ಸಮಿತಿ ಅಧ್ಯಕ್ಷರು. ಪಕ್ಷದಲ್ಲಿ ಸಿದ್ದರಾಮಯ್ಯ, ಡಿಕೆಶಿಗಿಂತ ಎಂ.ಬಿ.ಪಾಟೀಲರು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಯವರಿಗೆ ಹೆಚ್ಚು ಹತ್ತಿರದಲ್ಲಿದ್ದಾರೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಸೋನಿಯಾ ಗಾಂಧಿ ಪ್ರಚಾರ ಮಾಡಿದ್ದು ಬಬಲೇಶ್ವರ ಕ್ಷೇತ್ರದಲ್ಲಿ ಮಾತ್ರ ಎನ್ನುವುದನ್ನು ನಾವು ಮರೆಯಬಾರದು.

# ಕ್ರಿಪ್ಟೋ ಕರೆನ್ಸಿ ಎನ್ನುವ ಆನ್‌ಲೈನ್ ಡಿಜಿಟಲ್ ಮಾಯಾವಿ ಮನಿ ಮಾಫಿಯಾ



● ಪರಶಿವ ಧನಗೂರು

ಇನ್ ಸ್ಟಾ ಗ್ರಾಂನಲ್ಲಿ ನಕಲಿ ಖಾತೆ ತೆರೆದು, ಕ್ರಿಪ್ಟೋ ಕರೆನ್ಸಿ ಟ್ರೆಂಡಿಂಗ್ ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಸಿಗುತ್ತದೆ ಎಂದು ಜಾಹಿರಾತು ಪ್ರದರ್ಶಿಸಿ, ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಗ್ಯಾಂಗ್ ಒಂದನ್ನು ಬೆಂಗಳೂರಿನ ಈಶಾನ್ಯ ಪೊಲೀಸರು ಬಂಧಿಸಿದ್ದಾರೆ!

ನಕಲಿ ಇನ್ಸ್ ಸ್ಟಾ ಗ್ರಾಂ ಪ್ರೊಫೈಲ್ ಗಳ ಮೂಲಕ ಬಲೆ ಬೀಸುತ್ತಿದ್ದ ಈ ಸೈಬರ್ ಕಳ್ಳರು ತಮ್ಮ ಪ್ರೊಫೈಲ್ ನಲ್ಲಿ "ಯಂಗೆಸ್ಟ್ ಕ್ರಿಪ್ಟೋ ಟ್ರೇಡ್ ಮಿನಿಮಮ್ 60 %ಪ್ರಾಫಿಟ್!" ಎಂಬ ಸಂದೇಶ ಹಾಕಿ ಮಿಕಗಳಿಗಾಗಿ ಕಾಯುತ್ತಿತ್ತು. ಸುಲಭವಾಗಿ ಹಣಗಳಿಸುವ ಉದ್ದೇಶದಿಂದ ಈ ರೀತಿ ಹಲವಾರು ಜನರಿಗೆ ಕ್ರಿಪ್ಟೋ ಕರೆನ್ಸಿ ಹೆಸರಿನಲ್ಲಿ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಬೆಳಗಾವಿಯ ರಾಯಬಾಗ್ ಮೂಲದ ಕಿರಣ್ , ಭರತೇಶ್, ಮತ್ತು ಹರ್ಷದ್ ಮೊಹಿದ್ದೀನ್ ರನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ. ಜನರನ್ನು ವಂಚಿಸುವುದಕ್ಕಾಗಿಯೇ ತಮ್ಮ ಇನ್ ಸ್ಟಾ ಗ್ರಾಂ ಖಾತೆಯ ಫಾಲೋವರ್ಸ್ ಗಳನ್ನು ಹೆಚ್ಚಿಸಿಕೊಳ್ಳಲು, ತಮ್ಮ ಪ್ರೊಫೈಲ್ ಪೋಸ್ಟ್ ಗಳ ಪ್ರತಿ ಲೈಕ್ ಗೆ ಐದರಿಂದ ಏಳು ರೂಪಾಯಿ ಕೊಟ್ಟು ಖಾಸಗಿ ಕಂಪನಿಯ ಸಹಾಯಪಡೆದಿದ್ದರಂತೆ! ಇದೇ ರೀತಿ ಈಗ ಆನ್ ಲೈನ್ ವಂಚನೆ ಜೊತೆಗೆ ಖಾಸಗಿಯಾಗಿ ಏಜೆಂಟರು-ಭ್ರೋಕರ್ ಗಳನ್ನಿಟ್ಟುಕೊಂಡು, ಕ್ರಿಪ್ಟೋ ಕರೆನ್ಸಿ ಟ್ರೇಡಿಂಗ್ ಹೆಸರಿನಲ್ಲಿ ಹಣ ಹೂಡಿಕೆ ಮಾಡಿಸಿಕೊಂಡು, ವಂಚಿಸುವ ನೂರಾರು ಮಂದಿ ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರಂತೆ!

ಡಿಜಿಟಲ್ ಗೋಲ್ಡ್..! ಎಂದೆಲ್ಲಾ ಕರೆಸಿಕೊಳ್ಳುತ್ತಿರುವ ಈ ಕ್ರಿಪ್ಟೋಕರೆನ್ಸಿ ಎಂಬ ಆನ್ಲೈನ್ ಡಿಜಿಟಲ್ ಮಾಯಾವಿ ಮನಿ ಮಾಫಿಯಾದ ವಿಚಿತ್ರ ಜಗತ್ತು ಮತ್ತು ಅದರೊಳಗಿರುವ ಚಿತ್ರವಿಚಿತ್ರ ವ್ಯವಹಾರಗಳ ಜನಕರು ತಮ್ಮ ತೆವಲಿಗೆ ನಾನಾವಿಧದ ಕಾನ್ಸೆಪ್ಟ್ ಗಳನ್ನು ಸೃಷ್ಟಿಸಿ ಆನ್ಲೈನ್ ನಲ್ಲಿ ಹರಿಯಬಿಟ್ಟು, ಹಣಹೊಡೆಯಲು ಮುಗ್ಧ-ಆಸೆಬುರುಕ ಜನರನ್ನು ಮೋಸಗೊಳಿಸಲು ಬಣ್ಣ ಬಣ್ಣದ ಭಾವಲೋಕದ ಬಲೆಬೀಸಿದ್ದಾರೆ.

## ಕ್ರಿಪ್ಟೋಕರೆನ್ಸಿ ಹವಾ ವಿಶ್ವದಲ್ಲಿ ಜೋರಾಗಿದೆ

ಭಾರತವೂ ಸೇರಿದಂತೆ ವಿಶ್ವದ ಹಲವಾರು ದೇಶಗಳಲ್ಲಿಯೂ ಈ ಕ್ರಿಪ್ಟೋಕರೆನ್ಸಿಯ ಹವಾ ಈಗ ಜೋರಾಗಿಯೇ ಎದ್ದಿದೆ! ಅವುಗಳಲ್ಲಿ ಈ 'ಬಿಟ್ ಕಾಯಿನ್' ಕೂಡ ಒಂದು. ಸಾರ್ಟ್ ಫಾರ್ಮ್ನಲ್ಲಿ ಅಂತರ್ಜಾಲದ ಅಂತರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಇದನ್ನು 'ಬಿಟಿಸಿ'ಅಂತಾರೆ ಇದೇ ತರ ಬಿ.ಸಿ.ಎಚ್, ಈ.ಟಿ.ಹೆಚ್, ಎಲ್.ಟಿ.ಸಿ, ಎಸ್.ಟಿ.ಓ, ಡಿ.ಎ.ಎಸ್.ಹೆಚ್. ಹೆಸರಿನ ಡಿಜಿಟಲ್ ಕರೆನ್ಸಿಗಳು ಅಂದರೆ ಕ್ರಿಪ್ಟೋಕರೆನ್ಸಿಗಳು ಅಂತರ್ಜಾಲದಲ್ಲಿ ಹರಿದಾಡುತ್ತ ಮುಂದಿನ ಪ್ರಪಂಚದಲ್ಲಿ ತಮ್ಮ ಅಧಿಪತ್ಯ ವನ್ನು ಸ್ಥಾಪಿಸಲು ನೆಕ್ಸ್ಟ್ ಗ್ಲೋಬಲ್ ರಿಜರ್ವ್ ಕರೆನ್ಸಿ ನಾನೆ ಎಂದುಕೊಂಡು ಓಡಾಡುತ್ತಿವೆ! ಇವುಗಳನ್ನು ಕಾನೂನಿನ ಅಡಿಯಲ್ಲಿ ತರದಿದ್ದರೆ ಬಡರಾಷ್ಟ್ರಗಳು ಮುಂದುವರಿಯುತ್ತಿರುವ ಮಧ್ಯಮ ವರ್ಗದ ಜನರಿರುವ ದೇಶಗಳು 'ಎಕನಾಮಿಕ್ ಟೆರರಿಸಂ' ನ ಭಯಾನಕ ಬಲೆಯಲ್ಲಿ ಸಿಕ್ಕ ನರಳಬೇಕಾಗುತ್ತದೆ. ಏಕೆಂದರೆ ಈ ಕ್ರಿಪ್ಟೋಕರೆನ್ಸಿಗಳು ಮೂದಲಿಗೇ ಹುಟ್ಟಿಕೊಂಡಿದ್ದು ಇಲ್ಲೀಗಲ್ ಹವಾಲ ಟ್ರೇಡಿಂಗ್, ಡಾರ್ಕ್ ನೆಟ್ ಗಳ ಅಕ್ರಮ ವಹಿವಾಟಿನ ಡ್ರಗ್ಸ್ ದಂಧೆ, ಅಕ್ರಮ ಶಸ್ತ್ರಾಸ್ತ್ರ ಖರೀದಿ, ಎಕನಾಮಿಕ್ ಟೆರರಿಸಂ, ಬ್ಲಾಕ್ ಮನಿ, ಮುಂತಾದ ಕೆಲಸಗಳಿಗೆ! ಅದರೀಗ ನಿದಾನಕ್ಕೆ ಡಿಜಿಟಲ್ ಮನಿಯೆಂಬುದು ಇನ್ವೆಷ್ಟ್ ಮೆಂಟ್ ಟ್ರೇಡಿಂಗ್ ಆಗಿ. ಶೇರ್ ಟ್ರೇಡಿಂಗ್ ರೀತಿಯಲ್ಲಿ ಸೇಫ್ಟೀ ರಿಜರ್ವ್ ಕರೆನ್ಸಿ ಎಂಬ ಪದಪುಂಜಗಳಲ್ಲಿ ಎಲ್ಲರ ಮೊಬೈಲ್ನಲ್ಲಿಯೂ ವಾಲೆಟ್ ಆಗಿ ಬಂದು ಕುಳಿತುಬಿಟ್ಟಿವೆ!

ಡಿಜಿಟಲ್ ಹವಾಲ! ಅಂತ ಕರೆಸಿ ಕೊಳ್ಳುತ್ತಿದ್ದ ಈ ನಾನ್

- ಬಿಟ್‌ಕಾಯಿನ್: $45,496.56
- ಇಥೆರಿಯಂ: $3,180.60
- ಬಿನಾನ್ಸ್ ಕಾಯಿನ್ : $390.30
- ಟೆಥರ್: $1
- ಕಾರ್ಡಾನೋ: $2.16
- ಡೋಜಿಕಾಯಿನ್: $0.22
- ಎಕ್ಸ್‌ಆರ್‌ಪಿ: $0.98
- ಪೋಲ್‌ಕಾಡಾಟ್: $31.39
- ಯುಎಸ್‌ಡಿ ಕಾಯಿನ್: $1
- ಸೊಲಾನೋ: $143.11




ಗವರ್ನಮೆಂಟ್ ಕರೆನ್ಸಿ ಪಿಸಿಕಲ್ ಪ್ರೆಸೆನ್ಸ್ ಇಲ್ಲದಿದ್ದರೂ ಯೂನಿವರ್ಸಲ್ ಅನ್ನೊ ಕಾರಣಕ್ಕೆ ಈಗ ಅಮೆರಿಕಾದಂತ ದೊಡ್ಡ ದೇಶದಲ್ಲೂ ಹೋಟೆಲ್ ಬಿಸಿನೆಸ್ ಸ್ಪಾಟ್ ಗಳಲ್ಲಿ ಅಕ್ಸೆಪ್ಟ್ ಆಗುತ್ತಿದೆ! ಫಿಜ್ಜಾ ಹಟ್. ಮತ್ತು ಕೆ.ಎಫ್.ಸಿ. ವಾಲ್ ಮಾರ್ಟ್ ಗಳಂತಹ ಮಲ್ಟಿನ್ಯಾಷನಲ್ ಕಂಪನಿಗಳು ಈವೊತ್ತು ಕ್ರಿಪ್ಟೋಕರೆನ್ಸಿ ಗಳಿಗೆ ಬಿಟ್ ಕಾಯಿನ್ ಗೇ ಜೈ ಅಂದಿವೇ! ಅಲ್ಲಿ ಅಧಿಕೃತವಾಗಿ ಕಾನೂನು ಬದ್ಧಗೊಳಿಸದಿದ್ದರೂ ನಿಷೇಧ ಹೇರದೆ ಸುಮ್ಮನಾಗಿವೆ!ಅಕ್ರಮ ಚಟುವಟಿಕೆಗಳ ತಾಣವಾದ ಡಾರ್ಕ್ ನೆಟ್ ನಲ್ಲಿ ಮಾತ್ರ ಲೀಗಲೈಜ್ಡ್ ಆಗಿರುವ ಈ ಬಿಟ್ ಕಾಯಿನ್ ಮತ್ತು ಕ್ರಿಪ್ಟೋಕರೆನ್ಸಿ ಗಳನ್ನು ಹಾಂಕಾಂಗ್ ಸರ್ಕಾರ ಮಾತ್ರ ಲೀಗಲೈಜ್ಡ್ ಮಾಡಿ ಜಗತ್ತಿನ ಮೊದಲ ರಾಷ್ಟ್ರವೆನಿಸಿಕೊಂಡು ಕೈತೊಳೆದುಕೊಃಡಿದೆ! ಈಗ ಕ್ರಿಪ್ಟೋಕರೆನ್ಸಿಗಳಿಗಾಗಿ ಗೂಗಲ್ ಪ್ಲೇಸ್ಟೋರ್ ನಲ್ಲಿ ಹೋದರೆ ಸಾವಿರಾರು ವಾಲೆಟ್ ಆಫ್ ಗಳು ಸಿಗುತ್ತದೆ. ಅರ್ಧಕ್ಕೆ ಅರ್ಧ ನಕಲೀ! ಫೇಟಿಎಮ್. ಗೂಗಲ್ ಫೆ, ಫೋನ್ ಫೇ ರೀತಿ ಎಲಿಕ್ಟ್ರಿಕ್ ವಾಲೆಟ್ ನಲ್ಲಿರುವ ನಾರ್ಮಲ್ ಕರೆನ್ಸಿಗಳಂತೆ ನಮ್ಮ ಬ್ಯಾಂಕ್ ಅಕೌಂಟಿಗೆ ಈ ಬಿಟ್ ಕಾಯಿನ್ ನಂತಹ ಕರೆನ್ಸಿಗಳನ್ನು ಟ್ರಾನ್ಸ್ ಫರ್ ಮಾಡಿಕೊಳ್ಳಲು ಸಲೀಸಾಗಲು 'ಕಾಯಿನ್ ಸ್ವಿಚ್ ಕುಬರ್' 'ಯೂನಿಕಾಯಿನ್' ನಂತಹ ಹಲವಾರು ಮಧ್ಯವರ್ತಿ ಟ್ರೇಡಿಂಗ್. ಎಕ್ಸ್ಚೇಂಜ್ ಟ್ರಾನ್ಸ್ ಫರ್ ಬೇಸ್ಡ್ ಕಂಪನಿಗಳು ಭಾರತದಲ್ಲೇ ಇವೇ! ಬಿಟ್ ಕಾಯಿನ್ ವ್ಯವಹಾರವನ್ನು ಲೀಗಲ್ಲಾಗಿಯೇ ಮಾಡುವ 'ಯೂನಿಕಾಯಿನ್' ಆಫೀಸ್ ಬೆಂಗಳೂರು-ದೆಹಲಿ-ಚನ್ನೈ ಮುಂತಾದಕಡೆ ಇದೆ!

## ಕಿಪ್ಟೋ ಕರೆನ್ಸಿ ವಹಿವಾಟು

ಲಕ್ಷಾಂತರ ಜನ ಕನ್ಸೂಮರ್ಸ್ ಹೋಂದಿರುವ ಈ ಕಂಪನಿ ಬಿಟ್ ಕಾಯಿನ್ ಮಾರುತ್ತೆ.ಕೊಳ್ಳುತ್ತೆ. ಡೀಲರ್ ಕೆಲಸ ಮಾಡುವ ಇಂತಹ ಸಾವಿರಾರು ಕಂಪನಿಗಳು ತಮ್ಮ ಆಫ್ ಮೂಲಕ ಅಂತರ್ಜಾಲ ದಲ್ಲಿ ಬಿಟ್ ಕಾಯಿನ್ ವ್ಯವಹಾರ ನಡೆಸುತ್ತವೆ. ಸತ್ಯ ವಾದ ವಿಚಾರವೆಂದರೇ ನಮ್ಮ ರಿಜರ್ವ್ ಬ್ಯಾಂಕ್ ಈ ತರದ ಯಾವುದೇ ವ್ಯವಹಾರಗಳನ್ನು ಇನ್ನೂ ಲೀಗಲೈಜ್ಡ್ ಮಾಡಿಲ್ಲ. ಆರ್.ಬಿ.ಐ. ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ(ಸಿಬಿಡಿಸಿ) ಹೆಸರಿನಲ್ಲಿ ತನ್ನದೇ ಹೊಸ ಡಿಜಿಟಲ್ ಕರೆನ್ಸಿ ತರುವುದಾಗಿ ಘೋಷಿಸಿದೆ. ಸರಿಯಾದ ಕ್ರಿಪ್ಟೋ ಕರೆನ್ಸಿ ಮಸೂದೆ ಜಾರಿಗೆ ತರಲಾರದೆ ಒದ್ದಾಡಿದ ಕೇಂದ್ರ ಸರ್ಕಾರ ಮೊನ್ನೆ ತಾನೆ ತನ್ನ ಬಜೆಟ್ ನಲ್ಲಿ ಕ್ರಿಪ್ಟೋ ಸೇರಿದಂತೆ ವರ್ಚುವಲ್ ಆಸ್ತಿಗಳ ವಹಿವಾಟು ಗಳಿಂದ ಲಭಿಸುವ ಲಾಭಕ್ಕೆ ಶೇಕಡಾ30% ತೆರಿಗೆ ಘೋಷಿಸಿದೆ! ಕ್ರಿಪ್ಟೋ ವ್ಯವಹಾರವನ್ನು ಕುದುರೆ ಜೂಜು, ಬೆಟ್ಟಿಂಗ್ ದಂಧೆಗೆ ಹೋಲಿಸಿರುವ ಕೇಂದ್ರ ಸರ್ಕಾರ ಕ್ರಿಪ್ಟೋ ವಹಿವಾಟಿನಿಂದ ಗಳಿಸುವ 50ಲಕ್ಷ ರೂಗಿಂತ ಹೆಚ್ಚಿನ ಆದಾಯಕ್ಕೆ ತೆರಿಗೆ ಜೊತೆಗೆ ಶೇಕಡಾ 15% ಸೆಸ್ ಮತ್ತು ಸರ್ ಚಾರ್ಜ್ ವಿಧಿಸಿದೆ. ಯಾವುದೇ ಇ.ಡಿ.ಭಯವಿಲ್ಲದೇ ಜಿ.ಎಸ್ಟೀ.ಕಟ್ಟದೇ.ಇನ್ ಕಂಟ್ಯಾಕ್ಸೂ ಕೊಡದೇ

ಲಕ್ಷಾಂತರ ರೂ, ಕೋಟ್ಯಾಂತರ ರೂಪಾಯಿಯ ಈ ಇಲ್ಲೀಗಲ್ ಟ್ರೇಡಿಂಗ್ ಮಾಡುತ್ತಿರುವವರಿಗೇ, ಸದ್ದಿಲ್ಲದೇ ಯಾರಿಗೂ ಕಾಣದೇ ಮೊಬೈಲ್ ವ್ಯಾಲೆಟ್ ನಲ್ಲೇ ಕೋಟ್ಯಂತರ ರೂಪಾಯಿ ವಹಿವಾಟು ಮುಗಿಸಿಕೊಳ್ಳುತ್ತಿರುವವರಿಗೇ ಇವಿಷ್ಟೇ ತೆರಿಗೆಗಳಿಂದ ಕಟ್ಟಿಹಾಕಲು ಸಾಧ್ಯವಿಲ್ಲ. ಜಿಎಸ್ಟಿ ಹಾಗೂ ಟಿ.ಡಿ.ಎಸ್. ವಿಷಯದಲ್ಲಿ ಸಮರ್ಪಕವಾಗಿ ಕಾನೂನು ರೂಪಿಸುವ ನಿಟ್ಟಿನಲ್ಲಿ ಕೆಲಸವಾಗಬೇಕಿದೆ. ಏಕೆಂದರೆ ಫಂಗಬಲ್ ಅಲ್ಲದ ಟೋಕನ್ ಗಳು ಎನ್.ಎಫ್.ಟಿ ಭಾರತದಲ್ಲಿ "ವರ್ಚುವಲ್ ಡಿಜಿಟಲ್ ಸ್ವತ್ತುಗಳು" ಎಂದು ಎಣಿಕೆ ಮಾಡುತ್ತದೋ ಇಲ್ಲವೋ ಎಂಬುದು ಸ್ಪಷ್ಟವಾಗಿಲ್ಲ. ಮತ್ತೊಂದೆಡೆ ಕೇಂದ್ರ ಸರ್ಕಾರದ ತೆರಿಗೆ ತಪ್ಪಿಸಿಕೊಳ್ಳಲು ಕಳ್ಳ ದಾರಿ ಹುಡುಕುತ್ತಿರುವ ಎಕ್ಸ್ ಚೇಂಜ್ ಫ್ಲಾಟ್ ಫಾರ್ಮ್ ಗಳು ಈಗ ಜನರಿಗೆ ಹೊಸ ಸ್ಕೀಂ ಗಳ ಗಾಳ ಹಾಕುತ್ತಿವೆ. ಭಾರತದ ಬ್ಯಾಂಕುಗಳೆ ಶೇಕಡಾ 8%ಕ್ಕಿಂತ ಕಡಿಮೆ ಬಡ್ಡಿ ನೀಡುತ್ತಿರುವಾಗ ಶೇಕಡಾ 24% ಬಡ್ಡಿ ನೀಡುತ್ತೇವೆ ನಮ್ಮಲ್ಲಿ ಹಣ ಹೂಡಿಕೆಮಾಡಿರೆಂದು ಕ್ರಿಪ್ಟೋ ಎಕ್ಸ್ ಚೇಂಜ್ ಗಳು ಜನರನ್ನು ಪುಸಲಾಯಿಸುತ್ತಿವೆ! ನಿಮ್ಮ ಹೂಡಿಕೆ ಮೇಲೆ ನೀವೇ ಕಡಿಮೆ ದರದಲ್ಲಿ ಸಾಲಪಡೆದುಕೊಳ್ಳಿ, ಕೇಂದ್ರ ಸರ್ಕಾರದ ತೆರಿಗೆಯಿಂದ ತಪ್ಪಿಸಿಕೊಳ್ಳಿ! ಎಂದು ಹಾದಿತಪ್ಪಿಸುತ್ತಿವೆಯಂತೇ! ಬಹಳಷ್ಟು ಉದ್ಯಮಿಗಳು, ಮಧ್ಯಮವರ್ಗದ ಜನರು ಈ ಹೊಸ ಕ್ರಿಪ್ಟೋ ಕರೆನ್ಸೀ ಆಫರ್ ಗಳಿಗೇ ಮುಗಿಬೀಳುವ ಎಲ್ಲಾ ಲಕ್ಷಣಗಳು ದಟ್ಟವಾಗಿವೆ! ಮತ್ತೊಂದೆಡೆ ಈಗ ರಷ್ಯಾ-ಉಕ್ರೇನ್ ಯುದ್ದದ ಪರಿಣಾಮದಿಂದ ತೀವ್ರಗತಿಯಲ್ಲಿ ಕ್ರಿಪ್ಟೋ ಕರೆನ್ಸಿ ಮೌಲ್ಯ ಗಗನಕ್ಕೇರುತ್ತಿದೆ! ಅಮೆರಿಕಾ ಮತ್ತು ನ್ಯಾಟೋ ಪಡೆಗಳ ಬ್ಯಾಂಕ್ ನಿರ್ಭಂಧ, ಆರ್ಥಿಕ ನಿರ್ಭಂಧದಿಂದ ಹೊರಬರಲು ರಷ್ಯಾ ಕ್ರಿಪ್ಟೋ ಕರೆನ್ಸಿ ಮೈನಿಂಗ್‌ಗೇ ಮೊರೆ ಹೋಗಿದೆಯಂತೇ! ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ಮಾರಾಟ ಮಾಡಿ ಕ್ರಿಪ್ಟೋ ಕರೆನ್ಸೀ ಮೂಲಕ ಹಣ ಕ್ರೂಢೀಕರಿಸಿಕೊಂಡು ತನ್ನ ದೇಶದ ಕರೆನ್ಸಿ(ಆರ್ಥಿಕ ತೆ)ಯನ್ನು ಮೇಲೆತ್ತಲು ಶತಪ್ರಯತ್ನ ಮಾಡುತ್ತಾ, ನೂರಾರು ಶತಕೋಟಿ ಡಾಲರ್ ಗಳನ್ನು, ಕ್ರಿಪ್ಟೋ ಕರೆನ್ಸೀಗೆ ಪರಿವರ್ತಿಸಲು ರಷ್ಯಾ ಹರಸಾಹಸ ಪಡುತ್ತಿದೆಯಂತೆ. ಇಂತಹ ಗಳಿಗೆಯಲ್ಲಿ ಡಿಜಿಟಲ್ ಕರೆನ್ಸಿಗಳು ಡಾಲರ್ ಪ್ರಭಾವವನ್ನೇ ಮುಂದೊಂದು ದಿನ ಕುಗ್ಗಿಸಲೂ ಬಹುದೆಂದು ಜಾಗತಿಕ ಮಟ್ಟದ ಚರ್ಚೆಗಳಾಗುತ್ತಿರುವಾಗ ಇದ್ದಕ್ಕಿದ್ದಂತೆ ಕ್ರಿಪ್ಟೋ ಕರೆನ್ಸಿ ಬೇಡಿಕೆ, ಜಾಗತಿಕಮೌಲ್ಯ ಗಳನ್ನಿಟ್ಟುಕೊಂಡು ಆನ್ ಲೈನ್ ವಂಚಕರು ಈಗ ಎಲ್ಲಾ ಕಡೆ ತಲೆಯೆತ್ತಿದ್ದಾರೆ.



## ಹವಾಲಾ ದಂಧೆಯಲ್ಲಿ ಚಾಲ್ತಿಗೆ ಬಂದ ಕ್ರಿಪ್ಟೋಕರೆನ್ಸಿ

ಪೇಪರ್ ಕರೆನ್ಸಿಯನ್ನು ಬೇರೆಡೆ ಸಾಗಿಸಲು ಬಚ್ಚಿಡಲು ಸಾಧ್ಯವಾಗದೆ ಹುಟ್ಟಿಕೊಂಡಿದ್ದೆ ಈ ಕ್ರಿಪ್ಟೋಕರೆನ್ಸಿ! ಹೀಗೇ ಹವಾಲ ದಂಧೆಯಲ್ಲಿ ಚಾಲ್ತಿಗೆ ಬಂದ ಡಿಜಿಟಲ್ ಮನಿ ಈವೊತ್ತು, ಸರ್ವವೂ ಡಿಜಿಟಲ್ ಮಯವಾಗುತ್ತಿರುವ ಗಳಿಗೆಯಲ್ಲಿ ಭಾರತದಲ್ಲಿ ಯಾವ ರೂಪ ಪಡೆದುಕೊಳ್ಳುತ್ತದೋ ಕಾಯಲೇಬೇಕಿದೆ. 2018ರಲ್ಲಿ ಆರ್.ಬಿ.ಐ. ನಿಂದ ನಿಶೇಧಕ್ಕೊಳಗಾಗಿದ್ದ ಕ್ರಿಪ್ಟೋ ಕರೆನ್ಸಿ 2020ರಲ್ಲಿ ಭಾರತದ ಸುಪ್ರೀಂ ಕೋರ್ಟ್‌ನಿಂದ ಅನುಮತಿ ಪಡೆದುಕೊಂಡಿದ್ದೆ ಸೋಜಿಗ. ಕ್ರಿಪ್ಟೋ ಕರೆನ್ಸಿಯನ್ನು ದೇಶದ ಹಣಕಾಸು, ಆರ್ಥಿಕತೆ, ಕಾನೂನು ಭದ್ರತೆಯ ದ್ರಷ್ಟಿಯಿಂದ ಅಪಾಯಕಾರಿಯಾದ್ದರಿಂದ ನಿಷೇಧಿಸಬೇಕು ಎನ್ನುತ್ತಿರುವಾಗಲೇ, ಈಗಿನ ಸನ್ನಿವೇಶದಲ್ಲಿ ಭಾರತದಲ್ಲಿ ನಿಷೇಧ ಕಷ್ಟಸಾಧ್ಯವೆಂದು ಕಾನೂನು ತಜ್ಞರೇ ಹೇಳುವಂತಾಗಿದ್ದೂ ಆಶ್ಚರ್ಯವೇ. ಕ್ರಿಪ್ಟೋ ಕರೆನ್ಸಿಯನ್ನು ನಿಷೇಧಿಸಬಾರದು ನಿಯಂತ್ರಿಸಬೇಕು ಎಂಬ ಕೂಗು ಈಗ ಎಲ್ಲಾಕಡೆ ಕೇಳಿಬರುತ್ತಿದೆ! ಭಾರದಲ್ಲಿ 2018ರಲ್ಲಿ ಅಮಿತ್ ಭಾರಧ್ವಾಜ್ ಮತ್ತು ವಿವೇಕ್ ಭಾರಧ್ವಾಜ್ ಎಂಬ ಸಹೋದರರಿಬ್ಬರು 2000ಕೋಟಿಯ ಬಿಟ್ ಕಾಯಿನ್ ಬಿಗ್ ಸ್ಕ್ಯಾಮ್ ನಡೆಸಿ ಜೈಲುಸೇರುವ ಮುನ್ನ ಮಲ್ಟಿ ಲೆವಲ್ ಮಾರ್ಕೆಟಿಂಗ್ ಸ್ಕೀಮ್ ಪ್ರಾರಂಭಿಸಿ 'ಕಾಯಿನ್ ಬ್ಯಾಂಕ್' ಮಾಡ್ತೀವಂತ ಹೊರಟಿದ್ರೂ!' ಕ್ರಿಪ್ಟೋಕರೆನ್ಸಿ ಫಾರ್ ಬಿಗಿನರ್ಸ್' ಅನ್ನೊ ಪುಸ್ತಕವನ್ನು ಬರೆದು ಪ್ರಕಟಿಸಿ 'ಜನರಿಗೆ ಬಿಟ್ ಕಾಯಿನ್ ಮೈನಿಂಗ್ ಹೇಳಿಕೊಡ್ತೀವಿ..ತಿಂಗಳಿಗೆ 30%ಕೊಡ್ತೀವಿ! ಡೈಲೀ ಬಿಟ್ ಕಾಯಿನ್ ಆಫರ್ ಕೊಡ್ತಿವೀ!ಅಂತ ಬಿಟ್ ಕಾಯಿನ್ ಕರೆನ್ಸಿ ಟ್ರೇಡಿಂಗ್ ನಡೆಸಿ ಇಂಡಿಯನ್ ಎಕನಾಮಿಕ್ಸ್ ಅಫೆನ್ಸ್ ವಿಂಗ್ ಪೊಲೀಸರು ಮತ್ತು



# ಕ್ರಿಪ್ಟೋ ಕರೆನ್ಸಿ ಗಣಿಗಾರಿಕೆ ವಂಚನೆ

**ಷೇರುಪೇಟೆ ಯಲ್ಲಿ ಹಣ ಹೂಡಿಕೆ ಮಾಡುವುದಕ್ಕೂ ಕ್ರಿಪ್ಟೋ ಕರೆನ್ಸಿ ಯಲ್ಲಿ ಹೂಡಿಕೆ ಮಾಡುವುದಕ್ಕೂ ಹೆಚ್ಚೇನೂ ವ್ಯತ್ಯಾಸ ವಿಲ್ಲದಿದ್ದರೂ ಬಹುತೇಕ ರಾಷ್ಟ್ರಗಳಲ್ಲಿ ಇನ್ನೂ ಈ ಕ್ರಿಪ್ಟೋ ಕರೆನ್ಸಿಗಳನ್ನು ಮಾನ್ಯತೆ ಮಾಡಿಲ್ಲ ವಾದ್ದರಿಂದ ನಮ್ಮ ಕೇಂದ್ರ ಸರ್ಕಾರವೂ ಕೂಡ ಯಾವುದೇ ಕ್ಷಣದಲ್ಲಾದರೂ ಚೀನಾ ಸರ್ಕಾರದಂತೆಯೇ ಎಲ್ಲಾ ಖಾಸಗಿ ಡಿಜಿಟಲ್ ಕರೆನ್ಸಿ ಟೋಕನ್ ಗಳನ್ನು (ರದ್ದುಗೊಳಿಸಿ) ಬ್ಯಾನ್ ಮಾಡಿ ತನ್ನದೇ (ಆರ್.ಬಿ.ಐ.) ಡಿಜಿಟಲ್ ಕರೆನ್ಸಿ ಹೊರತಂದರೂ ಅಚ್ಚರಿ ಪಡಬೇಕಿಲ್ಲ. ಹಾಗೇನಾದರೂ ಭಾರತದಲ್ಲಿ ಕ್ರಿಪ್ಟೋ ಕರೆನ್ಸಿ ಬ್ಯಾನ್ ಆದರೆ ಈಗಾಗಲೇ ಹೂಡಿಕೆ ಮಾಡಿರುವ ಕೋಟ್ಯಂತರ ಬಾರತೀಯರು ಬೀದಿಗೆ ಬೀಳಬೇಕಾಗುತ್ತದೆ. ವಿದೇಶದಲ್ಲಿ ಕುಳಿತು ಕೊಂಡು ಅಕ್ರಮ ಕ್ರಿಪ್ಟೋ ಕರೆನ್ಸಿ ಗಣಿಗಾರಿಕೆ ನಡೆಸುತ್ತಿರುವ ವಂಚಕರು ಚೈನಾ, ಸಿಂಗಾಪೂರ್, ಸಂಯುಕ್ತ ಅರಬ್ ಕಂಟ್ರಿಗಳಲ್ಲಿ ಶಾಖೆತೆರೆದು ಜನರಿಗೆ ಬಲೆಬೀಸುತ್ತಿದ್ದಾರೆ. ಕೆಲವು ನಕಲಿ ಬಿಟ್ ಕಾಯಿನ್ ಟ್ರೇಡಿಂಗ್ ವೆಬ್ಸೈಟ್ ಗಳು, ವಾಟ್ಸಾಪ್ ಗ್ರೂಪ್ ಗಳು ಈಗ ಮೋಸಮಾಡಲೆಂದೇ ಕಾರ್ಯಾಚರಣೆ ನಡೆಸುತ್ತಿವೆ. ಸೋಲಾನ್, ಫ್ಯಾಂಟಮ್ ರೀತಿಯ ಬ್ಲಾಕ್ ಚೈನ್ ಆಲ್ಟ್ ಕಾಯಿನ್ ಗಳು ಈಥ ಕಿಲ್ಲರ್ಸ್, ಮೆಟಾವರ್ಷ್,ಗೇಮ್ ಪೈ ಪ್ಲಾಟ್ ಫಾರ್ಮ್ ಹೆಸರೇಳಿ ಕೊಂಡು ಆನ್ ಲೈನ್ ವಂಚಕರು ಸಜ್ಜಾಗಿದ್ದಾರೆ. ಟ್ರಾವೆಲ್ಸ್ ಪ್ಯಾಕೇಜಿಂಗ್, ವಿದೇಶಿ ವಿನಿಮಯ, ಚಿಟ್ ಫಂಡ್, ಫೈನಾನ್ಸ್ ಸ್ಕೀಂ, ಚೈನ್ ಲಿಂಕ್, ಮನೀ ಡಬ್ಬಿಂಗ್, ಇವೆಲ್ಲಾ ಈಗ ಮುಗಿದ ಹಳೆಯ ಟ್ರಿಕ್ಕುಗಳು. ಹೀಗೇನಿದ್ದರೂ ಸೈಬರ್ ಕಳ್ಳರದೇ ಪಾರುಪತ್ಯ. ಕ್ರಿಪ್ಟೋ ಕರೆನ್ಸಿ ಹ್ಯಾಕರ್ಸ್ ಗಳದೇ ಸಾಮ್ರಾಜ್ಯ. ಟವರ್ ಟ್ರೇಡಿಂಗ್ ಆಫ್, ಗೋಲ್ಡ್ ಟ್ರೇಡಿಂಗ್, ಸ್ಟಾಕ್ ಮಾರ್ಕೆಟ್, ಶೇರ್ ಟ್ರೇಡಿಂಗ್, ಕ್ರಿಪ್ಟೋ ಮೈನಿಂಗ್ ಹೆಸರಿನ ತರಾವರಿ ಹೈಟೆಕ್ ವಂಚನೆ. ಆದ ಕಾರಣದಿಂದ ಜನರು ಈ ಕಣ್ಣಿಗೆ ಕಾಣದ ಡಿಜಿಟಲ್ ಕರೆನ್ಸಿಗಳ ಹಿಂದೆ ಹೋಗಿ ದುಡ್ಡು ಕಳೆದುಕೊಂಡು ದುಃಖಪಡುವ ಬದಲು ತೆಪ್ಪಗಿರುವುದೇ ಲೇಸಲ್ಲವೆ?.**


ದೆಹಲಿಯ ಸೈಬರ್ ಪೊಲೀಸರ ಕೈಲಿ ಬೆಂಡೆತ್ತಿಸಿಕೊಂಡು ಸುದ್ದಿ ಯಾಗಿದ್ರೂ. ಎರಡು ವರ್ಷಗಳ ಹಿಂದೆ ಬಿಸಿನೆಸ್ ಹಬ್ ದೆಹಲಿಯಲ್ಲಿ ಪ್ಲೂಟೋ ಅನ್ನೂ ಹೆಸರಲ್ಲಿ ಭರತ್ ವರ್ಮಾ ಅನ್ನುವವನು ದುಬೈ ಬೇಸ್ಡ್ ಬಿಟ್ ಕಾಯಿನ್ ಗ್ಲೋಬಲ್ ಟ್ರೇಡಿಂಗ್ ಕಂಪನಿ ತೆರೆದು ಜನರಿಂಥ 50ಕೋಟಿ ಕಿತ್ತು ವಂಚಿಸಿ ಫಂಜಿಸ್ಕೀಮು. ಲಿಟ್ ಕಾಯಿನ್-ಬಿಟ್ ಕಾಯಿನ್ ಅಂತೆಲ್ಲಾ ಕತೆ ಕಟ್ಟಿ ಜೈಲು ಸೇರಿದ್ದ.



ದೇಶದ ಆರ್ಥಿಕತೆಗೆ ಕಂಟಕ ವಾಗುತ್ತಿರುವ ಈ ಕ್ರಿಪ್ಟೋ ಕರೆನ್ಸಿ ಹೆಸರಿನಲ್ಲಿ ದಿನ ನಿತ್ಯ ಕ್ರಿಪ್ಟೋ ಹೂಡಿಕೆ, ವರ್ಗಾವಣೆ, ಆನ್ಲೈನ್ ರಿಜಿಸ್ಟ್ರೇಷನ್, ಪ್ರಾಫಿಟ್ ರಿಟರ್ನ್ ಫೀಝ್ ಹೆಸರೇಳಿ ನಾನಾರೀತಿಯ ಮೋಸ-ವಂಚನೆಗಳಾಗುತ್ತಿದ್ದರೂ ಕೂಡ ಜನ ಕ್ರಿಪ್ಟೋ ಕರೆನ್ಸಿ ಕಡೆಗೆ ಆಕರ್ಷಿತರಾಗಿದ್ದಾರೆ!

## ದಿನವೂ ತಲೆಯೆತ್ತುತ್ತಿವೆ ಬಿಟ್ ಕಾಯಿನ್ ಟ್ರೇಡಿಂಗ್

ದಿನಕ್ಕೊಂದು ಬಿಟ್ ಕಾಯಿನ್ ಟ್ರೇಡಿಂಗ್ ಕಂಪನಿಗಳು ತಲೆಯೆತ್ತಿ ಕೈಬೀಸಿ ಕರೆಯುತ್ತಿವೆ. ಕ್ರಿಪ್ಟೋ ರೀವಾರ್ಡ್ಸ್! ಬಿಟ್ ಕಾಯಿನ್ ವೋಚರ್ ಗಿಫ್ಟ್! ಐಫೋನ್ ಫಾರ್ ಫಸ್ಟ್ ಬಿಟ್ ಕಾಯಿನ್ ವಿನ್ನರ್! ಅಂತೇಳುತ್ತ ನಾನಾ ವಿಧದ ಆಸೆ ಆಮಿಸಗಳನ್ನೊಡ್ಡಿ ಮದ್ಯಮವರ್ಗಗಳನ್ನು ತನ್ನತ್ತ ಸೆಳೆಯುತ್ತಿವೆ. 'ಕ್ರಿಪ್ಟೋ ಅಕಾಡೆಮಿ! ಕ್ರಿಪ್ಟೋ ಟೆಕ್ನಾಲಜಿ! ಎಂಬ ಅತ್ಯಾಕರ್ಷಕ ಪದಪುಂಜಗಳು ಆನ್ಲೈನ್ ನಲ್ಲಿ ಹರಿದಾಡುತ್ತಿವೆ. ದೊಡ್ಡ ದೊಡ್ಡ ಕ್ಯಾಪಿಟಲಿಸ್ಟ್ ಗಳು ಕ್ರಿಪ್ಟೋ ಕರೆನ್ಸಿಗಳಲ್ಲಿ ಹಣ ಹೂಡಿದ್ದಾರೆಂದು ಬಡವರು ತಮ್ಮ ಕೈಲಿದ್ದ ಹಣವನ್ನು ಇನ್ವೆಷ್ಟ್ ಮೆಂಟ್ ಪ್ಲಾಟ್ ಫಾರ್ಮ್ ಬ್ರಮೆಯಲ್ಲಿ ತೊಡಗಿಸಿ, ಬಿಟ್ ಕಾಯಿನ್, ಬಿನಾನ್ಸ್ ಕಾಯಿನ್ ಗಳಲ್ಲಿ ಹೂಡಿಕೆ ಮಾಡಿ ಬೀದಿಗೆ ಬೀಳುವ ದಿನ ದೂರವಿಲ್ಲ. ಅಂತರ್ಜಾಲದಲ್ಲಿ ಈಗಾಗಲೇ ಹಲವಾರು ನಕಲಿ ಕಂಪನಿಗಳು ನಕಲಿ ವಾಲೆಟ್-ಆಪ್ ಗಳು ನಾಮಹಾಕಲು ಕಾದು ಕುಂತಿವೆ.3ಮಿಲಿಯನ್ ಈ-ಬುಕ್ ಗಳು ಕ್ರಿಪ್ಟೋಕರೆನ್ಸಿ ಟೈಟಲ್ ನಲ್ಲೇ ಮಾರಾಟಕ್ಕಿವೇ! ಬಿಟ್ ಕಾಯಿನ್ ದಃದೆಯಲ್ಲಿ ಮೋಸಹೋದರೆ ಕಂಪ್ಲೇಂಟ್ ಕೊಡೋದು ಕಷ್ಟ. ಏಕೆಂದರೆ ಅದೂ ಇನ್ನೂ ಇಂಡಿಯಾದಲ್ಲೇ ಕ್ರಿಪ್ಟೋಕರೆನ್ಸಿ ಬಗ್ಗೆ ಸರಿಯಾದ ಕಾನೂನೇ ರಚನೆಯಾಗಿಲ್ಲ. ನಮ್ಮ ಮೊಬೈಲ್ನಲ್ಲಿ ಇರೋ ವಾಲೆಟ್ ನಿಂದ ಬಿಟ್ ಕಾಯಿನ್ ಕದಿಯೋ ಹ್ಯಾಕರ್ ಗಳೀಗೇನು ಕಮ್ಮಿ ಇಲ್ಲ



ಚುನಾಯಿತ ಸರ್ಕಾರಗಳಿಗೆ ಚುರುಕು ಮುಟ್ಟಿಸಿ ಸವಾಲು ಒಡ್ಡುತ್ತಿರುವ ಈ ಖಾಸಗಿ ಕಾಸುಗಳಾದ ಕಾಯಿನ್(ಬಿಟಿಸಿ), ಇಥೇರಿಯಂ,ಜೀಲಿಯಂ,ಬಿ.ಎನ್.ಬಿ, ಬಿನಾನ್ಸ್ ಕಾಯಿನ್ ,ಟಿಥರ್,ಕಾರ್ಡಾನೊ,ಪ್ಯೊಲ್ಯೂಡಾಟ್, ಎಕ್ಸ್ ಆರ್.ಪಿ. ಚೈನ್ ಲಿಂಕ್, ಲೈಟ್ ಕಾಯಿನ್,ಸೆಲ್ಲಾರ್, ಆಲ್ಟ್ ಕಾಯಿನ್, ಡಾಗೀ ಕಾಯಿನ್,ಡೋಚೋ ಕಾಯಿನ್ ಮುಂತಾದವುಗಳ ಬೆಲೆಯಲ್ಲೂ ಏರಿಳಿತ ಕಾಣುತ್ತಿವೆ. ಪ್ರತಿನಿತ್ಯ ಬೆಲೆಯ ಏರಿಳಿತದ ಅರಿವಿದ್ದರೂ, ಜಗತ್ತಿನ ಐದು ಪ್ರಮುಖ ರಾಷ್ಟ್ರಗಳು ಈ ಬಿಟ್ ಕಾಯಿನ್, ಇಥೆರಿಯಂ ರೀತಿಯ ಡಿಜಿಟಲ್ ಇ-ಕರೆನ್ಸಿಗಳನ್ನು ಸಂಪೂರ್ಣವಾಗಿ ನಿಶೇಧಿಸಿದ್ದರೂ, ಜನರ ಬಿಟ್ ಕಾಯಿನ್ ಮೋಹ ನಿಂತಿಲ್ಲ! ಚೀನಾ, ಬೊಲಿವಿಯಾ, ಟರ್ಕಿ, ಇಂಡೋನೇಷ್ಯಾ ಮತ್ತು ಈಜಿಪ್ಟ್ ದೇಶಗಳು ಅಧಿಕ್ರತವಾಗಿ ಈ ಬಿಟ್ ಕಾಯಿನ್ ನಂತಹ ಡಿಜಿಟಲ್ ಕ್ರಿಪ್ಟೋಕರೆನ್ಸಿಯನ್ನು ನಿಷೇಧಿಸಿವೆ! ಈ ಮೇಲ್ಕಂಡ ಎಲ್ಲಾ ಐದು ದೇಶಗಳಲ್ಲೂ ಕ್ರಿಪ್ಟೋಕರೆನ್ಸಿಗಳ ಪ್ರಚಾರ-ವ್ಯಾಪಾರಕ್ಕೆ ಸಂಬಂಧಿಸಿದಂತೆ ಹೊಸ ನೀತಿ ನಿಯಮ ನಿಬಂಧನೆಗಳನ್ನು ಜಾರಿಮಾಡಿ ಡಿಜಿಟಲ್ ಟೋಕನ್ ಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹಾಗೆಯೇ ಇವುಗಳನ್ನು ಅಕ್ರಮವಾಗಿ ಬಳಸುವುದು ಕಾನೂನು ಬಾಹಿರವೆಂದು ಘೋಷಿಸಿರುವ ಐದು ರಾಷ್ಟ್ರಗಳು ಕ್ರಿಪ್ಟೋಕರೆನ್ಸಿಗಳ ವಿಷಯದಲ್ಲಿ ಕಠಿಣ ನಿಲುವು ತಾಳಿವೆ. ಚೀನಾ ಅಧ್ಯಕ್ಷ ಜೀನ್ ಪಿಂಗ್ ನೇತೃತ್ವದಲ್ಲಿ ಸರ್ಕಾರವಂತೂ ಕ್ರಿಪ್ಟೋಕರೆನ್ಸಿ ಬಿಟ್ ಕಾಯಿನ್ ಧಮನಕ್ಕಾಗಿ ತಮ್ಮದೇ ಕೇಂದ್ರೀಕೃತ ಡಿಜಿಟಲ್ (ರೆನ್ ಮಿನ್ ಬಿ) ಕರೆನ್ಸಿಯನ್ನು ಚಾಲ್ತಿಗೆ ತಂದಿದೆ! ಈಜಿಪ್ಟ್ ಸರ್ಕಾರವಂತೂ ಈ ಕ್ರಿಪ್ಟೋಕರೆನ್ಸಿ ವ್ಯಾಪಾರ-ವ್ಯವಹಾರವನ್ನು ತಮ್ಮ ಮುಸ್ಲಿಂ ಶರಿಯಾ ಕಿನೂನಿನಡಿ 'ಹರಾಮ್' ಎಂದು ಘೋಷಿಸಿ ಕಟ್ಟು ನಿಟ್ಟಾಗಿ ನಿರ್ಭಂಧಿಸಿದೆ! ಕ್ರಿಪ್ಟೋ ಕರೆನ್ಸಿಗೆ ಕಾನೂನು ಮಾನ್ಯತೆ ನೀಡಿದ್ದ ಜಗತ್ತಿನ ಮೂದಲ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಎಲ್ ಸಾಲ್ವೆಡಾರ್ ಎಂಬ ದೇಶದಲ್ಲಿ ಈಗ ಇದ್ದಕ್ಕಿದ್ದಂತೆ ಬಿಟ್ ಕಾಯಿನ್ ವಿರುದ್ಧ ಜನ ಬೀದಿಗೆ ಬಂದು ಬಂಡೆದ್ದು ಪ್ರತಿಭಟನೆ ನಡೆಸಿದ್ದಾರಂತೆ! ಪ್ರತಿಭಟನಾಕಾರರು ಈ ಕ್ರಿಪ್ಟೋಕರೆನ್ಸಿಯು ಬಡ ಲ್ಯಾಟಿನ್ ಅಮೆರಿಕ ದೇಶವಾದ ಎಲ್ ಸಾಲ್ವೆಡಾರ್ ನಲ್ಲಿ ಹಣದುಬ್ಬರ ಹೆಚ್ಚಿಸಿ ಆರ್ಥಿಕ ಅಸ್ಥಿರತೆ ತಂದೊಡ್ಡಲಿದೆಯೆಂದು ಕಳವಳಗೊಂಡಿದ್ದಾರಂತೆ. ಕಣ್ಣಿಗೆ ಕಾಣದೇ ಇಷ್ಟು ಕ್ರೇಜ್ ಹುಟ್ಟಿಸಿರುವ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಿನೇ ದಿನೇ ಟ್ರೆಂಡಿಂಗ್ ನಲ್ಲಿರುವ ಈ ಹೊಸ ಡಿಜಿಟಲ್ ಯುಗದ ಪೇಪರ್ ಲೆಸ್ ಪೇಮೆಂಟ್, ಡಿಜಿಟಲ್ ಮನೀ ಬಿಟ್ ಕಾಯಿನ್ ಬಗ್ಗೆ ಜಗತ್ತಿನೆಲ್ಲೆಡೆ ಈ ರೀತಿಯ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಭಾರತದಲ್ಲೂ ಈ ಬಿಟ್ ಕಾಯಿನ್ ವ್ಯಾಪಾರ ವಹಿವಾಟು ಭರ್ಜರಿಯಾಗಿಯೇ ನಡೆಯುತ್ತಿದೆ. ಮಧ್ಯಮ ವರ್ಗದ ಜನರು, ಶ್ರೀಮಂತರು, ಬಡವರೆನ್ನದೇ ಎಲ್ಲರೂ ದಿಡೀರ್ ಶ್ರೀಮಂತರಾಗುವ ಆಸೆಯಿಂದ ರೇಸಿನ ಕುದುರೆಯ ಬಾಲಕ್ಕೆ ದುಡ್ಡು ಕಟ್ಟಿ ಜೂಜು ಆಡುವಂತೆ ತಮ್ಮ ಬಳಿ ಇದ್ದ ಹಣ, ಒಡವೆ ಮಾರೀ ಈ ಬಿಟ್ ಕಾಯಿನ್ ಗೆ ಹಣ ಹೂಡುತ್ತಿದ್ದಾರೆ! ಕೆಲವರಂತೂ ಸಾಲ ಮಾಡೀ ಕ್ರಿಪ್ಟೋ ಕರೆನ್ಸಿ ಕೊಂಡು ಕೊಂಡು ಬೀಗುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಇದೇ ಬಿಟ್ ಕಾಯಿನ್ ಜಗತ್ತಿನಾದ್ಯಂತ ಅಕ್ರಮ ಕಾನೂನು ಬಾಹಿರ ಎನಿಸಿಕೊಂಡಿತ್ತು! ಡಾರ್ಕ್ ನೆಟ್ ಕಳ್ಳರ, ಹವಾಲ ದಂಧೆಕೋರರ, ಕಿಡ್ನಾಪರ್ ಗಳ, ಮಾದಕವಸ್ತು ಅಕ್ರಮ ಸರಬರಾಜು ದಾರರ, ಭಯೋತ್ಪಾದಕರ ಸಂವಹನದ ಕೊಂಡಿಯಾಗಿದ್ದ ಇದೇ ಬಿಟ್ ಕಾಯಿನ್ ಈಗ ಜಗತ್ತಿನ ಹಾಟ್ ಫೇವರೇಟ್ ಬಿಸಿನೆಸ್ ಕನೆಕ್ಷನ್! 2022ರ ಜನವರಿಯಲ್ಲಿ ದೆಹಲಿಯ ಪೊಲೀಸರು ಕ್ರಿಪ್ಟೋ ಕರೆನ್ಸಿ ಕಳವು ಪ್ರಕರಣವೊಂದರ ಬೆನ್ನುಹತ್ತಿ ಬೆಚ್ಚಿ ಬಿದ್ದಿದ್ದರು. ದೆಹಲಿಯ ಉದ್ಯಮಿ ಒಬ್ಬರ ಡಿಜಿಟಲ್ ವ್ಯಾಲೆಟ್ ನಿಂದ ಕೋಟ್ಯಂತರ ರೂಪಾಯಿ ಕ್ರಿಪ್ಟೋ ಹಣ ಕಳವುಮಾಡಿದ್ದ ಪ್ಯಾಲೇಸ್ತೇನ್ ಭಯೋತ್ಪಾದಕ ಸಂಘಟನೆ ಹಮಾಸ್ ನ ಮಿಲಿಟರಿ ವಿಭಾಗದ ಅಲ್-ಕಸಾಮ್-ಬ್ರಿಗೇಡ್ ನ ವಿಳಾಸ ತಿಳಿಯುತ್ತಿದ್ದಂತೆ ಎಲ್ಲಾ ಬಯಲಾಗಿತ್ತು. ವಿಶ್ವದಾದ್ಯಂತ ಈಗಲೂ ಭಯೋತ್ಪಾದಕ ಸಂಘಟನೆಗಳು ತಾವು ಕದಿಯುವ, ದೇಣಿಗೆ ಪಡೆವ ಕ್ರಿಪ್ಟೋ ಕರೆನ್ಸಿಯಿಂದಲೆ ಬಂದೂಕು ಬಾಂಬುಗಳನ್ನು ಕೊಂಡುಕೊಂಡು ಬಲಿಷ್ಠವಾಗುತ್ತಿರುವುದು, ಡ್ರಗ್ಸ್ ದಂಧೆ, ಮಕ್ಕಳ ಅಶ್ಲೀಲ ವೆಬ್ಸೈಟ್, ಡಾರ್ಕ್ ನೆಟ್ ವೆಬ್ಸೈಟ್, ಹವಾಲಾ ಟ್ರೇಡಿಂಗ್ ವೆಬ್ಸೈಟ್, ಗಳ ಜೊತೆಗೆ ನಂಟು ಹೊಂದಿರುವುದು ಬೆಳಕಿಗೆ ಬಂದಿತ್ತು. ಬಿಟ್ ಕಾಯಿನ್ ವ್ಯವಹಾರ ಅದೊಂದು ದಂಧೆ, ಕಾನೂನು ಬಾಹಿರ ಚಟುವಟಿಕೆ ಮಾಡುವವರು ಬಳಸುವ ಹವಾಲಾ ಮನಿ ಎಂದು ಮೂಗು ಮುರಿಯುತ್ತಾ ಮಡಿವಂತಿಕೆ ಪ್ರದರ್ಶಿಸುತ್ತಾ ಇದ್ದವರೆಲ್ಲಾ ಈಗ ಅದೇ ಮೂಗಿನ ಮೇಲೆ ಬೆರಳಿಟ್ಟು ಕೊಂಡು ತಾವೂ ಬಿಟ್ ಕಾಯಿನ್ ಕೊಳ್ಳಲು ಕ್ಯೂ ನಲ್ಲಿ ನಿಂತಿದ್ದಾರೆ! ಹೇಗಿದೆ ನೋಡಿ ಈ ಬಿಟ್ ಕಾಯಿನ್ ಮಾಯೆ! ಈಗ ನಮ್ಮ ಭಾರತದ ಸರ್ಕಾರವೂ ಈ ಬಿಟ್ ಕಾಯಿನ್ ಕ್ರಿಪ್ಟೋ ಕರೆನ್ಸಿಗಳ ಬಗ್ಗೆ ಮ್ರದುಧೋರಣೆ ತಳೆದಿದ್ದು ಸದ್ಯಕ್ಕೆ ಇಲ್ಲಿ ನಮ್ಮ ದೇಶದಲ್ಲಿ ಬಿಟ್ ಕಾಯಿನ್ ಗೆ ಯಾವುದೇ ಕ್ರಿಪ್ಟೋಕರೆನ್ಸಿಗಳಿಗೇ ನಿಷೇಧವೇನೂ ಹೇರಿಲ್ಲವಾದ್ದರಿಂದ ನಗರಗಳಲ್ಲಿ ಇತ್ತೀಚೆಗೆ ಬಿಟ್ ಕಾಯಿನ್ ಬ್ರೋಕರ್ ಗಳು, ಏಜೆಂಟರು ಫೀಲ್ಡಿಗಿಳಿದಿದ್ದಾರೆ. ಕ್ರಿಪ್ಟೋ ಕರೆನ್ಸಿ ಎಕ್ಸ್ ಚೇಂಜ್ ಕಂಪನಿಗಳು, ಸಣ್ಣಪುಟ್ಟ ಶಾಖೆ ತೆರೆದು ಬಹಿರಂಗವಾಗಿಯೇ ಬಿಟ್ ಕಾಯಿನ್ ಮಾರಲು ಅಂಗಡಿ ತೆರೆಯಲು ಸಜ್ಜಾಗಿವೆ. ಜನರು ನಿದಾನಕ್ಕೆ ಈ ಬಿಟ್ ಕಾಯಿನ್ ಫಲ್ಸ್ ಹಿಡಿಯಲು ಹಿಂದೆಬಿದ್ದು ಹಿಂಬಾಲಿಸುತ್ತಿದ್ದಾರೆ. ಇದರಿಂದ ಭವಿಷ್ಯದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಗೆ ಏನೆಲ್ಲಾ ಗಂಡಾಂತರ ಎದುರಾಗಲಿದೆಯೋ ಬಲ್ಲವರಾರು? 'ಬಾರತದ ಆರ್ಥಿಕತೆ ಮುಂದುವರಿಯಲು ಖಾಸಗಿ ಕ್ರಿಪ್ಟೋಕರೆನ್ಸಿಗಳ ಕೊಡುಗಯ ಬಗ್ಗೆ ನಮಗೆ ವಿಶ್ವಾಸಾರ್ಹ ಉತ್ತರಗಳು ಬೇಕು' ಎಂದು ನಮ್ಮ ಆರ್.ಬಿ.ಐ. ಗವರ್ನರ್ ಶಕ್ತಿಕಾಂತ್ ದಾಸ್ ಆತಂಕ ವ್ಯಕ್ತಪಡಿಸಿದ್ದರು. ವಿಶ್ವದಾದ್ಯಂತ ಕ್ರಿಪ್ಟೋ ಕರೆನ್ಸಿ ವ್ಯಾಪಾರ ವಲಯಕ್ಕೆ ಸಂಬಂಧಿಸಿದ ವ್ಯಾಜ್ಯಗಳು, ಹಲವಾರು ಕ್ರಿಪ್ಟೋ ಎಕ್ಸ್ ಚೇಂಜ್ ಕಂಪೆನಿಗಳು ಗ್ರಾಹಕರಿಗೆ ವಂಚಿಸಿರುವ ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲೇರಿವೆ. 2014 ರಲ್ಲೇ ರಾಸ್ ವಿಲಿಯಂ ಎಲ್ಬ್ರೀಚ್ ಎಂಬುವನ ಮೇಲೆ ಕಂಪ್ಯೂಟರ್ ಹ್ಯಾಕಿಂಗ್, ಮಾದಕವಸ್ತು ಕಳ್ಳಸಾಗಾಣಿಕೆ, ಮನಿ ಲಾಂಡರಿಂಗ್, ಕಾನೂನು ಬಾಹಿರ ಚಟುವಟಿಕೆಗಳ ಆರೋಪ ಹೊರಿಸಿ ಆತ ತನ್ನೆಲ್ಲಾ ದುಷ್ಕೃತ್ಯ ಗಳಿಗೂ ಆನ್ ಲೈನ್ ಬ್ಲಾಕ್ ಮಾರ್ಕೆಟ್ ನಲ್ಲಿ ಬಿಟ್ ಕಾಯಿನ್ ಪಡೆಯುತ್ತಿದ್ದನೆಂದು ಬಂಧಿಸಲಾಗಿತ್ತು.

## ಹೂಡಿಕೆ ನೆಪದಲ್ಲಿ ದೋಚುತ್ತಾರೆ ಹಣ

ಕರ್ನಾಟಕದವನೇ ಆದ ಅಂತಾರಾಷ್ಟ್ರೀಯ ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಭಟ್ ನಮ್ಮದೇ ಕರ್ನಾಟಕ ರಾಜ್ಯ ಸರ್ಕಾರದ ವೆಬ್ಸೈಟ್ ಗಳನ್ನು ಹ್ಯಾಕ್ ಮಾಡಿ ಟೆಂಡರ್ ಗೋಲ್ಮಾಲ್ ನಡೆಸಿ ರಾಜಕಾರಣಿಗಳಿಗೆ, ಗುತ್ತಿಗೆದಾರರಿಗೆ ಲಾಭಮಾಡಿಕೊಟ್ಟಿದ್ದ. ಅಮೆರಿಕಾ-ಚಿನಾ ದೇಶಗಳ ಕಂಪನಿ ವೆಬ್ಸೈಟ್ ಹ್ಯಾಕ್ ಮಾಡಿ ನೂರಾರು ಕೋಟಿ ಬಿಟ್ ಕಾಯಿನ್ ಕದ್ದು ಬೆಂಗಳೂರಿನ ಪೊಲೀಸರಿಗೆ ಸಿಗೇಬಿದ್ದು, ಬಿಟ್ ಕಾಯಿನ್ ಹಗರಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಪ್ರಭಾವಿ ಸಚಿವರ ಹೆಸರು ತಳುಕು ಹಾಕಿಕೊಂಡು, ಸರ್ಕಾರಕ್ಕೆ ಸಂಚಕಾರ ತಂದಿದ್ದ. ಹಾಗೆಯೇ ಪಾಸ್ಕಲ್ ರೀಡ್ ಮತ್ತು ಮಿಚೆಲ್ ಅನ್ವರ್ ಎಸ್ಪಿನೋಜಾ ಎಂಬಿಬ್ಬರು ನಕಲಿ ವಹಿವಾಟು ನಡೆಸಿ 30 ಸಾವಿರ ಡಾಲರ್ ಮೊತ್ತದ ಹಣವನ್ನು ಬಿಟ್ ಕಾಯಿನ್ ಆಗೀ ಪರಿವರ್ತಿಸಿ ಮನೀ ಲಾಂಡರಿಂಗ್ ಪ್ರಕರಣ ಳದಲ್ಲಿ ಜೈಲು ಪಾಲಾಗಿದ್ದರು. ಎರಡೂ ಪ್ರಕರಣಗಳಲ್ಲಿಯೂ ಬಿಟ್ ಕಾಯಿನ್ ಎಂಬುದು ನಿಜವಾದ ಹಣವೆ ಅಲ್ಲವೆಂದು ಕೋರ್ಟ್ ಆ ಪ್ರಕರಣವನ್ನೇ ರದ್ದುಗೊಳಿಸಿ ಅಪರಾಧಿಗಳು ಬಿಡುಗಡೆಗೆ ಯಾದರು! ಬಿಟ್ ಕಾಯಿನ್ ಹೂಡಿಕೆದಾರರು ಗಮನಿಸಬೇಕಾದ ಮತ್ತೆರಡು ಪ್ರಮುಖ ಪ್ರಕರಣಗಳೆಂದರೇ..ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಪಾಲಿ ನೆಟ್ವರ್ಕ್ ಎಂಬ ಕ್ರಿಪ್ಟೋ ಪ್ಲಾಟ್ ಫಾರ್ಮ್ ಕಂಪೆನಿ ಯಿಂದ 610ಮಿಲಿಯನ್ ಡಾಲರ್ ಮೌಲ್ಯದ ಇಥೆರಿಯಂ, ಬಿನಾನ್ಸ್ ಕಾಯಿನ್, ಸ್ಮಾರ್ಟ್ ಚೈನ್, ಡಿಜಿಟಲ್ ಕರೆನ್ಸಿ ಟೋಕನ್ ಗಳನ್ನು ಕದಿಮುವಲ್ಲಿ ಹ್ಯಾಕರ್ಸ್ ಗಳು ಯಶಸ್ವಿಯಾಗಿದ್ದಾರೆ! ಇತ್ತೀಚೆಗಂತೂ ಕ್ರಿಪ್ಟೋ ಕರೆನ್ಸಿ ಟ್ರೇಡಿಂಗ್ ನಲ್ಲೂ, ಡಿಜಿಟಲ್ ದರೋಡೆ ಕೋರರ ವರ್ಚುವಲ್ ಹ್ಯಾಕರ್ಸ್ ಗಳ ಕಾಟ ಅಧಿಕ ವಾಗಿದೆ. ಹೀಗೆ ಬಡ ಮದ್ಯಮ ವರ್ಗದ ಜನ ದುಡಿದು, ಸಾಲಮಾಡಿ ಹೂಡಿಕೆ ಮಾಡಿದ ಹಣವನ್ನು ನಿಮಿಷಗಳಲ್ಲಿ ಈ ಕರೆನ್ಸಿ ಕಳ್ಳರು ಹ್ಯಾಕ್ ಮಾಡಿ ಕದ್ದೋಯ್ದರೇ ಗತಿ ಏನೂ? ಈಗ ಜನರ ಹಣ ಹಿಂದಿರುಗಿಸಲು ಸೈಬರ್ ಹ್ಯಾಕಿಂಗ್ ದರೋಡೆ ಕೋರರ ಬಳಿ ಅಂಗಲಾಚುತ್ತಿರುವ ಕ್ರಿಪ್ಟೋ ಎಕ್ಸ್ ಚೇಂಜ್ ಕಂಪನಿ ಪಾಲಿ ನೆಟ್ವರ್ಕ್ ತಮ್ಮದೇ ಕಂಪನಿಯಲ್ಲಿ ಸೈಬರ್ ಭದ್ರತಾ ಸಲಹೆಗಾರನ ಹುದ್ದೆನೀಡುವ ಆಫರ್ ನೀಡಿ ಬೇಡುತ್ತಿದೆ! ತಮ್ಮ ಜೀವಮಾನದ ಸಂಪಾದನೆಯನ್ನು ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಲು ಮುಂದಾಗಿರುವ ಕೆಲವರು ಇಂತಹ ಗಂಭೀರ ಪ್ರಕರಣಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕಿದೆ. ಕ್ರಿಪ್ಟೋ ಕರೆನ್ಸಿ ಹೂಡಿಕೆ ಯನ್ನು ಉಳಿತಾಯ, ವ್ಯಾಪಾರವೆಂದು ನಂಬಿರುವವರು ಬೆಚ್ಚಿ ಬೀಳುವಂತೆ ಬ್ರಿಟನ್ ನಲ್ಲಿ ಕ್ರಿಪ್ಟೋ ಕರೆನ್ಸಿ ಹಗರಣವೊಂದು ಕಳೆದ ವರ್ಷಆಗಸ್ಟ್ ತಿಂಗಳಲ್ಲೇ ನಡೆದಿದೆ.



● 14ನೇ ಪುಟಕ್ಕೆ...

# ಬೆಲೆ ಏರಿಕೆಯಾದರೂ ಈ ಮೌನ ಯಾಕೆ?

● 5ನೇ ಪುಟದಿಂದ...

ಮಾರ್ಚ್ 10 ರಂದು ವಿಧಾನಸಭೆ ಚುನಾವಣೆ ಮುಗಿದ ನಂತರ ದರ ಪರಿಷ್ಕರಣೆ ನಿರೀಕ್ಷಿಸಲಾಗಿತ್ತು. ಕೆಲ ದಿನಗಳಿಂದ ನಿರೀಕ್ಷಿಸಲಾಗುತ್ತಿದ್ದಂತೆಯೇ ಭಾರತದಾದ್ಯಂತ ಪೆಟ್ರೋಲ್-ಡೀಸೆಲ್ ದರಗಳಲ್ಲಿ ಇನ್ನಷ್ಟು ಹೆಚ್ಚಳವಾಗಬಹುದಾದ ಸೂಚನೆಗಳು ಸಿಗುತ್ತಿವೆ.

ರಷ್ಯಾ-ಉಕ್ರೇನ್ ಯುದ್ಧದ ನಡುವೆ ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚುತ್ತಿರುವ ಕಚ್ಚಾ ತೈಲ ದರಗಳಿಂದ ಉಂಟಾದ ನಷ್ಟವನ್ನು ತುಂಬಲು ತೈಲ ಮಾರುಕಟ್ಟೆ ಕಂಪನಿಗಳು ಮುಂಬರುವ ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವ ಸೂಚನೆಗಳು ಇವೆ.

ದೆಹಲಿಯಲ್ಲಿ ಪೆಟ್ರೋಲ್ ಬೆಲೆಯು ಲೀಟರ್‌ಗೆ 99.41 ರೂಪಾಯಿ ಆಗಿತ್ತು. ಇನ್ನು ಡಿಸೇಲ್ ಬೆಲೆಯು ಲೀಟರ್‌ಗೆ 91.47 ಗೆ ತಲುಪಿದೆ. ಕರ್ನಾಟಕ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಏರಿಕೆ ಕಂಡಿದ್ದು, 105.62 ರೂಪಾಯಿಗೆ ಹೆಚ್ಚಿದೆ. ನಿನ್ನೆ 104.78 ರೂಪಾಯಿ ಇದ್ದ ಪೆಟ್ರೋಲ್ ಬೆಲೆಯು ಇಂದು 0.84 ಪೈಸೆ ಹೆಚ್ಚಳವಾಗಿ 105.62 ರೂಪಾಯಿಗೆ ತಲುಪಿದೆ.

ಇನ್ನು ಕರ್ನಾಟಕದಲ್ಲಿ ಡೀಸೆಲ್ ಬೆಲೆಯು ಕೂಡಾ ಏರಿದೆ. 0.68 ಪೈಸೆ ಹೆಚ್ಚಳವಾಗಿ, ಡಿಸೇಲ್ ಬೆಲೆಯು 89.70 ಗೆ ತಲುಪಿದೆ. ಚೆನ್ನೈನಲ್ಲಿ ಪೆಟ್ರೋಲ್ ದರ 105.94 ರೂಪಾಯಿ, ಡೀಸೆಲ್ ದರ 96.00 ರೂಪಾಯಿ ಇದೆ.


ಕೋಲ್ಕತ್ತಾದಲ್ಲಿ ಪೆಟ್ರೋಲ್ ದರ 109.68 ರೂಪಾಯಿ, ಡೀಸೆಲ್ ದರ 94.62 ರೂಪಾಯಿ ಆಗಿದೆ. ದೇಶದ ವಾಣಿಜ್ಯ ನಗರಿ ಮುಂಬೈನಲ್ಲಿ ಇಂದು ಪೆಟ್ರೋಲ್ ಬೆಲೆ 85 ಪೈಸೆ ಹೆಚ್ಚಾಗಿ ರೂ. 115.04 ಗೆ ತಲುಪಿದರೆ, ಡೀಸೆಲ್ ಬೆಲೆ 75 ಪೈಸೆ ಹೆಚ್ಚಾಗಿದ್ದು ರೂ. 99.25. ಆಗಿದೆ. ಹೈದರಾಬಾದ್‌ನಲ್ಲಿ ಪೆಟ್ರೋಲ್ ದರ 113.61 ರೂಪಾಯಿ ಆಗಿದ್ದರೆ, ಡೀಸೆಲ್ ದರ 99.84 ರೂಪಾಯಿ ಆಗಿದೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ನಿರಂತರವಾಗಿ ಪ್ರತಿದಿನವೂ ಕಳೆದ ಒಂದು ವಾರದಿಂದ ಹೆಚ್ಚಾಗುತ್ತಲೇಇದೆ ,ತೈಲ ಸಂಸ್ಥೆಗಳು ಕಚ್ಚಾ ವಸ್ತುಗಳ ಬೆಲೆಯನ್ನು ಗ್ರಾಹಕರಿಗೆ ವರ್ಗಾಯಿಸಿದ ಕಾರಣ ಏಳು ದಿನಗಳಲ್ಲಿ ನಿರಂತರವಾಗಿ ಪ್ರತಿನಿತ್ಯವೂ ಹೆಚ್ಚಾಗಿದೆ ಇದರ ಪರಿಣಾಮ ಕಳೆದ ಒಂದು ವಾರದಲ್ಲಿ ಕನಿಷ್ಠ 5 ರೂ ಹೆಚ್ಚಾಗಿದೆ ದೇಶದ ರಾಜದಾನಿ ದೆಹಲಿಯಲ್ಲಿ ಈಗ ಇಂದನ ಬೆಲೆ ಹೆಚ್ಚಳವಾಗಿದೆ.

### ಇನ್ನೂ ಔಷಧಿಗಳ ಬೆಲೆಯೂ ಏರಿಕೆ

ಭಾರತದಲ್ಲಿ ಕೊರೊನಾವೈರಸ್ ಸಾಂಕ್ರಾಮಿಕ ಪಿಡುಗಿನ ಹಾವಳಿ ಇಳಿಮುಖವಾಗಿರುವುದರ ನಡುವೆ 800ಕ್ಕೂ ಹೆಚ್ಚು ಔಷಧಿಗಳ ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.ದೇಶದಲ್ಲಿ ಪ್ಯಾರಾಸಿಟಮಲ್ ಸೇರಿದಂತೆ ರೋಗ ನಿರೋಧಕ, ರೋಗ ವಿರೋಧಿ ಮತ್ತು ನೋವು ನಿವಾರಕ ಔಷಧಿಗಳೂ ಸೇರಿ 800ಕ್ಕೂ ಹೆಚ್ಚು ಔಷಧಿಗಳ ಬೆಲೆಯಲ್ಲಿ ಏಪ್ರಿಲ್ 1ರಿಂದ ಶೇ.10ರಷ್ಟು ಏರಿಕೆ ಆಗಲಿದೆ.

ಕಳೆದ 2020 ಮತ್ತು 2021ರ ಅವಧಿಯಂತೆ ಔಷಧಿಗಳ ಬೆಲೆ ನಿಗದಿ ಪ್ರಾಧಿಕಾರ ಆಗಿರುವ ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರವು ಔಷಧಿಗಳ ಸಗಟು ಬೆಲೆ ಸೂಚ್ಯಂಕ(ಹೋಲ್





ಸೇಲ್ ಪ್ರೈಸ್ ಇಂಡೆಕ್ಸ್)ದಲ್ಲಿ ಶೇ.10.7ರಷ್ಟು ಏರಿಕೆ ಮಾಡುವುದಾಗಿ ಶುಕ್ರವಾರ ಘೋಷಿಸಿದೆ. "ಔಷಧಗಳ ಬೆಲೆ ನಿಯಂತ್ರಣ ಆದೇಶ, 2013 ರ ನಿಬಂಧನೆಗಳ ಪ್ರಕಾರ ಮುಂದಿನ ಕ್ರಮಕ್ಕಾಗಿ ಎಲ್ಲರ ಗಮನಕ್ಕೆ ತರಲಾಗಿದೆ" ಎಂದು ನೋಟಿಸ್ ಮೂಲಕ ತಿಳಿಸಲಾಗಿದೆ.

### ಅಗತ್ಯ ಔಷಧಿಗಳ ಬೆಲೆಯಲ್ಲಿ ಶೇ.10.7ರಷ್ಟು ಏರಿಕೆ:

ದೇಶದ ಅಗತ್ಯ ಔಷಧಿಗಳ ಪಟ್ಟಿಯಲ್ಲಿರುವ 800 ಔಷಧಿಗಳ ಬೆಲೆಯಲ್ಲಿ ಶೇ.10.70ರಷ್ಟು ಏರಿಕೆ ಮಾಡಲಾಗಿದೆ."ಆರ್ಥಿಕ ಸಲಹೆಗಾರ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಕಚೇರಿ ಒದಗಿಸಿದ ಸಗಟು ಬೆಲೆ ಸೂಚ್ಯಂಕಂ ಅಂಕಿ-ಅಂಶಗಳನ್ನು ಆಧರಿಸಿ, 2020 ರಲ್ಲಿನ ಅನುಗುಣವಾದ ಅವಧಿಯಲ್ಲಿ 2021ರ ಕ್ಯಾಲೆಂಡರ್ ವರ್ಷದಲ್ಲಿ ಶೇ.10.76607ರಷ್ಟು ಸಗಟು ಬೆಲೆ ಸೂಚ್ಯಂಕದಲ್ಲಿನ ವಾರ್ಷಿಕ ಬದಲಾವಣೆ ಮಾಡಲಾಗುತ್ತದೆ," ಎಂದು ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರ ಸೂಚನೆ ನೀಡಿದೆ.

### 800 ಅಗತ್ಯ ಔಷಧಿಗಳ ಬೆಲೆ ಏರಿಕೆ:

ಯಾವುದೇ ರೋಗಕ್ಕೆ ಸಂಬಂಧಿಸಿದ ಸಾಮಾನ್ಯ ಸೋಂಕು, ಜ್ವರ, ಚರ್ಮ ರೋಗಗಳು, ಹೃದ್ರೋಗಗಳು, ರಕ್ತಹೀನತೆ, ಅಧಿಕ ರಕ್ತದೊತ್ತಡವನ್ನು ಗುಣಪಡಿಸುವುದಕ್ಕಾಗಿ ಬಳಸುವ ಔಷಧಿಗಳ ಬೆಲೆಗಳು ಏಪ್ರಿಲ್ 1ರಿಂದ ಹೆಚ್ಚಾಗುತ್ತವೆ. ಅದರಲ್ಲಿ ಅಜಿಥ್ರೊಮೈಸಿನ್, ಸಿಪ್ರೊಫ್ಲೋಕ್ಸಾಸಿನ್ ಹೈಡ್ರೋಕ್ಲೋರೈಡ್, ಮೆಟ್ರೋನಿಡಜೋಲ್, ಪ್ಯಾರೆಸಿಟಮಾಲ್, ಫೆನೋಬಾರ್ಬಿಟೋನ್ ಮತ್ತು ಫೆನಿಟೋಯಿನ್ ಸೋಡಿಯಂನಂತಹ ಔಷಧಿಗಳು ಸೇರಿವೆ.

### ವಿದ್ಯುತ್ ಬೆಲೆ ಏರಿಕೆ

ಈ ಎಲ್ಲದರ ನಡುವೆ ರಾಜ್ಯದಲ್ಲಿ ವಿದ್ಯುತ್ ದರವನ್ನು ಏರಿಕೆ ಮಾಡಿದೆ ಅಡುಗೆ ಅನಿಲ 40 ರೂಗೆ ಏರಿಕೆಯಾಗಿದೆ, ಜೊತೆಗೆ ಅಡುಗೆ ಎಣ್ಣೆ ಸಹ ಏರಿಕೆಯಾಗಿದೆ ಇದರ ಜೊತೆ ಜೊತೆಯಲ್ಲಿಯೇ ಹೊಟೇಲ್‌ಗಳಲ್ಲಿ ತಿಂಡಿಗಳ ಬೆಲೆಯನ್ನು ಏರಿಕೆಮಾಡಿದೆ. ಎಲ್ಲವೂ ಏರಿಕೆಯಾಗುತ್ತಿರುವ ಪರಿಣಾಮ ಸಾಮನ್ಯ ಜನರ ಬದುಕು ದುಸ್ತರವಾಗುತ್ತಿದೆ. ಸರ್ಕಾರಗಳು ಬೆಲೆ ನಿಯಂತ್ರಣ ಮಾಡದೇ ಹೋದರೆ ಬದುಕು ಮತ್ತಷ್ಟು ಕಷ್ಟವಾಗುವ ಸಾಧ್ಯತೆಗಳಿವೆ ಈ ಏರಿಕೆ ಬಿಸಿ ಮುಂದಿನ ಚುನಾವಣೆ ಮೇಲೆ ಪರಿಣಾಮವೂ ಬೀರಬಹುದು.

### ಬೆಲೆ ಏರಿಕೆ ಹಿಂದೆ ರಾಜಕೀಯ ಸಂಘರ್ಷ

ಭಾರತ ರಷ್ಯಾ ಜೊತೆಗಿಂತ ಅಮೇರಿಕಾ ಜೊತೆ ಹೆಜ್ಜೆ ಹಾಕಬೇಕು ಅಂತ ಅಮೇರಿಕಾ ಫರ್ಮಾನು ಹೊರಡಿಸುತ್ತೆ. ಅಮೇರಿಕಾ ಹಾಕಿದ ತಾಳಕ್ಕೆ ಕುಣಿಯುವ ಸರಕಾರ ಈಗ ಭಾರತದಲ್ಲಿಲ್ಲ! ಅಮೇರಿಕಾ ಜೊತೆಗೆ ವ್ಯಾಪಾರ ಇರಬಹುದು, ಬೇರೆ ರೀತಿಯ ಸಂಬಂಧ ಇರಬಹುದು ಮೋದಿ ಸುಲಭವಾಗಿ ನಮ್ಮ ತಾಳಕ್ಕೆ ಕುಣಿಯುವ ವ್ಯಕ್ತಿಯಲ್ಲ ಎನ್ನುವುದು ಅವರಿಗೆ ತಿಳಿದಿದೆ. ಅವರ ದೇಶ ಆರ್ಥಿಕವಾಗಿ ಕಂಗೆಟ್ಟಿದೆ ಅದನ್ನ ಉದ್ಧರಿಸಲು ಭಾರತ ಸೇರಿ ಅನೇಕ ದೇಶಗಳ ರೊಟ್ಟಿಯ ತುಂಡು ಕಸಿಯಬೇಕಿದೆ. ಮೊದಲಾಗಿದ್ದರೆ ನಿಂಗೊಂದು ತುಂಡು ನೀಡುತ್ತೇವೆ ಎಂದಿದ್ದರೆ ತಲೆದೂಗುವ ಪ್ರೈಮ್ ಮಿನಿಸ್ಟರ್ ಗಳಿದ್ದರು, ಆದರೀಗ?? ಬದಲಾದ ಭಾರತ ಮತ್ತು ಅದರ ವಿದೇಶಾಂಗ ನೀತಿ ಅಮೆರಿಕಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ನೀವು ಉಕ್ರೈನ್ ಪ್ರೆಸಿಡೆಂಟ್ ಅವರ ಇತ್ತೀಚಿನ ವಿಡಿಯೋಗಳನ್ನ ನೋಡಿ, ತನ್ನ ದೇಶದ ಜನರು ಗುಳೆ ಹೋಗಿರುವುದು, ಸಾಯುತ್ತಿರುವುದು, ನಗರಕ್ಕೆ ನಗರವೇ ಮಸಣವಾಗಿ ಪರಿವರ್ತನೆಗೊಳ್ಳುತ್ತಿದ್ದರೂ ಆತನ ಮುಖದ ಮೇಲಿನ ನಗು ಮಾಸಿಲ್ಲ. ಪುಟಿನ್ ಖಾಸಗಿ ಆಸ್ತಿ ಕರಗುವುದಿಲ್ಲ ಇದು ಇಂದಿನ ವಿಶ್ವವ್ಯವಸ್ಥೆ.

ರೋತ್ಸ್ ಚೈಲ್ಡ್. ಬ್ರೂಸ್, ಕ್ಯಾವೆಂಡಿಷ್, ಹ್ಯಾನೋವರ್, ಕ್ರುಪ್, ರೋಕೆ ಫಿಲ್ಲರ್, ವಾರ್ಬುರ್ಗ್, ಡೇ ಮೆಡಿಸಿ ಇನ್ನೊಂದು ನಾಲ್ಕು ಮನೆತನೆಗಳು ಜಗತ್ತನ್ನ ತಮ್ಮ ಕಪಿಮುಷ್ಠಿಯಲ್ಲಿ ಹಿಡಿದಿಟ್ಟಿವೆ. ಇವತ್ತು ತಂತ್ರಜ್ಞಾನ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂದರೆ ಜಗತ್ತಿನ ಯಾವ ವ್ಯಕ್ತಿಯೂ ಆಹಾರ ಮತ್ತು ಬಟ್ಟೆಗಾಗಿ ಅಂದರೆ ಮೂಲಭೂತ ವಿಷಯಕ್ಕೆ ದುಡಿಯುವುದು ಬೇಕಿಲ್ಲ ಎನ್ನುವ ಮಟ್ಟಿಗೆ. ಆದರೇನು ಜನರನ್ನ ತಂತ್ರಜ್ಞಾದ ಪೂರ್ಣ ಪ್ರಯೋಜನ ಪಡೆಯಲು ಬಿಟ್ಟರೆ ಅವರ ನಿಯಂತ್ರಣ ತಪ್ಪುವುದಿಲ್ಲವೇ? ಇಷ್ಟೆಲ್ಲಾ ಹೊಡೆದಾಟ ಜಗತ್ತಿನ ಮೇಲಿರುವ ತಮ್ಮ ನಿಯಂತ್ರವನ್ನ ಕಾಯ್ದುಕೊಳ್ಳುವುದು ಮತ್ತು ಇನ್ನಷ್ಟು ನಿಯಂತ್ರಣ ಸಾಧಿಸುವುದಕ್ಕೆ ಮಾತ್ರ!. ಇಂತಹ ಶಕ್ತಿಗಳ ಹಿಡಿತಕ್ಕೆ ಸಿಲುಕದೆ ಭಾರತ ಪ್ರಥಮ ಬಾರಿಗೆ ತನ್ನ ವಿದೇಶಾಂಗ ನೀತಿಯಲ್ಲಿ ಥೇಟ್ ಅಮೇರಿಕಾ ದೇಶದಂತೆ ಡಬಲ್ ಸ್ಟ್ಯಾಂಡರ್ಡ್ ಅನುಸರಿಸುವುದು ಸದ್ಯದ ಮಟ್ಟದಲ್ಲಿ ಭಾರತ ಅದೆಷ್ಟು ಬಲಶಾಲಿಯಾಗಿದೆ ಎನ್ನುವುದನ್ನ ಸಾರಿ ಹೇಳುತ್ತದೆ. ನಿಮಗೆಲ್ಲಾ ನೆನಪಿರಲಿ ಆರ್ಥಿಕವಾಗಿ ಸದೃಢವಾಗಿರದ ಹೊರತು ಈ ರೀತಿಯ ನಿರ್ಧಾರವನ್ನ ತೆಗೆದುಕೊಳ್ಳಲು ಸಾಧ್ಯವಿಲ್ಲ.


ಹಿಂದೆ ಯುದ್ದ ಅಂದರೆ ಮದ್ದು ಗುಂಡು ಹಾರಿಸಿ ಮಾಡುವ ಯುದ್ದವಾಗಿತ್ತು ಇಂದು ಯುದ್ದ ಅಂದರೆ ಅದಕ್ಕೆ ಹಲವು ವ್ಯಾಖ್ಯಾನ ನೀಡಬಹುದು ಅದರಲ್ಲಿ ಒಂದು "ಕರೆನ್ಸಿ ವಾರ್" ಚೀನಾ ದೇಶ ದಶಕಗಳ ನಂತರ ತನ್ನ ಹಣವನ್ನು ಡಾಲರ್ ಎದುರು ಅಪಮೌಲ್ಯಗೊಳಿಸಿ ಕರೆನ್ಸಿ ವಾರ್ ಶುರು ಮಾಡಿ ಇಂದಿಗೆ ವರ್ಷಗಳು ಕಳೆದಿವೆ. ಇವತ್ತಿಗೆ ಇದು ಹಳೆಯ ವಿಷಯ, ಗಮನಿಸಿ ಒಂದು ಡಾಲರ್ ಗೆ ಹಿಂದೆಂದಿಗಿಂತ ಹೆಚ್ಚು ಚೀನಿ ಹಣ ವಿನಿಮಯದಲ್ಲಿ ಸಿಗುವ ಹಾಗೆ ಆಯಿತು ಹೂಡಿಕೆದಾರನಿಗೆ ಲಾಭ ಬೇಕು ಅಷ್ಟೇ, ಅದು ಚೀನಾ, ಇಂಡಿಯಾ, ಬ್ರೆಜಿಲ್ ಯಾವುದಾದರು ಸರಿ. ಹೀಗೆ ಹಾರಿ ಹೋದ ಹೂಡಿಕೆದಾರರ ಮತ್ತೆ ತನ್ನತ್ತ ಸೆಳೆಯಲು ಅಮೇರಿಕಾಗೆ ತನ್ನ ಫೆಡರಲ್ ಇಂಟರೆಸ್ಟ್ ರೇಟ್ ಹೆಚ್ಚಿಸದೇ ಬೇರೆ ದಾರಿ ಇರಲಿಲ್ಲ . ಚೀನಾದ ನೆಡೆಯನ್ನ ಗಮನಿಸುತ್ತಲೇ ಇರಬೇಕು., ಚೂರು ಹೆಚ್ಚು ಕಮ್ಮಿ ಆದರೂ ಅಮೇರಿಕಾ ತಲೆ ಮೇಲೆ ಕೈ ಹೊತ್ತು ಕೋರುವುದರಲ್ಲಿ ಸಂಶಯವಿಲ್ಲ .

ಅಮೇರಿಕಾದಲ್ಲಿ ಹೆಚ್ಚಾದ ಬಡ್ಡಿ ದರ, ಭಾರತದಲ್ಲಿ ಕಡಿಮೆಯಾದ ಬಡ್ಡಿ ದರ ಹಾಗು ಡಾಲರ್ ಎದುರು ಕುಸಿಯುತ್ತಿರುವ ರುಪಾಯಿ, ಹೂಡಿಕೆಗೆ ಎಮರ್ಜಿಂಗ್ ದೇಶಗಳ ನೆಚ್ಚಿಕೊಂಡಿದ್ದ ಜಾಗತಿಕ ಹೊಡಿಕೆದಾರರಿಗೆ ಎಮರ್ಜಿಂಗ್ ದೇಶ ಹಾಗೂ ಕಚ್ಚಾ ತೈಲದ ಮೇಲಿನ ಹೂಡಿಕೆ ಹೊರತಾಗಿ ಹೂಡಿಕೆಗೆ ಹೆಚ್ಚು ವಿಶ್ವಾಸ ಆರ್ಹ ದಾರಿ ತೆರೆದು ಕೊಟ್ಟಿದೆ, ಹಾಗಾಗಿ ಮುಂಬರುವ ದಿನಗಳಲ್ಲಿ ಹೆಚ್ಚು ಹೂಡಿಕೆದಾರರು ಅಮೇರಿಕಾದ ಡೆಟ್ ಬಾಂಡ್ ಗಳಲ್ಲಿ ಹಣ ತೊಡಗಿಸುತ್ತಾರೆ. ಗಮನಿಸಿ ನೋಡಿ ತೈಲ ಬೆಲೆ ಕುಸಿದರೂ ಅಥವಾ ಹೆಚ್ಚಿದರೂ ಅಮೇರಿಕಾ ಮಾತ್ರ ಲಾಭಗಳಿಸುತ್ತಲೇ ಇರಬೇಕು ಹಾಗೆ ವ್ಯವಸ್ಥೆಯನ್ನ ಕಟ್ಟಲಾಗಿದೆ.

ಕೆಳೆದ ನಾಲ್ಕಾರು ತಿಂಗಳಿಂದ ಭಾರತದ ಷೇರು ಮಾರುಕಟ್ಟೆಯಿಂದ ಭಾರಿ ಪ್ರಮಾಣದ ಹಣವನ್ನ ವಿದೇಶಿ ಹೂಡಿಕೆದಾರರು ತೆಗೆದುಕೊಂಡು ತಮ್ಮ ಮೂಲ ದೇಶಗಳಿಗೆ ಕಳುಹಿಸಲು ಪ್ರಾರಂಭಿಸಿದ್ದಾರೆ. ಗಮನಿಸಿ ಅವರು ಬಂಪರ್ ಬೆಳೆಯನ್ನ ತೆಗೆದಿದ್ದಾರೆ. ಹೂಡಿಕೆ ಡಬಲ್ ಆಗಿದೆ, ಕೆಲವು ಕಡೆ ಅದು ಮೂರ್ಪಟ್ಟು ಕೂಡ ಆಗಿದೆ. ಅವರಿಗೇನು ಬೇಕು ಅದು ಸಿಕ್ಕಿದೆ ಹೀಗಾಗಿ ಅವರು ಹೆಚ್ಚಿನ ಲಾಭಕ್ಕೆ ಮಾರಿ ತಮ್ಮ ಹಣವನ್ನ ಭದ್ರ ಮಾಡಿಕೊಳ್ಳುವ ಕೆಲಸಕ್ಕೆ ಇಳಿದಿದ್ದಾರೆ. ಹೀಗೆ ಆಗುವ ಮಾರಾಟವನ್ನ ಕೊಳ್ಳುವವರು ಕೂಡ ಬೇಕಲ್ಲವೇ? ಹೀಗೆ ಇವರು ಲಾಭಕ್ಕೆ ಮಾರಿದ ಷೇರುಗಳನ್ನ ಕೊಳ್ಳುತ್ತಿರುವವರು ಯಾರು ಗೊತ್ತೇ? ನಾವು ಭಾರತೀಯರು, ಡೊಮೆಸ್ಟಿಕ್ ಹೂಡಿಕೆದಾರರು. ಬಾಹ್ಯದಿಂದ ಭಾರತದ ಮಾರುಕಟ್ಟೆಯನ್ನ ಬುಡಮೇಲು ಮಾಡುವ ಕಾರ್ಯಕ್ಕೆ ಜಯ ಸಿಕ್ಕಿಲ್ಲ. ಹಾಗೆಂದು ನಾವು ಹೆಚ್ಚು ಬೀಗುವಂತೆಯೂ ಇಲ್ಲ, ಏಕೆಂದರೆ ಮಾರುಕಟ್ಟೆ ಸ್ವಲ್ಪ ಏರುಪೇರಾದರೂ ನಮ್ಮ ಡೊಮೆಸ್ಟಿಕ್ ಹೂಡಿಕೆದಾರರಿಗೆ ತಡೆದುಕೊಳ್ಳುವ ಶಕ್ತಿಯಿಲ್ಲ. ಹಾಗೊಮ್ಮೆ ಷೇರು ಮಾರುಕಟ್ಟೆ ಕುಸಿದರೆ ಭಾರತದಲ್ಲಿ ಭಾರಿ ಪ್ರಮಾಣದ ಆರ್ಥಿಕ ಬಿಕ್ಕಟ್ಟು ಎದುರಾಗುತ್ತದೆ.

### ಮುಂದಿನ ದಿನಗಳಲ್ಲಿ ಭೂಗೋಳಿಕ ರಾಜಕೀಯ ಘರ್ಷಣೆಗಳು

ಹೆಚ್ಚಾಗಲಿವೆ. ಪೂರ್ವ ಏಷ್ಯಾದಲ್ಲಿ ಚೀನಾ , ಸೌತ್ ಕೊರಿಯಾ ಮತ್ತು ಜಪಾನ್ ನಡುವಿನ ತಿಕ್ಕಾಟ ಹೆಚ್ಚಾಗತ್ತದೆ. ಇರಾನ್ ಪಶ್ಚಿಮ ದೇಶಗಳ ಬಗ್ಗೆ ಮುಖ್ಯವಾಗಿ ಅಮೇರಿಕಾ ಬಗ್ಗೆ ಇರುವ ತನ್ನ ಕಠಿಣ ಧೋರಣೆಯನ್ನ ಇನ್ನಷ್ಟು ಬಿಗಿಗೊಳಿಸಲಿದೆ. ರಷ್ಯಾ ನ್ಯಾಟೋವನ್ನು ಉಲ್ಲಂಘಿಸಿ ಉಕ್ರೈನ್ ಮೇಲಿನ ತನ್ನ ಹಿಡಿತವನ್ನ ಮತ್ತಷ್ಟು ಬಲಪಡಿಸಿಕೊಳ್ಳಲಿದೆ. ಕೊನೆಯದಾಗಿ ಜಗತ್ತಿನ ಹತ್ತು ದೊಡ್ಡ ಪೆಟ್ರೋಲಿಯಂ ಉತ್ಪಾದಕ ಎಂದು ದಶಕಗಳ ಕಾಲ ಬೀಗಿದ್ದ ಈಗಾಗಲೇ ದಯನೀಯ ಸ್ಥಿತಿಯಲ್ಲಿರುವ ವೆನಿಜುಲಾ ಪೂರ್ಣ ಅವನತಿಯತ್ತ ನೆಡೆದಿದೆ. ಇಂದು ವೆನಿಜುಲಾದಲ್ಲಿ ಆಗುತ್ತಿರುವ ಆಂತರಿಕ ತಳಮಳಗಳ ತಿಳಿಸಿ ಹೇಳಲು ಇನ್ನೊಂದು ಪ್ರತ್ಯೇಕ ಲೇಖನ ಬರೆಯಬೇಕಾದೀತು. ಇನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತ ದೇಶಗಳನ್ನ ಚೀನಾ, ಅಮೇರಿಕಾ ರಷ್ಯಾ ದೇಶಗಳು ತಮ್ಮ




ಸಾಲದ ಸುಳಿಯಲ್ಲಿ ಬಂಧಿಸಿ ತಮ್ಮ ಅಧೀನದಲ್ಲಿ ಇಟ್ಟುಕೊಳ್ಳಲಿವೆ. ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಧ್ರುವೀಕರಣವಾಗಿ ಪ್ರಪಂಚವನ್ನ ಚೀನಾ ಅಮೇರಿಕಾ ಜೊತೆಗೆ ರಷ್ಯಾ ಆಳಲಿದೆ. ಇವರುಗಳ ನಡುವಿನ ಮೇಲಾಟದ ಕಚ್ಚಾಟಕ್ಕೆ ಹಲವು ದೇಶಗಳು ನಲುಗಲಿವೆ.

ಜಗತ್ತಿನ ಬಹುತೇಕ ದೇಶಗಳು ಸಾಲದಲ್ಲಿ ಮುಳುಗಿವೆ. ಜಗತ್ತನ್ನ ಪೂರ್ತಿ ಒಂದು ಮನೆಯನ್ನಾಗಿ ನೋಡಿದರೆ ಒಂದು ರೂಪಾಯಿ ಆಸ್ತಿಯ ಮುಂದೆ ಎರಡೂವರೆ ರೂಪಾಯಿ ಸಾಲವಿದೆ. ದೇಶಗಳನ್ನ ಒಂದು ಮನೆಯಂತೆ ನೋಡಲು ಪ್ರಾರಂಭಿಸಿದರೆ ಅಮೆರಿಕಾ ಎಕಾನಮಿ ನಿಂತಿರುವುದೇ ಸಾಲದ ಮೇಲೆ. ಅಲ್ಲಿ ಎಲ್ಲದಕ್ಕೂ ಕ್ರೆಡಿಟ್ ಹಿಸ್ಟ್ರಿ ಬೇಕೇ ಬೇಕು. ಹೀಗೆ ಅಮೆರಿಕಾ ಯೂರೋಪಿನಿಂದ ಜಗತ್ತಿನ ಬಹಳಷ್ಟು ದೇಶಗಳಲ್ಲಿ ಲೋನ್ ಡಿಫಾಲ್ಟರ್ಸ್ ಸಂಖ್ಯೆ ಹೆಚ್ಚುತ್ತದೆ. ಇದು ಸಣ್ಣ ಐಸ್ ಬಾಲ್ ರೂಪದಲ್ಲಿ ಶುರುವಾಗಿ ಅದ್ಯಾವ ಗಾತ್ರವನ್ನ ಪಡೆಯುತ್ತದೋ ದೇವರೇ ಬಲ್ಲ. ಭಾರತದಲ್ಲಿ ಕೂಡ ಇದು ಆಗಲಿದೆ. ಆದರೆ ಇಲ್ಲಿ ಸಣ್ಣದೊಂದು ಆಶಾಭಾವ ನಮ್ಮ ಪಾಲಿಗಿದೆ. ಅಮೆರಿಕಾ, ಯೂರೋಪುಗಳಲ್ಲಿ ಬಡ್ಡಿಯ ದರ ಸೊನ್ನೆ ಅಥವಾ ನೆಗಟಿವ್, ಜಪಾನ್ ಕಥೆ ಕೂಡ ಸೇಮ್. ಇತರ ಎಮರ್ಜಿಂಗ್ ಮಾರುಕಟ್ಟೆಗಳಲ್ಲಿ ಕೂಡ ಹೂಡಿಕೆಯ ಮೇಲಿನ ಲಾಭಂಶ ಅಷ್ಟಕಷ್ಟೇ! ಭಾರತದಲ್ಲಿ ಕೂಡ ಇದು ಕುಸಿದಿದೆ. ಆದರೆ ಬೇರೆಲ್ಲಾ ದೇಶಗಳಿಗೆ ಹೋಲಿಕೆ ಮಾಡಿ ನೋಡಿದರೆ ಭಾರತದಲ್ಲಿ ಹೂಡಿಕೆ ಲಾಭದಾಯಕ.

# ಕಮಲಾಪುರ, ಕಾಮಲಾದೇವಿ ಮತ್ತು ಬಿದಿರೆಯ ಶಾಸನ



ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಜಯನಗರ ಅರಸರು ಹಂಪೆಯನ್ನು ಮಧ್ಯಯುಗೀನ ಭಾರತದ ಪ್ರಸಿದ್ಧ ರಾಜಧಾನಿ ಪಟ್ಟಣವನ್ನಾಗಿಸಿ ದೇಶ-ವಿದೇಶಗಳಿಂದಲೂ ಮನ್ನಣೆ ದೊರೆಯುವಂತೆ ಮಾಡಿದ್ದುದು ಇತಿಹಾಸ. ಇದು ವಿಜಯನಗರ, ವಿದ್ಯಾನಗರ ಎಂಬುದಾಗಿ ಹೆಸರಾಗಿತ್ತು. ಈ ಪ್ರಸಿದ್ಧ ವಿಜಯನಗರ ಪಟ್ಟಣದಲ್ಲಿ ಅನೇಕ ಉಪಪಟ್ಟಣಗಳಿದ್ದವು. ಅವುಗಳಲ್ಲಿ ಕಮಲಾಪುರವು ನೂತನವಾಗಿ ರಚನೆಯಾದ ವಿಜಯನಗರ ಜಿಲ್ಲೆಯ ಪ್ರಸಿದ್ಧ ಪ್ರಾಚೀನ ಉಪಪಟ್ಟಣ. ಕಮಲಾಪುರವು ಕನ್ನಡ ವಿಶ್ವವಿದ್ಯಾಲಯ ಮತ್ತು ಅಲ್ಲಿನ ಸಿಬ್ಬಂದಿಯ ತವರು ಮನೆಯೇ ಸರಿ. ವಿವಿಯ ಶೇ.75ರಷ್ಟು ಸಿಬ್ಬಂದಿಯ ವಾಸದ ಎಡೆ ಇದೇ ಆಗಿದೆ. ಇದು ಕಳೆದ 25-30 ವರ್ಷಗಳಲ್ಲಿ ವಿಶ್ವವಿದ್ಯಾಲಯದ ಜತೆಗೆ ತಾನೂ ಬೆಳೆದಿದೆ. ಉನ್ನತ ಶಿಕ್ಷಣ ಸಂಸ್ಥೆಯೊಂದರ ಸ್ಥಾಪನೆಯು ತನ್ನ ಸುತ್ತಮುತ್ತಲಿನ ಗ್ರಾಮ ಮತ್ತು ಜನರನ್ನು ಹೇಗೆ ಬದಲಾಯಿಸಬಲ್ಲದು ಎಂಬುದಕ್ಕೆ ಕಮಲಾಪುರವೇ ಸಾಕ್ಷಿ. ಕಮಲಾಪುರಕ್ಕೆ ಹೊಂದಿದಂತೆ ಇರುವ ಹಂಪೆ, ಅಲ್ಲಿಗೆ ಭೇಟಿ ನೀಡುವ ವೈವಿಧ್ಯಮಯ ಭಾಷೆ, ಸಂಸ್ಕೃತಿಗಳ ಪ್ರಭಾವವೂ ಆಗಿದೆ.

2019ರಲ್ಲಿ ಕಮಲಾಪುರದಲ್ಲಿ ಹೋಬಳಿಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ಕಮಲಾಪುರವನ್ನು ಕುರಿತು ಮಾತನಾಡುವ ಅವಕಾಶ ದೊರೆಯಿತು. ಕಮಲಾಪುರದ ಚರಿತ್ರೆಯನ್ನು ಹುಡುಕುತ್ತಾ ಹೊರಟ ನನಗೆ ಹಂಪೆಯ ಇತಿಹಾಸದ ಭಾಗವೇ ಆಯಿತು. ಹಾಗಿದ್ದೂ ಕಮಲಾಪುರ ಎಂಬ ಹೆಸರು ಬಂದ ವಿವರ ಪರಿಶೀಲಿಸ ಹೊರಟೆ. ವಿಜಯನಗರ ಕಾಲದ ಒಂದೆರಡು ಶಾಸನಗಳಲ್ಲಿ ಕಮಲಾಪುರವನ್ನು 'ಕಾಮಲಾಪುರ' ಎಂದೇ ಕರೆದದ್ದನ್ನು ಗಮನಿಸಿದೆ.



Haren Asher

ಕಮಲಾಪುರದ ಪ್ರಾಚೀನತೆಗೆ ಶಾಸನ, ದೇವಾಲಯ, ಕೋಟೆ-ಕೊತ್ತಲ-ಬತೇರಿಗಳು ಸಾಕ್ಷಿಯಾಗಿವೆ. ಇವು ಹೆಚ್ಚಾಗಿ ವಿಜಯನಗರ ಮತ್ತು ನಂತರ ಕಾಲದ ರಚನೆಗಳೇ ಆಗಿವೆ. ಕಮಲಾಪುರದ ಕೈಫಿಯತ್ತಿನಲ್ಲಿ ಕ್ರಿ.ಶ. 1703ರಲ್ಲಿ ಕುರುಗೋಡು ಪರಗಣವನ್ನು ನೋಡಿಕೊಳ್ಳುತ್ತಿದ್ದ "ಚೆನ್ನರಾಯ ಕಮಲಾಪುರ ಕೋಟೆ ಹುಲಿಮುಖ ಹುದೆ ಕಟ್ಟಿಸಿದನು" ಎಂದು ಹೇಳಿದೆ. ಆದರೆ ಕಮಲಾಪುರ ಹೆಸರು ಬಂದ ವಿವರವಿರಲಿಲ್ಲ.

## ಕಮಲಾಪುರ ಎಂಬ ಹೆಸರು ಬಂದದ್ದು:


ಈ ಮಧ್ಯೆ ಹಂಪೆಯ ಬಜಾರುಗಳು ಎಂಬ ನನ್ನ ಅಧ್ಯಯನದಲ್ಲಿ ವಿಜಯನಗರ ಕಾಲಕ್ಕೆ ಅರಸ-ಮಾಂಡಲಿಕ-ಸಾಮಂತರು ತಾವು ನಿರ್ಮಿಸಿದ ದೇವಾಲಯ-ಕೆರೆ-ಪುರ-ಪಟ್ಟಣಗಳಿಗೆ ರಾಜ-ರಾಣಿ, ಅವರ ತಂದೆ-ತಾಯಿ, ದೇವತೆ ಮೊದಲಾದ ಹೆಸರುಗಳನ್ನು ಇಡುವ ಪರಿಪಾಠವಿದ್ದುದನ್ನು ಗಮನಿಸಿದ್ದೆನು. ಈ ಹಿನ್ನೆಲೆಯಲ್ಲಿಯೇ ವಿಜಯನಗರ ಸಾಮ್ರಾಜ್ಯದಾದ್ಯಂತ ಹರಿಹರರಾಯಪುರ, ಬುಕ್ಕಸಾಗರ, ಬುಕ್ಕಾಂಬುದಿ, ನರಸಾಪುರ, ಕೃಷ್ಣಾಪುರ, ಅಚ್ಯುತಾಪುರ, ತಿರುಮಲಾಪುರ, ನಾಗಲಾಪುರ, ದೇವಲಾಪುರ, ದೇವಸಮುದ್ರ, ನಾಗಸಮುದ್ರ, ಚಿನ್ನಾಪುರಗಳು ತುಂಬಿಕೊಂಡಿದ್ದವು. ವಿಜಯನಗರ ಪಟ್ಟಣದಲ್ಲೂ ಇದೇ ರೀತಿಯಲ್ಲಿ ಅನೇಕ ಪುರ-ಪಟ್ಟಣಗಳಿದ್ದವು. ಅವುಗಳೆಂದರೆ ವಿರೂಪಾಕ್ಷಪುರ, ಅಚ್ಯುತಾಪುರ, ವಿಠ್ಠಲಾಪುರ, ಕೃಷ್ಣಾಪುರ, ಕಳಸಾಪುರ, ನಿಂಬಾಪುರ, ರಾಮಾಪುರಗಳು. ಹಾಗೆಯೇ ಕೃಷ್ಣದೇವರಾಯ ತನ್ನ ತಾಯಿಯ ಹೆಸರಿನಲ್ಲಿ ಕಟ್ಟಲಾದ ನಾಗೇನಹಳ್ಳಿ, ನಾಗಲಾಪುರಗಳು, ರಾಣಿಯ ಹೆಸರಿನಲ್ಲಿ ತಿರುಮಲಾದೇವಿ ಅಮ್ಮನಪಟ್ಟಣ (ಹೊಸಪೇಟೆ) ಮತ್ತು ಅಚ್ಯುತರಾಯ ತನ್ನ ರಾಣಿಯ ಹೆಸರಿನಲ್ಲಿ ಕಟ್ಟಿದ್ದ ವರದರಾಜಮ್ಮನಪಟ್ಟಣ(ಕಮಲಾಪುರ ಬಳಿ)ಗಳೂ ಇದ್ದವು. ಇವುಗಳಿಗೆ ಹೊಂದಿಕೊಂಡಂತೆ ಇದ್ದ ಉಪಪಟ್ಟಣಗಳಲ್ಲಿ ಕಾಮಲಾಪುರವೂ ಒಂದು. ಪ್ರೌಢದೇವರಾಯ ಕಮಲಾಪುರದ ಕೆರೆಯನ್ನು ಕಟ್ಟಿಸಿದ್ದನೆಂದು ಕೈಫಿಯತ್ತು ಹೇಳಿರುವುದನ್ನು ದಾಖಲಿಸಿಕೊಂಡೆ. ಹಾಗೆಯೇ ಕಮಲಾಪುರ ಅಥವಾ ಕಾಮಲಾಪುರ ಹೆಸರು ಹೇಗೆ ಬಂತೆಂಬುದರ ಬಗೆಗೆ ಸ್ಥಳೀಯರನ್ನು ಕೇಳಿದರೆ ಅವರಲ್ಲಿ ವಿಭಿನ್ನ ಅಭಿಪ್ರಾಯಗಳು ಉಳಿದುಬಂದಿದ್ದವು. ಕೆಲವರು ಇಲ್ಲಿನ ಕೆರೆಯಲ್ಲಿ ಕಮಲದ ಹೂಗಳು ಯಥೇಚ್ಚವಾಗಿ ಬೆಳೆಯುತ್ತಿದ್ದುದರಿಂದ ಬಂತೆಂದೂ, ವಿಜಯನಗರ ರಾಣಿಯರು ದೇವರ ಪೂಜೆಗೆ ಈ ಕೆರೆಯಲ್ಲಿ ಬೆಳೆಯುತ್ತಿದ್ದ ಕಮಲಗಳನ್ನು ಬಳಸುತ್ತಿದ್ದುದರಿಂದ ಬಂತೆಂದೂ, ಮತ್ತೆ ಕೆಲವರು ವಿಜಯನಗರ ಅರಸರ ರಾಣಿಯಿಂದ ಬಂತೆಂದೂ ಹೇಳುತ್ತಾರೆ. ಆದರೆ ಅವರು ಹೇಳುವ ಕಮಲಾದೇವಿ ಯಾರೆಂಬುದು ಅಷ್ಟಾಗಿ ತಿಳಿದಿರಲಿಲ್ಲ. ಇದುವರೆಗಿನ ಅಧ್ಯಯನಗಳು ಪ್ರೌಢದೇವರಾಯನಿಗೆ ಇಬ್ಬರು ರಾಣಿಯರಿದ್ದು, ಅವರನ್ನು ಭೀಮಾದೇವಿ ಮತ್ತು ಪೊನ್ನಲಾದೇವಿ ಎಂದು ಗುರುತಿಸಿದ್ದರು. ಹಾಗಾದರೆ ಜನರು ಹೇಳುವ ಕಮಲಾದೇವಿ ಯಾರು ? ಯಾವ ಅರಸನ ರಾಣಿಯಾಗಿದ್ದಳು ಅವಳ ಕಾಲವೇನು ಎಂಬುದನ್ನು ಪರಿಶೀಲಿಸ ಹೊರಟಾಗ ನೆರವಿಗೆ ಬಂದದ್ದು ಕ್ರಿ.ಶ. 1432ರ ಒಂದು ಶಾಸನ. ಅದೂ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಬಿದರೆ ಗ್ರಾಮದ್ದು. ಈ ಶಿಲಾಶಾಸನವು ಕಮಲಾದೇವಿಯ ಮೇಲಿನ ಎಲ್ಲ ಪ್ರಶ್ನೆಗಳಿಗೆ ಉತ್ತರವೆಂಬಂತೆ ನಿಂತಿತು. ಅದರಲ್ಲಿ, "ಶ್ರೀಮನು ಮಹಾರಾಜಾಧಿರಾಜ ದೇವರಾಯ ಮಹಾರಾಯರ ಅರ್ಧಾಂಗಿ ಕಾಮಲದೇವಿಯರ ನಿರೂಪದಿಂ ಲಕುಮಂಣ ಒಡೆಯರೂ ವಿರೋಧಿಕ್ರುತು ಸಂವತ್ಸರದ ಮಾಘ 10 ಸೋಮವಾರದಂದು ಪಂಪಾಕ್ಷೇತ್ರ ವಿರೂಪಾಕ್ಷದೇವರ ಸನ್ನಿಧಿಯಲೂ ಬಿದಿರೆಯ ಕಲಿನಾಥದೇವರ ಅಂಗರಂಗಭೋಗಕ್ಕೆ ಬಿದಿರೆಯ ಕೆರೆಯ ಹಿಂದೆ ಚಟನಆಯ ಘಂಡುಗ ಗದ್ದೆಯನು ಪಂಪಾ ವಿರೂಪಾಕ್ಷದೇವರ ಸಂನಿಧಿಯಲಿ ದಾರೆಯನೆರೆದುಕೊಟಂ" ಎಂದಿದೆ. ಈ ಶಾಸನದಲ್ಲಿ ಉಲ್ಲೇಖವಾದ ಪ್ರಮುಖ ಸಂಗತಿಯೆಂದರೆ ಕಾಮಲದೇವಿಯು ದೇವರಾಯನ ಅರ್ಧಾಂಗಿ ಎಂಬುದು. ಇದರಿಂದ ಪ್ರೌಢದೇವರಾಯನಿಗೆ ಈಗಾಗಲೇ ಇದ್ದ ಇಬ್ಬರು ರಾಣಿಯರ ಜೊತೆಗೆ ಕಾಮಲಾದೇವಿ ಎಂಬ ಇನ್ನೊಬ್ಬ ರಾಣಿಯೂ ಇದ್ದಳೆಂಬುದು ಇದರಿಂದ ಸ್ಪಷ್ಟವಾದಂತಾಯಿತು. ಹಾಗೆಯೇ ಈ ದಾನವನ್ನು ನೀಡಿದ ಲಕುಮಂಣ ಒಡೆಯ ಪ್ರೌಢದೇವರಾಯನ ಪ್ರಸಿದ್ಧ ದಂಡನಾಯಕ ಲಕ್ಕಣ್ಣದಂಡೇಶ ಅಥವಾ ಲಕ್ಕಣದಣ್ಣಾಯಕನೇ ಆಗಿದ್ದಾನೆ. ಇವನು ಶಿವತತ್ವಚಿಂತಾಮಣಿಯ ಕರ್ತೃ ಎಂಬುದೂ ಗಮನಾರ್ಹ. ಆದುದರಿಂದ ಕಮಲಾಪುರದ ಕೈಫಿಯತ್ತಿನಲ್ಲಿ ಹೇಳುವ, ಕಮಲಾಪುರದ ಕೆರೆಯನ್ನು ಪ್ರೌಢದೇವರಾಯನು ಕಟ್ಟಿಸಿದನೆಂಬ ಸಂಗತಿಗೆ ಪೂರಕವೆನ್ನುವಂತೆ, ಶಾಸನವು ದೃಢಪಡಿಸುವಂತೆ ಅರಸ ತಾನು ಕಟ್ಟಿಸಿದ ಕೆರೆಯ ಬಳಿ ನಿರ್ಮಿಸಲಾದ ಉಪಪಟ್ಟಣಕ್ಕೆ ತನ್ನ ರಾಣಿಯಾದ ಕಾಮಲದೇವಿಯ ಹೆಸರಿನಲ್ಲಿ ಕಾಮಲಾಪುರವೆಂದೂ ಕರೆದಿರುವುದು ನೈಜನೀಯ ಸಂಗತಿಯೇ ಆಗಿದೆ. ಇದಕ್ಕೆ ಪೂರಕವೆನ್ನುವಂತೆ ಕ್ರಿ.ಶ. 1535ರ ಶಾಸನವೊಂದು ಹೇಳುವಂತೆ 'ತೆರಕಣಾಂಬಿ ಸೀಮೆಯ ಪಡುಗನಾಡ ಸ್ಥಳದ ಹುಲ್ಲಾನಕ್ಕೆ ಪ್ರತಿನಾಮವಾದ ಕಾಮಲಾಪುರದ ಅಘ್ರಾರ(ಅಗ್ರಹಾರ)ದಲೂ' ಎಂಬ ಹೆಸರಿನ ಇನ್ನೊಂದು ಗ್ರಾಮವಿದ್ದುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ವಿಜಯನಗರ ಅದರಲ್ಲೂ ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರ ಪಟ್ಟಣ ಹೆಚ್ಚು ಅಭಿವೃದ್ಧಿ ಹೊಂದಿದ್ದುದು, ಈ ಮಹಾಪಟ್ಟಣಕ್ಕೆ ಕುಡಿಯುವ ನೀರಿನ ಅವಶ್ಯಕತೆಯಿದ್ದುದರಿಂದ ಕಮಲಾಪುರದ ಬಳಿ ಕೆರೆಯನ್ನು ಕಟ್ಟಿಸಿದ. ಅದಕ್ಕೆ ತುಂಗಭದ್ರಾ ನದಿಯಿಂದ ನೀರನ್ನು ತುಂಬಿಸಲು ಅಣೆಕಟ್ಟೆಗಳನ್ನು ಕಟ್ಟಿ ರಾಯ ಮತ್ತು ಬಸವಣ್ಣ ಕಾಲುವೆಗಳ ಮೂಲಕ ಇಡೀ ನಗರಕ್ಕೆ ವರ್ಷಪೂರ್ತಿ ನೀರನ್ನು ಹರಿಸುವ ಮಹತ್ಕಾರ್ಯ ಕೈಗೊಂಡದ್ದು ಗಮನಾರ್ಹ.

## ಕಮಲಾಪುರದ ವೈಶಿಷ್ಟತೆ:

ವಿಜಯನಗರ ಅರಸರ ರಾಜಧಾನಿಯ ಭಾಗವಾಗಿದ್ದ ಹಾಗೂ ಕಾಮಲದೇವಿಯ ಹೆಸರಿನಲ್ಲಿ ನಿರ್ಮಾಣವಾದ ಕಾಮಲಾಪುರ ಅಥವಾ ಇಂದು ಕರೆಯುತ್ತಿರುವ ಕಮಲಾಪುರವು ವಿಜಯನಗರ ಪತನಾ ನಂತರವೂ ಅಸ್ತಿತ್ವದಲ್ಲಿರುವುದು ವೈಶಿಷ್ಟ್ಯವೇ ಆಗಿದೆ. ಕಾರಣವೆಂದರೆ ರಾಜಧಾನಿ ಪಟ್ಟಣದ ಎಲ್ಲ ಉಪ ಪಟ್ಟಣಗಳು ನಾಶವಾದರೂ ಕಾಮಲಾಪುರವು ನಂತರ ಪುನಶ್ಚೇತನಗೊಂಡು ವಿಜಯನಗರ ಪರಂಪರೆಯ ದ್ಯೋತಕವಾಗಿ ಇಂದಿಗೂ ನಮ್ಮೆದುರಿಗಿದೆ. ಗತ ಸಂಗತಿಗಳನ್ನು ಮೆಲುಕು ಹಾಕುವಂತಿರುವ ಗುಡಿ-ಗೋಪುರ, ಕೋಟೆ-ಕೊತ್ತಲ, ನಂಬಿಕೆ-ಆಚರಣೆ-ಸಂಪ್ರದಾಯಗಳು ವಿಜಯನಗರ ಪರಂಪರೆಯ ಕುರುಹುಗಳಾಗಿ ಇಂದಿಗೂ ಜೀವಂತವಾಗಿವೆ. ಇದಕ್ಕೆ ಜೀವಜಲವಾಗಿ ಸದಾಕಾಲ ಮೈದುಂಬಿರುವ ಕಮಲಾಪುರದ ಕೆರೆಯೇ ಪ್ರಮುಖವೆಂಬುದು ಗಮನಾರ್ಹ.

## ಸೌಂದರ್ಯ ತಜ್ಞೆಯ ಸ್ವಗತ



ನಾನೊಬ್ಬಳು ಸೌಂದರ್ಯ ತಜ್ಞೆ,
ನನ್ನದು ಹೆಣ್ಣುಮಕ್ಕಳ ಬ್ಯೂಟಿ ಸೆಲೂನ್.
ನನ್ನ ಸೆಲೂನಿಗೆ ಬಂದು ಹೋಗುವರು
ಎಷ್ಟೊಂದು ಮಂದಿ
ಹೆಣ್ಣು ಜೀವಗಳು!

ಎಲ್ಲರಿಗೂ ಒಂದೇ ಆಸೆ ತಾನೊಬ್ಬಳು
ಸುಂದರಿಯಾಗಬೇಕೆಂದು!
ಕಣ್ಣುಬ್ಬುಗಳು ಕಾಮನ ಬಿಲ್ಲಾಗಬೇಕು
ತುಟಿಗಳು ತೊಂಡೆ ಹಣ್ಣಾಗಬೇಕು
ಕಣ್ಣರೆಪ್ಪೆಗಳು ಪತಂಗದ ರೆಕ್ಕೆಗಳಾಗಬೇಕು
ಮುಂಗುರುಳು ದುಂಬಿಯಾಗಬೇಕು
ತಲೆಗೂದಲು ಗಾಳಿಗೆ ಕೆದರೊಡೆದು
ಹಾರಬೇಕು ಕೆನ್ನೆಗಳು ಸೇಬುಗಳಾಗಬೇಕು
ಕಪ್ಪು ಬಣ್ಣ ಮಾಯವಾಗಿ ಬಿಳಿ ಚರ್ಮದ
ಎರಕ ಮಿಂಚಬೇಕು!

ಬಗೆ ಬಗೆಯಫೇಸ್ ವಾಶ್, ಹೇರ್ ಕಲರ್,
ಮೇಕಪ್, ಬ್ಲೇಡು, ಕತ್ತರಿ, ಬಾಚಣಿಗೆ,
ಬಣ್ಣದ ಪ್ಯಾಲೆಟ್ ಹಿಡಿದು
ಸುಂದರಿಯನ್ನಾಗಿಸುವ ಕಸುಬು
ಪ್ರಾರಂಭಿಸುತ್ತೇನೆ.

ತಿದ್ದಿ ತೀಡುತ್ತೇನೆ ಹಣೆಯುಬ್ಬು
ಕತ್ತರಿಸಿ ಎಸೆಯುತ್ತೇನೆ ಅನಗತ್ಯ ಕೂದಲು
ಬೆಳ್ಳಿ ಕೂದಲಿಗೆ ಬಣ್ಣ ಹಚ್ಚಿ ಕಪ್ಪು ಮಾಡುತ್ತೇನೆ.
ಕಾಡಿಗೆ ಹಚ್ಚುತ್ತೇನೆ, ಸ್ನೋ ಪೌಡರ್
ಬಳಿಯುತ್ತೇನೆ ಹಳೆ ಗೋಡೆಗೆ
ಹೊಸ ಗಾರೆ ಹಾಕಿದಂತೆ!

ಆ ಹೆಣ್ಣುಗಳೋ ಕನ್ನಡಿಯಲ್ಲಿ
ಮುಖ ನೋಡಿಕೊಂಡು
ಲಿಪ್ಸ್ ಹೊರಳಿಸಿ ಕೂದಲು
ನೀವಿಕೊಂಡು ಬೆನ್ನು ತಿರುಗಿಸಿ
ಹಾವ ಭಾವ ಬೆಡಗು ಬಿನ್ನಾಣ ತೋರಿಸಿ
ಸರಿದ ವಯಸ್ಸು ಮರೆಯಾಗಿ
ಸುಂದರಿಯರಾದೆವೆಂದು ನಗೆ ಬೀರಿ
ತಗುಲಿದ ತಲುಬು ಮಜೂರಿ ಸಲ್ಲಿಸಿ
ನಡೆಯುತ್ತಾರೆ ಸೆಲೂನಿನಾಚೆಗೆ
ಹಂಸ ಗಮನೆಯರಂತೆ!

ಸೆಲೂನಿನಲ್ಲಿ ನಾನೀಗ ಯೋಚಿಸುತ್ತೇನೆ
ಸೌಂದರ್ಯವಿರುವುದು ಚರ್ಮದ
ನವಿರು ಮತ್ತು ಕಾಂತಿಯಲ್ಲಿಯೇ ಹೊರತು
ಕಪ್ಪು ಬಿಳುಪು ಎಂಬ ಬಣ್ಣದಲ್ಲಲ್ಲ.
ಸೌಂದರ್ಯವಿರುವುದು ಕರುಣೆ ಪ್ರೀತಿ ಮಮತೆ
ವಾತ್ಸಲ್ಯ ತುಂಬಿದ ಹೃದಯದಲ್ಲಿಯೇ ಹೊರತು
ಚರ್ಮದಲ್ಲಲ್ಲ, ಕೇಶ ವಿನ್ಯಾಸದಲ್ಲಿ ಅಲ್ಲವೇ
ಅಲ್ಲ.
ಅಂತರಂಗದ ಸೌಂದರ್ಯ ಬಹಿರಂಗದ
ಸೌಂದರ್ಯಕ್ಕಿಂತಲೂ ಮಿಗಿಲು!



ಜಯಮಾಲ ಎಂ ಸಿ

# ಕೈ ಪಾಳೆಯಕ್ಕೆ ಬಿಸಿ ತುಪ್ಪವಾದ ಧಾರ್ಮಿಕ ವಿವಾದಗಳು ಮತ್ತು ಹೇಳಿಕೆಗಳು

● ವತಿಮ

ಇನ್ನೇನು ಮುಂದಿನ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆದ್ದು ಅಧಿಕಾರಕ್ಕೆ ಬರುವುದು ಖಚಿತ ಎಂದು ಕಾಂಗ್ರೆಸ್ ನಾಯಕರಿಗೆ ಮನವರಿಕೆಯಾಗಿತ್ತು. ಹೀಗಾಗಿಯೇ ಸಿಎಂ ವಿಚಾರದಲ್ಲಿ ಇಬ್ಬರು ನಾಯಕರ ಮಧ್ಯೆ ಸದಾ ಒಂದಲ್ಲಾ ಒಂದು ಆಂತರಿಕ ಕಚ್ಚಾಟಗಳು ನಡೆಯುತ್ತಲೇ ಇದ್ದವು. ಇದರ ಜೊತೆಗೆ ಮೇಕೆದಾಟು ಯೋಜನೆಗೆ ಒತ್ತಾಯಿಸಿ ನಡೆಸಿದ ಪಾದಯಾತ್ರೆ ಬೇರೆ ಅಭೂತ ಪೂರ್ವ ಯಶಸ್ಸು ಸಿಕ್ಕಿತ್ತು ಎನ್ನುವ ಗುಂಗಿನಲ್ಲಿರುವಾಗಲೇ ನಡೆದ ಕೆಲ ವಿವಾದಗಳು ಈಗ ಕಾಂಗ್ರೆಸ್ ಪಾಳೆಯದಲ್ಲಿ ಆತಂಕ ಮೂಡಿಸಿದೆ.



ಹೌದು ಹಿಜಾಬ್ ವಿಚಾರದಲ್ಲಿ ಕಾಂಗ್ರೆಸ್ ತಗೆದುಕೊಂಡ ನಿರ್ಣಯ ಅವರ ಪಾಲಿಗೆ ಮುಳ್ಳಾಗಲಿದೆ. ಜೊತೆಗೆ ಟಿಪ್ಪು ಪಠ್ಯದಲ್ಲಿ ಸೇರಿಸುವ ವಿಷಯ, ಕೇಸರಿ ಬಾವುಟ ವಿಷಯ ಹಾಗೂ ಸಿದ್ದು ಆಡಿದ ಆ ಮಾತು ಈಗ ಕೈ ಪಾಳೆಯದಲ್ಲಿ ತೀವ್ರ ವಿಷಾಧಕ್ಕೆ ಕಾರಣವಾಗಿದೆ.



ಹೇಳಿ ಕೇಳಿ ಸಿದ್ದರಾಮಯ್ಯ ಯಾವುದೇ ವಿಷಯವನ್ನು ಅಳೆದು ತೂಗಿ ಮಾತನಾಡುವ ವ್ಯಕ್ತಿ ಆದರೆ ಆದೇಕೋ ಅರಿವಿಲ್ಲದೆ ಆಡಿದ ಮಾತು ಈಗ ತೀವ್ರ ವಿವಾದಕ್ಕೆ ಕಾರಣವಾಗಿದ್ದು ಒಂದು ಸಮುದಾಯದ ಜನ ಅದನ್ನು ಗಂಭೀರವಾಗಿ ಪರಿಣಮಿಸಿದ ಕಾರಣ ಇನ್ನೆಲ್ಲಿಗೋ ಹೋಗಲಿದೆ, ಹೀಗಾಗಿ ಕೈ ಅಂಗೈನಲ್ಲಿದ್ದ ತುತ್ತು ಈಗ ಕಮಲದತ್ತ ಜಾರಿದಂತೆ ಕಾಣುತ್ತದೆ. ಜನರ ಮನಸ್ಸಿನಲ್ಲಿಯೂ ಒಂದು ರೀತಿ ಬಿಜೆಪಿ ಆಡಳಿತಕ್ಕೆ ಸೋತಿದ್ದರು ಸಿಎಂ ಬದಲಾವಣೆ ಭ್ರಷ್ಟಾಚಾರ ಅಂತ ವಿವಾದಗಳಿಂದ ಸುತ್ತಿಕೊಂಡಿದ್ದ ಬಿಜೆಪಿಗೆ ಕರ್ನಾಟಕದಲ್ಲಿ ಒಂದು ರೀತಿ ಕಮಲ ಮುದುರಿಕೊಂಡಿತ್ತು ಆದರೆ ಯಾವಾಗ ಈ ಹಿಜಾಬ್ ವಿವಾದ ಸೃಷ್ಟಿಯಾಯಿತೋ ಆಗಲೇ ಅದು ಚಿಗುರಿಕೊಂಡು ಕಂಗೊಳಿಸುತ್ತಿದೆ. ಈ ಮೂಲಕ ಧರ್ಮದ ವಿಚಾರ ಈಗ ಸೂಕ್ಷ್ಮವಾಗಿದ್ದು ಹಿಂದುತ್ವ ಎನ್ನುವ ಅ ಅಸ್ತ್ರ ಈಗ ಇಲ್ಲಿಯೂ ವರ್ಕೌಟ್ ಆದಂತೆ ಕಾಣುತ್ತಿದೆ. ಇದರಿಂದ ಕರ್ನಾಟಕದ ಬಿಜೆಪಿ ನಾಯಕರಲ್ಲಿ ವಿಶ್ವಾಸ ಮತ್ತಷ್ಟು ಹಿಮ್ಮಡಿಯಾಗಿದೆ.

## ಹೈಗೆ ದೂರು ನೀಡಿದ ನಾಯಕರು



ಕಾಂಗ್ರೆಸ್‌ನಲ್ಲಿ ಒಂದು ತಂಡ ಸಿದ್ದು ವಿರುದ್ಧ ಧ್ವನಿ ಎತ್ತುತ್ತಲೇ ಇತ್ತು ಅಂತ ತಂಡ ಈಗ ಸಿದ್ದು ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದೆ.ಹಿಜಾಬ್ ವಿವಾದ ಕುರಿತು ನೀಡುವ ಹೇಳಿಕೆ ಬರದಲ್ಲಿ ಸ್ವಾಮೀಜಿಗಳ ಪೇಟ ಕುರಿತು ನೀಡಿದ ಹೇಳಿಕೆ ಕರ್ನಾಟಕದ ಒಂದು ಸಮುದಾಯದ ವಿರುದ್ಧದ ಮತಗಳು ಕಾಂಗ್ರೆಸ್‌ನಿಂದ ದೂರವಾಗಲಿವೆ, ಈಗಾಗಲೇ ರಾಜ್ಯದಲ್ಲಿ ಬಿಜೆಪಿ ಆಡಳಿತದ ವಿರುದ್ಧ ಜನರು ಧ್ವನಿ ಎತ್ತಿದ್ದರು ಇಂತ ಹೊತ್ತಿನಲ್ಲಿ ಕಾಂಗ್ರೆಸ್‌ಗೆ ಅನುಕೂಲಕರವಾಗಿದ್ದ ಸಂದರ್ಭದಲ್ಲೇ ಸಿದ್ದು ಈ ಹೇಳಿಕೆ ಈಗ ಆ ಸಮುದಾಯ ಮತ್ತು ಜನ ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಾರೆ ಎನ್ನುವ ದೂರನ್ನು ನೀಡಿದ್ದಾರೆ. ಈ ಬಗ್ಗೆ ಸಿದ್ದು ಎಷ್ಟೆ ಸ್ಪಷ್ಟೀಕರಣ ನೀಡಿದರೂ ಕೂಡ ಅದು ಡ್ಯಾಮೇಜ್ ಕಂಟ್ರೋಲ್ ಆಗುತ್ತಿಲ್ಲ. ಹೀಗಾಗಿಯೇ ಸಿದ್ದರಾಮಯ್ಯ ಕೂಡ ಒಂದು ರೀತಿ ದಂಗು ಬಡೆದಿದ್ದಾರೆ. ಇದೆ ಹೊತ್ತಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಒಂದು ಕಡೆ ಸಂತಸ ಎನಿಸಿದರು ಕೂಡ ಮತ್ತೊಂದೆಡೆ ಆತಂಕವೂ ಸೃಷ್ಟಿಯಾಗಿದೆ. ಯಾಕೆಂದರೆ ಸಿಎಂ ಆಗಲೇ ಬೇಕು ಎಂದು ಸದಾ ಹೊಡೆದಾಡುತ್ತಿರುವ ಅವರಿಗೆ ಸಿದ್ದು ಈ ಹೇಳಿಕೆಯಿಂದ ಹೈಕಮಾಂಡ್ ಅವರನ್ನು ದೂರ ಸರಿಸಬಹುದು ಎನ್ನುವುದು ಒಂದಾದರೆ ಇನ್ನೊಂದೆಡೆ ಕರ್ನಾಕದಲ್ಲಿ ಅಧಿಕಾರಕ್ಕೆ ಬರಲು ನನ್ನ ಮೇಕೆದಾಟು ಯೋಜನೆಗೆ ಒತ್ತಾಯಿಸಿ ನಡೆಸಿದ ಪಾದಾಯಾತ್ರೆಯೇ ಫಲ ನೀಡಿದ್ದು ಹೀಗಾಗಿ ನಾನೇ ಸಿಎಂ ಆಗಬಹುದು ಎನ್ನುವ ಉತ್ಸಾಹವೂ ಅವರದ್ದಾಗಿದೆ ಆದರೆ ಕಳೆದ ಎರಡು ತಿಂಗಳಲ್ಲಿ ಕಾಂಗ್ರೆಸ್‌ಗೆ ತೀರಾ ಹಿನ್ನೆಡೆಯಿಂಟಾಗಿದೆ. ಪಂಚರಾಜ್ಯಗಳ ಚುನವಣೆಯ ಫಲಿತಾಂಶ ಒಂದು ಕಡೆಯಾದರೆ, ಹಿಜಾಬ್, ಟಿಪ್ಪು ಸುಲ್ತಾನ್ ವಿವಾದಗಳು ಈಗ ಕೈ ಓಟಕ್ಕೆ ಬ್ರೇಕ್ ಹಾಕಿವೆ. ಸಹಜವಾಗಿಯೇ ಇದು ಈಗ ಕಾಂಗ್ರೆಸ್ ಪಾಳೆಯದಲ್ಲಿ ತೀವ್ರ ನಿರಾಸಗೆ ಕಾರಣವಾಗಿದೆ.

## ಆಡುವ ಮಾತಿನಲ್ಲಿ ಎಚ್ಚರವಿರಬೇಕು

ಹೌದು ರಾಜಕೀಯದಲ್ಲಿ ಯಾವುದೇ ಹೇಳಿಕೆಗಳನ್ನು ನೀಡಿದರು ಎಚ್ಚರಿಕೆಯಿಂದ ಇರಬೇಕು. ಒಂದು ಬಾಯಿ ತಪ್ಪಿ ನೀಡಿದ ಹೇಳಿಕೆಗಳು ಹೇಗೆ ಪಕ್ಷದಿಂದ ಮತಗಳು ದೂರವಾಗತ್ತವೆ ಎನ್ನುವುದಕ್ಕೆ ನಮ್ಮ ಮುಂದೆ ಬಹಳಷ್ಟು ಉದಾಹರಣೆಗಳಿವೆ. ಅದೆಲ್ಲದಕ್ಕೂ ಸಾಕ್ಷಿಯಾದ ಸಿದ್ದರಾಮಯ್ಯ ಅವರ ಮಾತುಗಳೆ ಈಗ ಮತ್ತೊಂದು ಸಾಕ್ಷಿಗೆ ಕಾರಣವೂ ಆಗಬಹುದು .

ರಾಜಕೀಯದಲ್ಲಿ ಬಾಯಿ ತಪ್ಪಿ ಆಡುವ ಒಂದು ಮಾತು, ಎಚ್ಚರ ತಪ್ಪಿ ಇಡುವ ನಡೆ ವಿನಾಶಕಾರಿ ಅಸ್ತ್ರಗಳಂತಾಗಿ ಬಿಡುತ್ತವೆ. ಹೀಗಾಗಿ ರಾಜಕಾರಣದಲ್ಲಿ ರುವವರು ಯಾವ ಕ್ಷಣದಲ್ಲೂ ಮೈ ಮರೆಯುವ ಹಾಗೆಯೇ ಇಲ್ಲ. ಪರಿಸ್ಥಿತಿ ಹೀಗಿರುವಾಗಲೇ ರಾಜ್ಯ ಕಾಂಗ್ರೆಸ್ ಪಕ್ಷದ ಮುಂದೆ ಆಡಳಿತಾರೂಢ ಬಿಜೆಪಿ ಡಜನ್ನುಗಟ್ಟಲೆ ಸಮ್ಮೋಹನಾಸ್ತ್ರಗಳನ್ನು ಬಳಸಿ ಕುಳಿತಿದೆ ಅದು ಪ್ರಯೋಗಿಸಿರುವ ಹಿಜಬ್ ಅಸ್ತ್ರವೇ ಇರಬಹುದು, ಮತಾಂತರ ನಿಷೇಧ ಕಾಯ್ದೆ ಇರಬಹುದು, ಲವ್ ಜಿಹಾದ್ ವಿಷಯವೇ ಇರಬಹುದು, ಕೇಸರಿ ಧ್ವಜವೇ ಇರಬಹುದು.

ಕೇಂದ್ರದ 370 ನೇ ವಿಧಿಯೇ ಇರಬಹುದು, ಒಟ್ಟಿನಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಬಿಜೆಪಿ ಪ್ರಯೋಗಿಸಿರುವ ಅಸ್ತ್ರಗಳು ಕಾಂಗ್ರೆಸ್ ನಾಯಕರ ನಿದ್ದೆಗೆಡುವಂತೆ ಮಾಡಿದೆ. ಈ ಪೈಕಿ ಯಾವ ವಿಷಯವೇ ಇರಬಹುದು, ಅದಕ್ಕೆ ಉತ್ತರಿಸದೆ ಇದ್ದರೆ ಕೈಲಾಗದವರು ಎಂಬ ದೂಷಣೆಗೆ ಗುರಿಯಾಗಬೇಕು, ಉತ್ತರಿಸಿದರೆ ಹಿಂದೂ ವಿರೋಧ ಎಂಬ ಹಣೆ ಪಟ್ಟಿ ಕಟ್ಟಿಕೊಳ್ಳಬೇಕು ಎಂಬಂತಿದೆ. ಹೀಗಾಗಿ ಏನು ಮಾತನಾಡಿದರೆ ಏನು ತಪ್ಪಾಗುತ್ತದೋ ಎಂದು ಕಾಂಗ್ರೆಸ್ ನಾಯಕರು ಅಂಜಿಕೊಳ್ಳುವ ಸ್ಥಿತಿ ಬಂದಿದೆ.

ಇದೇ ವೇಳೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಹಿಜಾಬ್ ವಿವಾದ ಕುರಿತಂತೆ 'ಮಹಿಳೆಯರು ಹಿಜಾಬ್ ಧರಿಸಿದರೆ ಏನಂತೆ ಸ್ವಾಮೀಜಿಗಳು ಪೇಟೆ ಧರಿಸುವುದಿಲ್ಲವೆ 'ಎನ್ನುವ ಮಾತು ಈಗ ಅವರಿಗೆ ಮುಳುವಾಗಿದೆ ಇಡೀ ಸ್ವಾಮೀಜಿಗಳ ತಂಡವೇ ಅವರ ವಿರುದ್ಧ ನಿಂತಿದೆ ಸಹಜವಾಗಿಯೇ ಆ ಸಮುದಾಯದ ಮತಗಳು ಕೈ ತಪ್ಪಿಹೋಗುವ ಸಾಧ್ಯತೆಗಳು ಇವೆ:

## ಹೇಳಿಕೆಗಳು ಕಲಿಸಿದ ಪಾಠ..?!

2004 ರಲ್ಲಿ ರಾಜಾಜಿನಗರ ವಿಧಾನಸಭೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಸ್.ಸುರೇಶ್ ಕುಮಾರ್ ಹೇಳಿದ ಹೇಳಿಕೆ ಅವರ ಸೋಲಿಗೆ ಕಾರಣವಾಗಿತ್ತು. ಅವರು ಪ್ರಚಾರದ ವೇಳೆ ರಾಜಾಜಿನಗರದಲ್ಲಿ "ಅ ಬ್ರಮ್ಮನೆ ಬಂದ್ರು ನನ್ನನ್ನು ಸೋಲಿಸಲು ಸಾಧ್ಯವಿಲ್ಲ" ಎನ್ನುವ ಹೇಳಿಕೆ ನೀಡಿದ್ದರು ಅಂದು ಸಂಜೆವಾಣಿ ಪತ್ರಿಕೆಯಲ್ಲಿ ಹೆಡ್ ಲೈನ್ ಆಗಿ ಬಂದಿತ್ತು ಇದನ್ನು ಓದಿದ ರಾಜಾಜಿನಗರದ ಜನ ಒಂದು ಬಾರಿ ಸೋಲಿನ ರುಚಿ ತೋರಿಸಬೇಕು ಎಂದು ಆ ಚುನಾವಣೆಯಲ್ಲಿ ಸುರೇಶ್ ಕುಮಾರ್ ಅವರನ್ನು ಸೋಲಿಸಿದ್ದರು, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ನರೇಂದ್ರ ಆ ಬಾರಿ ನರೇಂದ್ರ ಬಾಬು ಜಯಗಳಿಸಿದ್ದರು.



ಇನ್ನೂ 2006ರಲ್ಲಿ ದೇವೇಗೌಡರ ಮೇಲಿನ ಮುನಿಸಿನಿಂದ ಸಿದ್ಧರಾಮಯ್ಯ ಜೆಡಿಎಸ್ ಪಕ್ಷ ತೊರೆದು ಹೊರ ಬಂದಿದ್ದರು ಹೀಗಾಗಿ ಮತ್ತೇ ಚಾಮುಂಡಿಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಿತು. ಆ ಉಪಚುನಾವಣೆಯಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಜೆಡಿಎಸ್ ಪಾಳೆಯದಿಂದ ಹೊರಬಿದ್ದಿದ್ದರಿಂದ ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಿತು. ಉಪಚುನಾವಣೆ ಘೋಷಣೆಯಾದ ಕಾಲದಲ್ಲಿ ಹೆಚ್.ಡಿ.ಕುಮಾರ ಸ್ವಾಮಿ ನೇತೃತ್ವದ ಜೆಡಿಎಸ್– ಬಿಜೆಪಿ ಮೈತ್ರಿಕೂಟ ಸರಕಾರ ಅಸ್ತಿತ್ವದಲ್ಲಿತ್ತಲ್ಲ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಸಿದ್ಧರಾಮಯ್ಯ ಅವರ ವಿರುದ್ಧ ಉಭಯ ಪಕ್ಷಗಳ ನಾಯಕರ ದಂಡು ಚಾಮುಂಡೇಶ್ವರಿಯ ರಣಾಂಗಣಕ್ಕಿಳಿಯಿತು.



ಪರಿಣಾಮ ಪ್ರಚಾರ ಕಣದಲ್ಲಿ ಸಿದ್ಧರಾಮಯ್ಯ ಅವರ ಶಕ್ತಿ ಕುಗ್ಗಿದಂತೆ ಕಂಡಿತು. ಇನ್ನೇನು ಮತದಾನಕ್ಕೆ ಎರಡು ದಿನಗಳಿರುವಾಗ ಚುನಾ ವಣಾಧಿಕಾರಿಗಳು ಪ್ರಚಾರ ಕಾರ್ಯಕ್ಕೆ ಬ್ರೇಕ್ ಹಾಕಿದರು. ಯಾವ ಪಕ್ಷದವರೂ ಕ್ಷೇತ್ರದಲ್ಲಿರಕೂಡದು ಎಂದು ಕಟ್ಟಪ್ಪಣೆ ವಿಧಿಸಿದರು. ಈ ಸಂದರ್ಭದಲ್ಲೇ ಮಾಧ್ಯಮಗಳ ವರದಿಗಾರರು ರಾಜಕೀಯ ಪಕ್ಷವೊಂದರ ಪ್ರಚಾರ ಸಾಮಗ್ರಿಗಳಿವೆ ಎಂಬ ಅನುಮಾನದಿಂದ ತಮಗೆ ಎದುರಾದ ವಾಹನವನ್ನು ಬೆನ್ನತ್ತಿದ್ದರು. ಈ ವಾಹನ ಒಂದು ಸ್ಥಳಕ್ಕೆ ಹೋದಾಗ ಅಲ್ಲಿ ಜನ ಗುಂಪುಗೂಡಿದರು. ಅಷ್ಟೇ ಆಗಿದ್ದರೆ ಎಲ್ಲವೂ ತಣ್ಣಗಾಗುತ್ತಿತ್ತೇನೋ ಆದರೆ ಅಲ್ಲೇ ಸಮೀಪದ ಅತಿಥಿಗೃಹವೊಂದರಲ್ಲಿ ತಂಗಿದ್ದವರೊಬ್ಬರು ಏನು ಗಲಾಟೆಯಾಗುತ್ತಿದೆ ಎಂಬುದನ್ನು ನೋಡಲು ಹೊರಬಂದರು. ಹೀಗೆ ಹೊರಬಂ ದವರನ್ನು ನೋಡಿದ್ದೇ ತಡ, ವರದಿಗಾರರು ತಮ್ಮ ಕ್ಯಾಮೆರಾವನ್ನು ಆ ಕಡೆ ತಿರುಗಿಸಿ ಶೂಟ್ ಮಾಡತೊಡಗಿದರು. ಅವರು ಹೀಗೆ ಶೂಟ್ ಮಾಡತೊಡಗಿದ್ದೇ ತಡ, ನೋಡಲು ಹೊರ ಬಂದವರ ಹಿಂದಿದ್ದವರು ಅದೇನು ಕಿತ್ಕೋತೀಯೋ ಕಿತ್ಕೋ ಎಂಬಂತೆ ಸನ್ನೆ ಮಾಡಿದರು.

ಹೀಗಾಗಿ ಹೊರಬಂದವರ ಜತೆ ಸನ್ನೆ ಮಾಡಿದ ಆ ವ್ಯಕ್ತಿಯೂ ಕ್ಯಾಮೆರಾದಲ್ಲಿ ಸೆರೆಯಾಗಿ ಇಡೀ ರಾಜ್ಯವೇ ದಿಗ್ಭ್ರಮೆಯಿಂದ ನೋಡು ವಂತಾಯಿತು. ಅತಿಥಿಗೃಹದಿಂದ ಹೊರಬಂದವರು ಬೇರೆ ಯಾರೂ ಅಲ್ಲ, ಖುದ್ದು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ. ಪರಿಣಾಮ ಕ್ಷೇತ್ರದಾದ್ಯಂತ ಸಿದ್ಧರಾಮಯ್ಯ ಅವರನ್ನು ಸೋಲಿ ಸಲು ಇಡೀ ಸರಕಾರವೇ ಕುಳಿತಿದೆ ಎಂಬ ಭಾವನೆ ದಟ್ಟವಾಗಿ ಹರಡಿ, ಮತದಾರರಲ್ಲಿ ಸಿದ್ಧರಾಮಯ್ಯ ಅವರ ಪರವಾದ ಒಲವು ಶುರುವಾಯಿತು. ಚುನಾವಣೆಯಲ್ಲಿ ಸಿದ್ಧರಾಮಯ್ಯ ಗೆಲುವು ಸಾಧಿಸಿದರು.



ಎಸ್.ಎಂ.ಕೃಷ್ಣ ಸಿಎಂಯಿದ್ದ ಸಂದರ್ಭದಲ್ಲಿ ಕನಕಪುರ ಲೋಕಸಭಾ ಸದಸ್ಯ ಚಂದ್ರಶೇಖರ ಮೂರ್ತಿ ನಿಧನರಾದರು. ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ನಡೆದ ಉಪಚುನಾವಣೆಗೆ ಕಾಂಗ್ರೆಸ್‌ನಿಂದ ಕೃಷ್ಣ ಸಂಪುಟದ ಪ್ರಭಾವಿ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಸ್ಪರ್ಧಿಸಿ ದರು. ಅದೇ ಸಂದರ್ಭದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ. ಶಿವಕುಮಾರ್ ಕನಕಪುರ ವ್ಯಾಪ್ತಿಯಲ್ಲಿ ಹೆಚ್ಚು ಪ್ರಭಾವ ಹೊಂದಿದ್ದವರು. ಕೃಷ್ಣರ ಸಂಪುಟದ ಪ್ರಭಾವಿ ಸಚಿವರು ಬೇರೆ. ಹೀಗಾಗಿ ದೇವೇಗೌಡರ ವಿರುದ್ಧ ಡಿ.ಕೆ. ಶಿವಕುಮಾರ್ ಅವರನ್ನು ಗೆಲ್ಲಿಸಲು ಎಸ್.ಎಂ.ಕೃಷ್ಣರ ಸಂಪುಟವೇ ಬೀದಿಗಿಳಿಯಿತು.

ಆದರೆ ಪ್ರಚಾರ ಕಾರ್ಯ ಶುರುವಾಗುತ್ತಿದ್ದಂತೆಯೇ ಕನಕಪುರ ಲೋಕಸಭಾ ಕ್ಷೇತ್ರದ ಹಳ್ಳಿಗಳಲ್ಲಿ ಲೇ, ಆ ಡಿ.ಕೆ. ಶಿವಕುಮಾರುಂಗೆ ಮಾಡೋಕೆ ಕೆಲಸ ಇದೆ. ಆದ್ರೆ ದೇವೇಗೌಡ್ರಿಗೆ ಏನೈತೆ ಕೆಲಸ? ಹೀಗಾಗಿ ಶಿವಕುಮಾರು ಇಲ್ಲೇ ಮಿನಿಸ್ಟ್ರಾಗಿರಲಿ, ದೇವೇಗೌಡರು ಡೆಲ್ಲಿಗೆ ಹೋಗಲಿ ಎಂಬ ಮಾತು ಹಬ್ಬತೊಡಗಿತು. ಪರಿಣಾಮ ಡಿ.ಕೆ.ಶಿವಕುಮಾರ್ ಅವರು ಅದೇನೇ ಸರ್ಕಸ್ಸು ಮಾಡಿದರೂ ದೇವೇ ಗೌಡರ ಜಯಭೇರಿಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದಿಂದ ಸತತವಾಗಿ ಗೆಲ್ಲುತ್ತಿದ್ದ ಕಾಂಗ್ರೆಸ್ ನಾಯಕ ಡಿ.ಕೆ. ನಾಯ್ಕರ್ ಒಂದು ಮನೆ ಕಟ್ಟಿದರು. ಈ ಮನೆ ಕಟ್ಟುವ ಸಂದರ್ಭದಲ್ಲಿ ಅವರ ಆಪ್ತರು ಕೆಲವು ಗಂಧದ ತುಂಡುಗಳನ್ನು ಕೊಟ್ಟರು. ಹೀಗೆ ಆಪ್ತರು ಕೊಟ್ಟ ಗಂಧದ ತುಂಡುಗಳನ್ನು ಏನು ಮಾಡಬೇಕು ಎಂದು ಯೋಚಿಸುವಾಗ ಅವರಿಗೆ ಮನೆಯ ದ್ವಾರಬಾಗಿಲಿಗೆ ಅದನ್ನು ಬಳಸಿ ಕೊಳ್ಳಬಹುದು ಅನ್ನಿಸಿತು. ಅದರ ಪ್ರಕಾರವೇ ಗಂಧದ ತುಂಡುಗಳನ್ನು ಬಳಸಿ ಅವರು ಮನೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದರು. ಆದರೆ ಅವರು ಮನೆ ಪೂರ್ಣಗೊಳಿಸಿ ಗೃಹ ಪ್ರವೇಶ ಮಾಡಿದ ಸಂದರ್ಭದಲ್ಲಿ ಬಂದವರ ಪೈಕಿ ಯಾರೋ ಒಬ್ಬರು ವೋಟು ಕೊಟ್ಟವರು ನಾವು, ಗಂಧದ ಮನೆ ಕಟ್ಟಿಸಿಕೊಂಡವರು ಇವರು ಎಂದು ಎತ್ತಿ ಆಡಿದರು. ಈ ಮಾತುಗಳು ಸುನಾಮಿಯಂತೆ ಪಸರಿಸಿದ್ದಷ್ಟೇ ಅಲ್ಲ ಡಿ.ಕೆ. ನಾಯ್ಕರ್ ಅವರ ರಾಜಕೀಯ ಭವಿಷ್ಯವೇ ಮಂಕಾಗಿ ಹೋಗುವಂತೆ ಮಾಡಿದವು. ಅದೇ ಹಾದಿಯಲ್ಲಿ



ಇನ್ನೊಂದು ಘಟನೆ ನಡೆದಿದ್ದು ಎಸ್.ಎಂ.ಕೃಷ್ಣ ಸಿಎಂ ಆಗಿದ್ದ ಸಂದರ್ಭದಲ್ಲಿ ಕನಕಪುರ ಲೋಕಸಭಾ ಸದಸ್ಯ ಚಂದ್ರಶೇಖರ ಮೂರ್ತಿ ನಿಧನರಾದ ನಂತರ ಆ ಸ್ಥಾನಕ್ಕೆ ನಡೆದ ಉಪಚುನಾವಣೆಗೆ ಕಾಂಗ್ರೆಸ್‌ನಿಂದ ಕೃಷ್ಣ ಸಂಪುಟದ ಪ್ರಭಾವಿ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಸ್ಪರ್ಧಿಸಿದ್ದರು. ಅದೇ ಸಂದರ್ಭದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ. ಶಿವಕುಮಾರ್ ಕನಕಪುರ ವ್ಯಾಪ್ತಿಯಲ್ಲಿ ಹೆಚ್ಚು ಪ್ರಭಾವ ಹೊಂದಿದ್ದವರು. ಕೃಷ್ಣರ ಸಂಪುಟದ ಪ್ರಭಾವಿ ಸಚಿವರು ಬೇರೆ. ಹೀಗಾಗಿ ದೇವೇಗೌಡರ ವಿರುದ್ಧ ಡಿ.ಕೆ. ಶಿವಕುಮಾರ್ ಅವರನ್ನು ಗೆಲ್ಲಿಸಲು ಎಸ್.ಎಂ.ಕೃಷ್ಣರ ಸಂಪುಟವೇ ಬೀದಿಗಿಳಿಯಿತು. ಆದರೆ ಪ್ರಚಾರ ಕಾರ್ಯ ಶುರುವಾಗುತ್ತಿದ್ದಂತೆಯೇ ಕನಕಪುರ ಲೋಕಸಭಾ ಕ್ಷೇತ್ರದ ಹಳ್ಳಿಗಳಲ್ಲಿ ಲೇ, ಆ ಡಿ.ಕೆ. ಶಿವಕುಮಾರುಂಗೆ ಮಾಡೋಕೆ ಕೆಲಸ ಇದೆ. ಆದ್ರೆ ದೇವೇಗೌಡ್ರಿಗೆ ಏನೈತೆ ಕೆಲಸ? ಹೀಗಾಗಿ ಶಿವಕುಮಾರು ಇಲ್ಲೇ ಮಿನಿಸ್ಟ್ರಾಗಿರಲಿ, ದೇವೇಗೌಡರು ಡೆಲ್ಲಿಗೆ ಹೋಗಲಿ ಎಂಬ ಮಾತು ಹಬ್ಬತೊಡಗಿತು. ಪರಿಣಾಮ ಡಿ.ಕೆ.ಶಿವಕುಮಾರ್ ಅವರು ಅದೇನೇ ಸರ್ಕಸ್ಸು ಮಾಡಿದರೂ ದೇವೇ ಗೌಡರ ಜಯಭೇರಿಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

● 14ನೇ ಪುಟಕ್ಕೆ...

# ವಿವಾಹ ವೇದ

## ಅಧ್ಯಾಯ-4

ವಿವಾಹ ಎಂದರೆ ಎರಡು ಮನಸ್ಸುಗಳ ಒಂದುಗೂಡುವಿಕೆ. ಎರಡು ಶರೀರಗಳ ಸಂಗಮ.ಈ ಸೇರುವಿಕೆಯ ಕುರಿತು ಇಬ್ಬರಿಗೂ ಎಷ್ಟೋ ಕನಸು ಕಲ್ಪನೆಗಳಿರುತ್ತವೆ.ಊಹೆಗಳಿರುತ್ತವೆ.ಆಸೆಗಳಿರುತ್ತವೆ. ಆಕಾಂಕ್ಷೆಗಳಿರುತ್ತವೆ. ಅವುಗಳನ್ನೆಲ್ಲಾ ತೀರಿಸಿಕೊಳ್ಳಬೇಕೆನ್ನೋ ದುರಾಸೆ ಯಾರಿಗೂ ಇರದು. ಆದರೆ ಇಬ್ಬರ ಮಧ್ಯ ಒಂದು ಬಗೆಯ ಸಂತೃಪ್ತಿ, ಸಹಕಾರ, ಒಂದು ಗ್ರಹಿಕೆ, ಒಂದು ರೀತಿಯ ಆತ್ಮೀಯತೆ– ಕೆಲವು ಕನಸುಗಳನ್ನಾದರೂ ನೆರವೇರಿಸಿಕೊಳ್ಳಬೇಕೆಂಬ ಆಸೆ ಕೊರಗು ಮೂಡುವುದಂತೂ ಸುಳ್ಳಲ್ಲ ನಿಜವೇ.

ಭಾರತೀಯ ಸಂಸ್ಕೃತಿಯೊಳಗೆ ವಿವಾಹಕ್ಕೆ ಉನ್ನತವಾದ, ಉದಾತ್ತವಾದ, ಪವಿತ್ರ ಸ್ಥಾನವಿದೆ.ಪ್ರಾಚೀನರಾದ ನಮ್ಮ ಋಷಿ ಪುಂಗವರು ಮಾನವರ ಜೀವನದೊಳಗೆ ವಿವಾಹವನ್ನ ಮಹತ್ತರವಾದ ಸಂಸ್ಕಾರವೆಂಬಂತೆ ರೂಪಿಸಿದ್ದಾರೆ.

ಪ್ರಾಚೀನ ಋಷಿ ಸಂಪ್ರದಾಯದೊಳಗೆ ವಿವಾಹವೆನ್ನುವುದು ಭೌತಿಕವಾದ ಕ್ರಿಯಾಕಲಾಪವಲ್ಲ.ಅದೊಂದು ವೇದ ಯೋಗ್ಯವಾದ ಶಿಷ್ಟಾಚಾರ.!

### ವಿವಾಹವೆಂಬ ಪರಮಾರ್ಥ

ಮಾನವರ ಜೀವನಕ್ಕೆ ಪ್ರಧಾನವಾದ ಧರ್ಮ ಅರ್ಥ,ಕಾಮಗಳನ್ನ ಧರ್ಮ ಬದ್ಧವಾಗಿ ರೂಪಿಸುವುದಕ್ಕಾಗಿಯೇ ವಿವಾಹ ವ್ಯವಸ್ಥೆ ಒಂದು ಆಧ್ಯಾತ್ಮ ಸಾಧನೆಯಂತಿದೆ.

ವಿವಾಹದಿಂದಲೇ ಮೋಕ್ಷ ಕರತಲಾಮಲಕವಾಗುತ್ತದೆ.

ವಿವಾಹವು ಸ್ತ್ರೀ ಪುರುಷರ ಸಂಬಂಧವನ್ನ ಗಟ್ಟಿಗೊಳಿಸುವಂತಹ ವ್ಯವಸ್ಥೆ.ಅದು ಕಾಲದ ಗತಿಯೊಳಗೆ ಸದಾ ನಿಲ್ಲುತ್ತದೆ.ವಿವಾಹದ ಸಂಬಂಧವನ್ನ ಬಲಹೀನಗೊಳಿಸುವ ಯಾವ ವ್ಯವಸ್ಥೆಯಾದರೂ ಕಾಲದ ಪರೀಕ್ಷೆಯಲ್ಲಿ ಗೆಲ್ಲಲಾರದು.ವೇದ ಕಾಲದಿಂದ ಪ್ರಾರಂಭವಾದ ಈಗಲೂ ಯಾರೂ ಬದಲಿಸಲಾಗದ ಮಹತ್ತರವಾದ ವ್ಯವಸ್ಥೆಯೇ ವಿವಾಹ ವ್ಯವಸ್ಥೆ.ವಿವಾಹವನ್ನ ರಕ್ಷಿಸಿಕೊಳ್ಳುವುದರೊಳಗೇ ಮನುಷ್ಯರ ರಕ್ಷಣೆಯೂ ಅಡಗಿದೆ!ವಿವಾಹದಲ್ಲಿಯೇ ಶಾಂತಿ ಸೌಖ್ಯಗಳಿವೆ!

ಇದು ಪ್ರಾರಂಭ ಮಾತ್ರವೇ

ವಿವಾಹದೊಳಗಿನ ಮಧುರಾನಂದವನ್ನ ಹೀರಿಕೊಳ್ಳಲಿಕ್ಕೆಂದೇ ಕೆಲವು ಯುವತಿ ಯುವಕರು ಕಾತುರಪಡುತ್ತಿರುತ್ತಾರೆ.ಪ್ರೇಮದ ' ಒಳಗೇ.. ಮುಳುಗಿ ತೇಲಬೇಕೆಂದು ಕನಸು ಕಾಣುತ್ತಾ ಇರುತ್ತಾರೆ. ಅಬ್ಬಾ..ವಿವಹವಾದರೆ ಸಾಕು ಎಲ್ಲಾ ಆಗಿ ಹೋದಂತೆಯೇ! ಅಮೃತದ ಕಲಶ ಕೈಯೊಳಗೆ ಇಳಿದಂತೆಯೇ ಅಂತಲೂ ಭಾವಿಸುತ್ತಾರೆ.

ನಿಜಕ್ಕೂ ವಿವಾಹವೆಂಬುದು ಅಂತ್ಯವಲ್ಲ. ಆರಂಭ ಮಾತ್ರವೇ.

ನಿಜಕ್ಕೂ... ಜೀವನ ಪ್ರಾರಂಭವಾಗುವುದೇ ವಿವಾಹದಿಂದ.

ವಿವಾಹವು ನಮಗೆ ಕಾಣಿಸದ ದ್ವಾರಗಳ ಬಾಗಿಲುಗಳನ್ನ ತೆರೆಸುತ್ತದೆ.

ಕೊನೆಯಿರದ ಆನಂದಾನುಭೂತಿಗಳಿಗೆ ರತ್ನಗಂಬಳಿ ಹಾಸುತ್ತದೆ.

ಬಂಧನಗಳೆನ್ನುವ ಅನುಬಂಧಗಳನ್ನ ಜಟಿಲಗೊಳಿಸುತ್ತದೆ.

ದುಡಿಯುವ ಹಠ,ಸಹನೆ,ಧೈರ್ಯ,ಸಾಹಸ,ನಿಸ್ವಾರ್ಥತೆ,ಹೊಸ ಹೊಸ ಕಲಿಕೆ,ಪರರ ಶ್ರೇಯೋಭಿಲಾಸೆಗಳೆಂಬ ಸಮುದ್ರ ಮಂಥನಗಳಿಂದ ಜೀವನವನ್ನ ಸ್ವರ್ಗದಂತಾಗಿಸುತ್ತದೆ. ವಿವಾಹವು ಪ್ರಿಯರಿಗೆ ಪ್ರೇಮಾಮೃತವನ್ನ ದೊರಕಿಸುವಂತೆ ಮಾಡುತ್ತದೆ!

ವಿವಾಹ ಒಂದು ಜವಾಬ್ದಾರಿ

ವಿವಾಹವನ್ನ ಕೇವಲ ಶೃಂಗಾರ ಕೋರಿಕೆಗಳನ್ನ ತೀರಿಸುವ ಒಂದು ಸಾಧನದಂತೆ ಭಾವಿಸುವುದು ಸರಿಯಲ್ಲ.

ವಿವಾಹವೆಂಬುದು ಒಂದು ಎಮೋಷನಲ್ ಅಟಾಚ್ಮೆಂಟ್.ಬಿಡಿಸಲಾಗದ ಮಾನಸಿಕ ಬಂಧ.ಅದು ಒಂದು ಹೆಣ್ಣು ಒಂದು ಗಂಡನ್ನ ಒಂದಾಗಿಸುತ್ತದೆ.ಒಂದಾಗಿಯೇ ಭಾವಿಸುವಂತೆ ಕಲಿಸುತ್ತದೆ.ಒಂದಾಗಿಯೇ ಸಾಗಬೇಕೆನ್ನುತ್ತದೆ.

ವಿವಾಹ ಹೊಸದೊಂದು ಸ್ನೇಹಕ್ಕೆ ಮಾರ್ಗವಾಗುತ್ತದೆ.ವಧುವರರ ಜೀವನವನ್ನ ಊಹಿಸಲಾರದಷ್ಟು ಮಾರ್ಪಡಿಸುತ್ತದೆ.ವಿಚಿತ್ರವೆಂದರೆ ವಿವಾಹದಿಂದಾಗಿಯೇ ಅವರ ಪ್ರಧಾನ್ಯತೆಗಳೂ ಬದಲಾಗುತ್ತವೆ,ದೃಷ್ಟಿಕೋನಗಳೂ ಬದಲಾಗಿಹೋಗುತ್ತವೆ.

ವಿವಾಹ ಪ್ರಧಾನವಾಗಿ ತಮ್ಮದೇ ಸಂತಾನವನ್ನ ಹೊಂದಬೇಕೆನ್ನುತ್ತದೆ.ತಮ್ಮ ತಮ್ಮ ಸ್ವಾರ್ಥಗಳನ್ನ ಬದಿಗಿರಿಸಿ ತಮ್ಮ ಕುಟುಂಬ ಸದಸ್ಯರ ಸುಖ ಸಂತೋಷಕ್ಕಾಗಿ ಶ್ರಮ ಪಡಬೇಕೆನ್ನುತ್ತದೆ.

ವಿವಾಹ ಅಪ್ಪ ಅಮ್ಮಂದಿರ ಒಳ್ಳೆಯದು ಕೆಟ್ಟದ್ದನ್ನ ನೋಡಿಕೊಳ್ಳಲಿಕ್ಕಾಗಿ, ತಮ್ಮ ಮಕ್ಕಳ ಪಾಲನೆ, ಪೋಷಣೆ, ವಿದ್ಯೆ ಆರೋಗ್ಯಾದಿ,ಹಲವು ಸಂಸ್ಕಾರಗಳ ಮೇಲೆ ದೃಷ್ಟಿ ಹರಿಸಬೇಕೆನ್ನುತ್ತದೆ. ವಿವಾಹವು ತಮ್ಮವರನ್ನ ಉನ್ನತರಾಗಿಸಲು ತಿದ್ದಿ ತೀಡುವುದಕ್ಕೆ ಅಹೋರಾತ್ರಿ ಶ್ರಮಿಸಬೇಕೆನ್ನುತ್ತದೆ.

ಪಾಶ್ಚಾತ್ಯ ದೇಶದೊಳಗೆ ವಿವಾಹದಲ್ಲಿ ಸ್ವರ್ಥ ಸುಖವೇ ಮುಖ್ಯವೆಂದು ಭಾವಿಸುತ್ತಾರೆ.

ವಿವಾಹದ ಮೂಲಕ ತಮ್ಮ ಸುಖಕ್ಕಿಂತಲೂ ತಮ್ಮವರ ಸುಖ,ತಮ್ಮ ತಮ್ಮ ಸಮೂಹ ಸುಖ,ಸಮಾಜದ, ದೇಶದ ಸುಖ ಸೌಭಾಗ್ಯವನ್ನ ಕೋರುತ್ತದೆ ಭಾರತೀಯ ಸಂಸ್ಕೃತಿ.!

ಮನಸ್ಸು ಮನಸ್ಸಿನ ಆಸರೆ

ವಿವಾಹವೆಂಬುದು ಸುಳ್ಳಲ್ಲದ ನಿಜಮಾತ್ರವಲ್ಲ ಒಂದು ಅಗತ್ಯವೂ ಹೌದು.–ವಿವಾಹ ಆಸರೆಗಾಗಿ, ಜೀವನದ ಸಹಚರ್ಯಕ್ಕಾಗಿ, ಪ್ರೇಮಾಭಿಮಾನಗಳಿಗಾಗಿ!

ಅಪ್ಪ ಅಮ್ಮಂದಿರು ಕೆಲವು ಕಾಲವೇ ಇರುತ್ತಾರೆ.ಮಕ್ಕಳು ಕೆಲವು ಕಾಲವೇ ಕೂಡಿ ಇರುತ್ತಾರೆ.ಕೊನೆ ತನಕ ಜೊತೆಗಿರುವವರು ಇಬ್ಬರೇ.ಆ ಜನ್ಮ ಸಹಚರರಾದ ಪತಿ ಪತ್ನಿಯರು!

'ನನ್ನವರು' ಅಂತ ಗರ್ವಪಡಲಿಕ್ಕೆ,ನನಗಾಗಿ ಒಬ್ಬರಿದ್ದಾರೆ ಅಂತ ತೃಪ್ತಿ ಪಡಲಿಕ್ಕೆ,ನನಗೆ ಆಧಾರವಾಗಿ ಇನ್ನೊಬ್ಬರಿದ್ದಾರೆ ಅಂತ ಕೊಚ್ಚಿಕೊಳ್ಳಲಿಕ್ಕೆ,ಸಂಗಾತಿಗಳ ಜೊತೆ ಅಗತ್ಯ.ಅದನ್ನ ವಿವಾಹ ಮಾತ್ರವೇ ನೀಡಬಲ್ಲದು.ಪ್ರೇಮಿಸಲಿಕ್ಕೆ,ಪ್ರೇಮಿಸಲ್ಪಡಲಿಕ್ಕೆ,ಗೌರವಿಸಲಿಕ್ಕೆ,ಗೌರವಿಸಲ್ಪಡಲಿಕ್ಕೆ,ಹಂಚಿಕೊಳ್ಳಲಿಕ್ಕೆ,ಒಟ್ಟಿಗೆ ಸೇರಲಿಕ್ಕೆ,ಸಮೂಹ ಧರ್ಮಗಳನ್ನ ನಿರ್ವಹಿಸಿಕೊಳ್ಳಲಿಕ್ಕೆ ಇಲ್ಲಿ ವಿವಾಹವೆಂಬ ಆಸರೆ ಅನಿವಾರ್ಯ.

ಜನ ಒಂಟಿಯಾಗಿಯೇ ಜೀವನವೆಲ್ಲಾ ಪ್ರಯಾಣಿಸುವಂತಹ ದುಸ್ಥಿತಿ ಬಾರದಂತೆ ವಿವಾಹ ಒಂದು ಆಸರೆ ನೀಡುವಂತದ್ದು.ಜೀವಿಗೆ ಒಂದು ನೆರಳು ಬೇಕು.ಒಂದು ಬೆಳಕು ಬೇಕು.ತನಗೆ ಸಂತೋಷ ವಾದಾಗ ಬಿಗಿದಪ್ಪಿ ಉದ್ಗರಿಸಲಿಕ್ಕೆ,ನೋವಾದಾಗ ಭುಜದ ಮೇಲೆ ಒರಗಿ ದುಃಖ ನೀಗಿಕೊಳ್ಳಲಿಕ್ಕೆ ಭಾವನೆಗಳನ್ನ ಹಂಚಿಕೊಳ್ಳಲಿಕ್ಕೆ ವಿವಾಹವು ಒಂದು ಅನುಬಂಧ ಎಂಬುದು ತಪ್ಪಲ್ಲ ನಿಜ.

ಮನಸಿನ ಮನಸಾಗಿ ಬದುಕನ್ನ ಬದುಕಲಿಕ್ಕೆ ಜೊತೆಗೊಬ್ಬರಿದ್ದರೆ ಅದೇ ಭಾಗ್ಯ ಅದೇ ಸ್ವರ್ಗ!

ಅದೊಂದು ಜೇಡರ ಬಲೆ ಅಲ್ಲ

ಗಂಡಿಗೆ ಸೆಕ್ಸ ಬೇಕು.ಹೆಣ್ಣಿಗೆ ಸೆಕ್ಯುರಿಟಿ ಬೇಕು.ಈ ಹಂಚಿಕೆಯ ಮೇಲೆಯೇ ವಿವಾಹ ವ್ಯವಸ್ಥೆ ಆಧಾರವಾಗಿದೆ ಅನ್ನುತ್ತಾರೆ ಕೆಲವರು.



ತೆಲುಗು ಮೂಲ: ಸಿಂಹ ಪ್ರಸಾದ್
ಕನ್ನಡಕ್ಕೆ: ಡಾ.ಶಿವಕುಮಾರ್ ಕಂಪ್ಲಿ

ಆನಂದವನ್ನ, ಮಕರಂದವನ್ನ ಎರಡೂ ಬೊಗಸೆಗಳಲ್ಲಿ ಹೀರಿಕೊಳ್ಳುವ ಏಕೈಕ ಮಾರ್ಗವೇ ವಿವಾಹ ಅಂತ ಇನ್ನೂ ಕೆಲವರು ಭಾವಿಸುತ್ತಾರೆ.

ಈ ಎರಡೂ ಅಭಿಪ್ರಾಯಗಳು ಸರಿಯಲ್ಲ.

ವಿವಾಹ ಜೀವನವನ್ನ ನಡೆಸುವುದಷ್ಟೇ ಅಲ್ಲ ನಿಯಂತ್ರಿಸಬಲ್ಲದೂ ಕೂಡ.

ಆನಂದಗಳು,ಅಮೃತ ಕ್ಷಣಗಳು,ಅಪೂರ್ವ ಭಾವನೆಗಳು, ಅದ್ಭುತ ಅನುಭೂತಿಗಳು ವಿವಾಹದೊಳಗೆ ಇರುತ್ತವೆ.

ಕಷ್ಟಗಳು, ಕಣ್ಣೀರು,ನೋವು, ಆವೇಶಗಳು, ಕೋಪಗಳು ಸಹಿತ ವಿವಾಹದೊಳಗೇ ಇರುತ್ತವೆ.

ಸಹಿಸುತ್ತ, ಕಲಿಯುತ್ತಾ, ವ್ಯವಹರಿಸಿದರೆ. ಚಿತ್ತ ಶುದ್ಧಿಯಿಂದ, ನಿಸ್ವಾರ್ಥ ಚಿಂತನೆಯಿಂದ, ನಡೆದುಕೊಂಡರೆ. ಅಹಂ ಮತ್ತು ಅಲ್ಪ ಭಾವನೆಗಳನ್ನ ತಂದುಕೊಳ್ಳದಿದ್ದರೆ.ಪಡೆಯುವುದಕ್ಕಿಂತಲೂ ನೀಡುವುದರೊಳಗಿರುವ ತೃಪ್ತಿಯತ್ತಲೇ ಹೊರಳಿದರೆ ವಿವಾಹದೊಳಗಿನ ಆನಂದಾಮೃತವನ್ನ ನಿರಂತರವಾಗಿ ಪಡೆಯಬಹುದು.

ಸಾಹಸ, ಸಹಾನುಭೂತಿ, ಅರಿವು, ಅನುಕಂಪ ಇದ್ದರೆ ಬದುಕನ್ನ ಸುಖಮಯವಾಗಿಸಿಕೊಳ್ಳಬಹುದು.

ವಿವಾಹವು ಜೇಡರ ಬಲೆಯೋ... ಬಂಗಾರದ ಸಂಕೋಲೆಯೋ.. ಅಲ್ಲ.

ಬದುಕಿಗೆ ಧನ್ಯತೆಯನ್ನ ತಂದೊದಗಿಸುವ ಒಂದು ಅವಕಾಶ. ಅಪರೂಪದ ಒಂದು ಮೋಕ್ಷ ಸಾಧನ.ಹತ್ತು ಜನರ ಶ್ರೇಯಸ್ಸಿಗಾಗಿ ತನ್ನನ್ನ ತಾನು ನೈವೇದ್ಯದಂತೆ ಅರ್ಪಿಸಿಕೊಳ್ಳುವ ಮಹಾ ಸಂಕಲ್ಪ!

ಸ್ವೇಚ್ಛೆ ಸ್ವಾತಂತ್ರಗಳು

ವಿವಾಹದೊಂದಿಗೆ ಯುವತಿ ಯುವಕರು ತಮ್ಮ ಸ್ವೇಚ್ಛೆ ಯನ್ನ ಸ್ವಾತಂತ್ರ್ಯವನ್ನ ಕಳೆದುಕೊಳ್ಳುತ್ತಾರೆಂದು ಕೆಲವರು ಆರೋಪಿಸುತ್ತಾರೆ.

ಅದು ಅರ್ಧ ಸತ್ಯ ಮಾತ್ರ.

ವಿವಾಹಕ್ಕೆ ಮುಂಚೆ ಜನ 'ನನ್ನ ಇಷ್ಟ' ,'ನನ್ನ ಸಂತೋಷ','ನನ್ನ ಹಣ' ಅಂದುಕೊಳ್ಳುತ್ತಾರೆ. ವಿವಾಹವಾದಮೇಲೆ 'ನಾ' ಸ್ಥಾನವೇ 'ನಮ್ಮ' ಸ್ಥಾನವಾಗಿ ಬದಲಾಗುತ್ತದೆ.ಇಬ್ಬರೂ ಅರಿತು ಜೊತೆಯಾಗಿ ಆಲೋಚಿಸೋ ಗಳಿಗೆ ಬರುತ್ತದೆ.ಇಬ್ಬರ ಪ್ರಾಧಾನ್ಯತೆಗಳು ಬದಲಾಗುತ್ತವೆ. ಜವಾಬ್ದಾರಿಗಳ ನಿರ್ವಹಣೆಯ ವಿನಃ ಇಬ್ಬರೂ ತಮ್ಮನ್ನ ತಾವು ನಿಯಂತ್ರಿಸಿಕೊಳ್ಳ ಬೇಕಾಗುತ್ತದೆ.ಬೆಟ್ಟದಂತಹ ತಮ್ಮ ಇಷ್ಟ ಅನಿಷ್ಟಗಳನ್ನ ಪಕ್ಕಕ್ಕೆ ನೂಕುವ ಸಂದರ್ಭಗಳೂ ಬರಬಹುದು.

ಹಾಗಂದ ಮಾತ್ರಕ್ಕೆ ವಿವಾಹದಿಂದ ಅವರ ಸ್ವೇಚ್ಛೆ ಕಳೆದು ಹೋದಂತಲ್ಲ.

ನಿಜಕ್ಕೂ ವಿವಾಹದ ನಂತರವೇ ಪತಿ ಪತ್ನಿಯರ ಸ್ವೇಚ್ಛಾ ಸ್ವಾತಂತ್ರ್ಯಗಳು ಹೆಚ್ಚುತ್ತವೆ.ಆದರವು ಜವಾಬ್ದಾರಿಯಿಂದ ಕೂಡಿದ ಸ್ವೇಚ್ಛಾ ಸ್ವಾತಂತ್ರ್ಯಗಳು.!

### ಈ ಬಂಧ ಶಾಶ್ವತ

ವಿವಾಹಕ್ಕೆ ಮೊದಲು ವಿವಾಹವಾಗುವ ಹೆಣ್ಣು ಸುಂದರಿಯೇ ಆಗಿರಬೇಕು ಅಂತ ಪುರುಷ ಕೋರಿಕೊಳ್ಳಬಹುದು.ಮನ್ಮಥನೇ ಪತಿಯಾಗಿ ಸಿಗಬೇಕು ಅಂತ ಸ್ತ್ರೀ ಕೋರಿಕೊಳ್ಳಬಹುದು. ಒಬ್ಬರ ಅಂದ,ವಯಸ್ಸು ಮತ್ತೊಬ್ಬರನ್ನ ಮಾಯ ಮಾಡಬಹುದು. ಮೋಹದೊಳಗೆ ಬೀಳಿಸಬಹುದು.ಆಕರ್ಷಣೆಯೊಳಗೆ ಸಿಲುಕಿಸಿ ಗಿರಕಿ ಹೊಡೆಸಬಹುದು.

ವಿವಾಹವಾದಮೇಲೆ!?.. ಆಕೆ ಹೇಗೆ ಇದ್ದರೂ ಆತನಿಗೆ ಸುಂದರಿಯೇ!,

ಆತನೇಗಿದ್ದರೂ ...ಆಕೆಯ ಕಣ್ಣಿಗೆ ಅವನೇ ನವ ಮನ್ಮಥ!.

ಅಂದ ಮಾಸಿ ಹೋಗುತ್ತದೆ.ಯೌವನ ಕರಗಿ ಹೋಗುತ್ತದೆ.ಮೋಹದ ಪರದೆ ಹರಿದು ಹೋಗುತ್ತದೆ.ಆದರೂ ವಿವಾಹವಾದ ಅವರ ಬಂಧ ಸಡಿಲದು.ಪ್ರೇಮ ಮಾಸದು.

ವಯಸ್ಸು ಬೆಳೆದಂತೆಲ್ಲಾ ಕೆಲವರ ಮಾನಸಿಕ ಅನುಬಂಧ ಮತ್ತಷ್ಟೂ.. ಮಾಗುತ್ತದೆ.

ಒಬ್ಬರ ಸಖ್ಯವೇ ಮತ್ತೊಬ್ಬರ ಲೋಕವಾಗುತ್ತದೆ,ಒಬ್ಬರು ಇರದೇ ಹೋದರೆ ಮತ್ತೊಬ್ಬರು ಇಲ್ಲವೆಂದೇ.. ಅನಿಸುತ್ತದೆ.ಒಬ್ಬರಿಗಾಗಿ ಮತ್ತೊಬ್ಬರು ಬದುಕುವ ಅಪೂರ್ವ ಅನುಬಂಧವೇ ವಿವಾಹ ಬಂಧ.!

### ವಿವಾಹ ಸಂಸ್ಕಾರ ಅಗತ್ಯವೇ..

ವಿವಾಹ ಪ್ರಾಥಮಿಕವಾಗಿ ನ್ಯಾಯ ಸಮ್ಮತವಾದ ಸಮೂಹ ಒಪ್ಪಂದ.

ಅದಕ್ಕೆ ಜಾತಿಪರ ಅಧ್ಯಾಯಗಳಿಲ್ಲ.ವಿವಾಹಕ್ಕೆ ಸಂಸ್ಕಾರವೇ ಅಗತ್ಯ. ಮೋಹದ ಒಂದು ಎಳೆಯನ್ನ ವಿವಾಹ ಅನ್ನಲಾಗದು.

ನಮ್ಮ ದೇಶದೊಳಗೆ ವಿವಾಹ ವ್ಯಕ್ತಿಗತವಲ್ಲ . ಸಮಾಜಗತ.ಸಮೂಹ ಸಂಬಂಧಿ.

ವಿವಾಹ ರಹಸ್ಯ ಕಾಂಡವಲ್ಲ.ಬಹಿರಂಗ ವೇದಿಕೆ.

ವಿವಾಹದಿಂದಲೇ ಸ್ತ್ರೀ ಪುರುಷರ ಬಂಧಕ್ಕೆ ಒಂದು ಗುರುತು ಲಭಿಸುತ್ತದೆ.ಅವರ ಸಂತಾನಕ್ಕೆ ವಾರಸತ್ವದ ಹಕ್ಕು ಹರಿದು ಬರುತ್ತದೆ.

ಇಬ್ಬರೂ ಕೂಡಾ ಒಬ್ಬರಿಗೊಬ್ಬರು ವಿಶ್ವಾಸ ಪಾತ್ರರಾಗಿ ಬದುಕಲಿಕ್ಕೆ,ಕೌಟುಂಬಿಕ ಜೀವನ ಸಾಗಿಸಲಿಕ್ಕೆ, ವಿವಾಹ ಸಮಾಜ ಆಧಾರವಾಗಿರುತ್ತದೆ.

ಇಬ್ಬರೂ ಜವಾಬ್ದಾರಿಗಳನ್ನ ಸರಿಯಾಗಿ ನಿರ್ವಹಿಸುತ್ತಿರುವರಾ ಅಂತ ವಿವಾಹ ವ್ಯವಸ್ಥೆ ಗಮನಿಸುತ್ತದೆ.ದಾರಿ ತಪ್ಪಿದರೆ ಎಚ್ಚರಿಕೆನೀಡಿ ಸನ್ಮಾರ್ಗದೊಳಗೆ ಇರಿಸುತ್ತದೆ.

ವಿವಾಹ ಸ್ತ್ರೀ ಪುರುಷರ ಅನುಬಂಧಕ್ಕೆ ಶ್ರೀರಕ್ಷೆ! ನ್ಯಾಯಬದ್ಧತೆಗಾಗಿ

ವಿವಾಹ ಎನ್ನುವ ಕಾರ್ಯಕ್ರಮ ಜರುಗಿದರೆ ನ್ಯಾಯಯುತವಾದ ಹಕ್ಕುಗಳು ಲಭಿಸುತ್ತವೆ.ವಿವಾಹ ಕಾರ್ಯವಿಲ್ಲದ ಮಾತ್ರಕ್ಕೆ ಸ್ತ್ರೀ ಪುರುಷರು ಪ್ರೇಮದಿಂದ ಕೂಡಿರಬಾರದು ಅಂತ ಅಲ್ಲ.ಇಬ್ಬರೂ ಸಖರಂತೆ, ನೆರಳಂತೆ, ಆಸರೆಯಾಗಿ ಇರಬಹುದು. ಶಾರೀರಿಕ ಸಂಬಂಧವನ್ನೂ ಇಟ್ಟುಕೊಳ್ಳಬಹುದು.ಒಬ್ಬರ ಬಂಧು ಮಿತ್ರರನ್ನ ಇನ್ನೊಬ್ಬರು ಗೌರವಿಸಿಕೊಳ್ಳಲೂ ಬಹುದು.

ಆದರೆ ಅವರ ಅನುಬಂಧವನ್ನ ನ್ಯಾಯ ಗುರ್ತಿಸದು. ಅವರಿಗೆ ಯಾವುದೇ ಹಕ್ಕುಗಳನ್ನ ನೀಡದು. ಮತ್ತಾವುದೋ ರಕ್ಷಣೆಯನ್ನ ಕಲ್ಪಿಸದು.

ವಿವಾಹ ಮಾಡಿಕೊಳ್ಳದೆಯೇ ಮಕ್ಕಳನ್ನ ಹೆತ್ತು ಬಿಟ್ಟುಹೋದರೆ? ಆ ಸ್ತ್ರೀಯನ್ನ ಆತ ಸಾಕುವ ಅಗತ್ಯವಿಲ್ಲ. ಆ ಮಕ್ಕಳಿಗೆ ತನ್ನ ಆಸ್ತಿಯನ್ನ ಹಂಚುವ ಜವಾಬ್ದಾರಿ ಇಲ್ಲ.

ವಿವಾಹಿತ ಪುತ್ರರಿಗೇ ಆಸ್ತಿ ಹಕ್ಕು ಲಭಿಸುತ್ತದೆ. ವಿವಾಹವಾಗದವರನ್ನ ಜನರು ಇಟ್ಟುಕೊಂಡವಳು,ಇಟ್ಟುಕೊಂಡವ ಅಂದು ಬಿಡುತ್ತಾರೆ.

### ವಿವಾಹ ವಿಶಿಷ್ಟತೆ

ಸಾಂಪ್ರದಾಯಿಕ ಸ್ವಭಾವದಲ್ಲಿ ವಿವಾಹ ಯಾರೊಂದಿಗೆ ನಡೆದರೂ ಒಂದು ಕಡೆ ಸೇರಿ ಜೀವಿಸುವುದಕ್ಕಾಗಿ ಏರ್ಪಟ್ಟ ಮಾನಸಿಕ ಅನುಬಂಧ ಎನಿಸುತ್ತದೆ.ವಿವಾಹವೆಂದರೆ ಮಾನಸಿಕ, ಶಾರೀರಿಕ, ಆರ್ಥಿಕ ಅಗತ್ಯಗಳನ್ನ ತೃಪ್ತಿಪಡಿಸೋ ಒಂದು ಮಹೋನ್ನತ ಸಾಧನ.

ಮರಣದ ವಿನಃ ಮತ್ತ್ಯಾವುದೂ.. ತಮ್ಮ ಅನುಬಂಧವನ್ನ ಕಳಚಲಾರದೆಂದು, ತಮ್ಮದು ಜನ್ಮ ಜನ್ಮದ ಅನುಬಂಧವೆಂದೂ, ವಿಶ್ವಾಸುವುದು ಭಾರತೀಯ ವಿವಾಹ ವ್ಯವಸ್ಥೆ.ಹಾಗಾಗಿ ಇಲ್ಲಿ ವಿವಾಹವೇ.. ಒಂದು ಔನತ್ಯದ ಪರಾಕಾಷ್ಠೆ!

### ವಿವಾಹ ದಿನೋತ್ಸವ

ಫೆಬ್ರವರಿ 22 ನ್ನ ವಿಶ್ವ ವಿವಾಹ ದಿನೋತ್ಸವಾಗಿ ವಿಶ್ವ ವ್ಯಾಪಿಯಾಗಿ ಆಚರಿಸಿಕೊಳ್ಳುತ್ತಾರೆ. ಇದುವೇ ವಿವಾಹದ ವಿಶಿಷ್ಟತೆಯನ್ನ, ಔನತ್ಯವನ್ನ ,ಹಿಡಿದೆತ್ತಿ ತೋರುವುದು.ವಿವಾಹವನ್ನ ವಿಶ್ವ ಹೊಸ ಬಗೆಯಲ್ಲಿ ಗುರ್ತಿಸಲಿಕ್ಕಾಗಿಯೇ ಈ ಆಚರಣೆ ಎನ್ನಬಹುದು.

ಕರಗುತ್ತಾ ,ಬೆಳಗುವ ಎರಡು ಮೇಣದ ಬೊಂಬೆಗಳನ್ನ ವಿವಾಹ ದಿನೋತ್ಸವಕ್ಕೆ ಸಂಕೇತವಾಗಿ ಆರಿಸಿಕೊಂಡಿರುವುದೂ ಇಲ್ಲಿ ಗಮನಾರ್ಹ.!

### ಭಾರತೀಯ ವಿವಾಹ ವ್ಯವಸ್ಥೆ

ಸಮಾಜವನ್ನ ಸರಿಯಾದ ದಾರಿಯೊಳಗೆ ನಡೆಸುವುದೇ ವಿವಾಹ ವ್ಯವಸ್ಥೆಯ ಗುರಿ.ಪಶುಗಳಂತೆ ಬೇಕಾಬಿಟ್ಟಿ ಪ್ರವರ್ತಿಸದಂತೆ, ಇಂದ್ರಿಯಗಳನ್ನ ನಿಗ್ರಹಿಸಿಕೊಂಡು, ಆ ಮೂಲಕ ಆತ್ಮೋನ್ನತಿ ಹೊಂದುವುದು, ಸಮಾಜೋದ್ಧಾರದೊಳಗೆ ಪಾಲು ಪಡೆದುಕೊಳ್ಳುವುದು, ವಿವಾಹ ವ್ಯವಸ್ಥೆಯ ಮೂಲಕವೇ ಸಾಧ್ಯ.

ವಿವಾಹವೆಂಬ ನಿಯಮ ದಿಂದಲೇ ಸಮಾಜ ಆರೋಗ್ಯವಾಗಿದೆ. ಮಾನವಜಾತಿ ಅಭಿವೃದ್ಧಿ ಹೊಂದುತ್ತಿದೆ. ಆತ್ಮ ಸಂಸ್ಕಾರ ಬೆಳೆಯುವುದಕ್ಕೆ ,ಆದರ್ಶ ಜೀವನ ನಡೆಸುವುದಕ್ಕೆ , ವಿವಾಹವು ಪ್ರೇರೇಪಣೆ ನೀಡುತ್ತದೆ.

ಆನಂದ ಪ್ರದವಾದ ವ್ಯಕ್ತಿಗತ ಜೀವನ,ಒಳ್ಳೆಯ ಆರೋಗ್ಯ,ಪ್ರಣತಿಯ ಬೆಳಕಿಗೆ ಬತ್ತಿಯಂತೆ ಹೊಸೆವ ವಿವಾಹದ ಬದುಕು, ತನ್ನ ಪ್ರಯೋಜನಗಳಿಂದಲೇ ಗತಕಾಲದಿಂದಲೂ...ಆಧುನಿಕ ಯಾಂತ್ರಿಕ,ಗಣಕೀಕೃತ, ಅಭಿವೃದ್ಧಿಯೊಳಗೂ ಸಹಿತ ಗಟ್ಟಿಯಾಗಿಯೇ ನಿಂತಿದೆ.

ಪರಸ್ಪರ ಪ್ರೇಮಾಭಿಮಾನಗಳು,ಶಾಶ್ವತತ್ವ,ಸ್ವಚ್ಛತೆಗಳಿಗೆ ಪ್ರತಿಬಿಂಬದಂತೆ ಈ ವಿವಾಹ ವ್ಯವಸ್ಥೆ ನಿಂತಿದೆ.

ಆದ್ದರಿಂದಲೇ ಭಾರತೀಯ ವಿವಾಹ ವ್ಯವಸ್ಥೆ ಅತ್ಯಂತ ಪ್ರತಿಷ್ಠೆಯಾದದ್ದು, ಆದರ್ಶಪ್ರಾಯವಾಗಿ ನಿಂತು ವಿಶ್ವದೊಳಗಿನ ಇತರ ಜನಾಂಗಗಳಿಂದಲೂ ಕೊಂಡಾಡಿಸಿಕೊಳ್ಳುತ್ತಿದೆ!

ಇಂತಹ ಸರ್ವೋತ್ಕೃಷ್ಟವಾದ ವಿವಾಹ ಸಂಪ್ರದಾಯವನ್ನ ಗೌರವಿಸೋಣ! ಗೌರವಿಸಿಕೊಳ್ಳೋಣ!

# ವಿಧಾನಸಭಾ ಚುನಾವಣೆ ನಂತರವೇ ಪಾಲಿಕೆ ಚುನಾವಣೆಗೆ ಮುಹೂರ್ತ!

●ಲಿಂಗರಾಜು ಡಿ. ನೊಣವಿನಕೆರೆ

ಅದೇಕೋ ಗೊತ್ತಿಲ್ಲ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಹಿಡಿದಿರುವ 'ಬಾಲಗ್ರಹ' ಸಧ್ಯಕ್ಕೆ ಬಿಡುವ ಲಕ್ಷಣಗಳು ಕಾಣುತ್ತಿಲ್ಲ. ಆಡಳಿತಾರೂಢ ಭಾರತೀಯ ಜನತಾ ಪಾರ್ಟಿ ಚುನಾವಣೆಗೆ ಅಡ್ಡಿಪಡಿಸುತ್ತಿದೆ ಎಂದು ದೂರಿ ವಿರೋಧ ಪಕ್ಷದ ಮಾಜಿ ಕಾರ್ಪೋರೇಟರ್‌ಗಳು ನ್ಯಾಯಾಲಯದ ಮೆಟ್ಟಿಲು ಹತ್ತಿರುವುದು ಹಳೆಯ ಸಂಗತಿ. ಸುಪ್ರೀಂ ಬಾಗಿಲಲ್ಲಿ ಚುನಾವಣಾತಕರಾರು ಅರ್ಜಿಇದ್ದರೂಅದಕ್ಕೆಇನ್ನೂಜೀವ ಸಿಕ್ಕಿಲ್ಲ. ಉತ್ತರ ಪ್ರದೇಶ ಸೇರಿದಂತೆಐದು ರಾಜ್ಯಗಳ ಚುನಾವಣಾ ಫಲಿತಾಂಶದಿಂದಾದರೂ ಬಿಜೆಪಿ ಬಿಬಿಎಂಪಿ ಚುನಾವಣೆಗೆ ಮನಸ್ಸು ಮಾಡುವುದೇನೋ ಎಂಬ ಉತ್ಸಾಹದಲ್ಲಿದ್ದವರ ಆಸೆಗೆ ಇದೀಗ ಬೆಂಗಳೂರು ಮಹಾನಗರದ ಶಾಸಕರುಗಳೇ ತಣ್ಣೀರುಎರಚಿದ್ದಾರೆ.

2020 ಸೆಪ್ಟೆಂಬರ್‌ಗೆಅಂತ್ಯಗೊಂಡ ಬಿಬಿಎಂಪಿ ಆಡಳಿತದಲ್ಲಿ ಈಗ ಜನಪ್ರತಿನಿಧಿಗಳು ಇಲ್ಲ. ಬೆಂಗಳೂರು ಮಹಾನಗರದ ಶಾಸಕರುಗಳದ್ದೇ ಕಾರುಬಾರುಎಂಬಂತಾಗಿದೆ.ಬೆಂಗಳೂರು ಮಹಾನಗರದಲ್ಲಿದೊಡ್ಡದೊಡ್ಡ ಸಮಸ್ಯೆಗಳಾಗಲೀ, ಅತಿ ಸಣ್ಣ ಸಣ್ಣ ಸಮಸ್ಯೆಗಳೇ ಆದರೂಅದರ ನಿರ್ವಹಣೆ ಶಾಸಕರುಗಳಿಂದ ಸಾಧ್ಯವಿಲ್ಲ. ಕಾರ್ಪೋರೇಟರ್‌ಗಳ ಅವಶ್ಯಕತೆತುಂಬಾಇದೆ.ಇಷ್ಟಿದ್ದರೂ ಬಿಬಿಎಂಪಿಗೆ ಚುನಾವಣೆ ನಡೆಸುವಲ್ಲಿ ಸರ್ಕಾರಇನ್ನೂ ಮನಸ್ಸು ಮಾಡಿಲ್ಲ. ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲಾಗಿದೆ, ಆ ನಿಟ್ಟಿನಲ್ಲಿ ವಾರ್ಡ್‌ಗಳ ಪುನರ್ ವಿಂಗಡಣೆ ನಡೆಯುತ್ತಿದೆ, ಬಿಬಿಎಂಪಿಗೆ ಪ್ರತ್ಯೇಕಕಾಯ್ದೆ ಹೀಗೆ ನಾನಾ ಕುಂಟು ನೆಪಗಳನ್ನು ಮುಂದಿಟ್ಟುಕೊಂಡು ಸರ್ಕಾರ ಸುಪ್ರೀಂಕೋರ್ಟ್ ಮುಂದೆಇರುವತಕರಾರುಅರ್ಜಿಗೆ ಪೂರಕವಾಗಿ ಸ್ಪಂದಿಸುತ್ತಿಲ್ಲ. ವಿರೋಧ ಪಕ್ಷಕಾಂಗ್ರೆಸ್ ಆಡಳಿತಾರೂಢ ಬಿಜೆಪಿ ಆಡಳಿತ ಕುರಿತಂತೆ ನಾನಾ ವಿಚಾರಗಳಿಗೆ ವಿರೋಧ ಮಾಡುತ್ತಿದೆ. ಆದರೆಒಂದು ದಿನವೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವಂತೆಒತ್ತಡತರುವ ಮನಸ್ಸು ಮಾಡಿಲ್ಲ. ಅಲ್ಲಿಗೆ ಬಿಬಿಎಂಪಿ ಚುನಾವಣೆ ವಿಚಾರದಲ್ಲಿ ಬಿಜೆಪಿ ಶಾಸಕರುಗಳೊಂದಿಗೆ ಬೆಂಗಳೂರಿನ ಕಾಂಗ್ರೆಸ್ ಶಾಸಕರುಗಳೂ 'ಕೈ' ಜೋಡಿಸಿರುವುದು ನಿಶ್ಚಿತ. ಮೊನ್ನೆ ಮೊನ್ನೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರು ಬೆಂಗಳೂರು ಮಹಾನಗರದ ಸುಧಾರಣೆ ಮತ್ತುಅಭಿವೃದ್ಧಿಗಾಗಿ ನಿಗದಿಪಡಿಸಿರುವ ದೊಡ್ಡ ಮೊತ್ತದಅಂದರೆ 8 ಸಾವಿರಕೋಟಿಗೂ ಹೆಚ್ಚಿನ



ಹಣದಲ್ಲಿ ನಾವೆಷ್ಟು ಪಾಲು ಪಡೆಯಬಹುದೆಂಬ ಮಂತ್ರಾಲೋಚನೆಯಲ್ಲಿ ಬೆಂಗಳೂರಿನ ಶಾಸಕರುಗಳು ತೊಡಗಿರುವುದರಿಂದ ಬಿಬಿಎಂಪಿಗೆ ಚುನಾವಣೆ ನಡೆಸುವ ವಿಚಾರ ಅವರುಗಳಿಗೆ ಗಂಭೀರ ಎನಿಸಿದಂತೆ ಕಾಣುತ್ತಿಲ್ಲ. ಕಾಂಗ್ರೆಸ್ ಶಾಸಕರುಗಳು ಮೇಲ್ನೋಟಕ್ಕೆ ಚುನಾವಣೆಗಾಗಿ ನೆಪಮಾತ್ರಕ್ಕೆಒತ್ತಡ ಹಾಕುವಂತೆ ಕಂಡರೂ ರಹಸ್ಯಒಪ್ಪಂದ ಮಾಡಿಕೊಂಡಿರುವಂತೆಚುನಾವಣೆಗೆ ನಿರಾಸಕ್ತಿತೋರುತ್ತಿದ್ದಾರೆ.ಐದು ರಾಜ್ಯಗಳ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ಇತ್ತ ಬಿಬಿಎಂಪಿಗೆ ಚುನಾವಣೆ ನಡೆದೇ ಬಿಟ್ಟಿತುಎಂದು ಬಿಜೆಪಿ ಆಕಾಂಕ್ಷಿಗಳು ಕನಸಿನ ತುತ್ತತುದಿ ತಲುಪಿದ್ದರು. ಕಾಂಗ್ರೆಸ್ ಪಾಳಯದಲ್ಲೂ ಸಹ ಇದೇಉತ್ಸಾಹ ನಿರ್ಮಾಣವಾಗಿತ್ತು.ಆದರೆಆಗಿದ್ದೇ ಬೇರೆ.

ಈ ಮಧ್ಯೆರಾಜ್ಯದಲ್ಲಿಅವಧಿಗೆ ಮುನ್ನ ವಿಧಾನಸಭಾ ಚುನಾವಣೆಗಳು ನಡೆಯಲಿದೆ ಎಂಬ ಮಾಧ್ಯಮಗಳ ವರದಿಯು ಬಿಬಿಎಂಪಿ ಚುನಾವಣೆ ಮೇಲೆ ತನ್ನ ಕರಿನೆರಳು ಬೀಳಲಾರಂಭಿಸಿತು. ಅವಧಿಗೆ ಮುನ್ನಚುನಾವಣೆ ನಡೆಸುವ ಬಿಜೆಪಿಯ ಪ್ರಸ್ತಾವನೆಗೆಕಾಂಗ್ರೆಸ್ ಪಕ್ಷವೂಕೂಡತನ್ನ ಸಹಮತ ವ್ಯಕ್ತಪಡಿಸಿದೆ ಎಂದು ತಿಳಿದುಬಂದಿದೆ.ಅವಧಿಗೆ ಮುನ್ನ ಅಂದರೆ ಗುಜರಾತ್ ರಾಜ್ಯದ ಚುನಾವಣೆ ಜೊತೆಜೊತೆಗೆ ರಾಜ್ಯದ ಚುನಾವಣೆಯನ್ನು ಎದುರಿಸಿ ಪಕ್ಷವನ್ನುಅಧಿಕಾರಕ್ಕೆತರುವಉತ್ಸುಕತೆ ಭಾರತೀಯಜನತಾ ಪಕ್ಷದ್ದಾಗಿದೆ.

ಐದು ರಾಜ್ಯಗಳ ಚುನಾವಣೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ತನ್ನಅಧಿಪತ್ಯವನ್ನು ಸ್ಥಾಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಭಾರತೀಯಜನತಾ ಪಾರ್ಟಿಯ ಹೈಕಮಾಂಡ್ ಇದೀಗ ತನ್ನಗಮನವನ್ನುಕರ್ನಾಟಕರಾಜ್ಯದಕಡೆಗೆ ಹರಿಸಿದೆ.ಬಿಜೆಪಿ ಪಾಲಿಗೆ ಕರ್ನಾಟಕರಾಜ್ಯದಕ್ಷಿಣ ಭಾರತದ ಹೆಬ್ಬಾಗಿಲುಎಂಬಂತಾಗಿದೆ. ಹೇಗಾದರೂ ಈ ಬಾರಿ ಹೆಚ್ಚಿನ ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ದಕ್ಷಿಣ ಭಾರತದಲ್ಲಿತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವ ಆಲೋಚನೆಯಲ್ಲಿತೊಡಗಿರುವ ಬಿಜೆಪಿ ಮುಖಂಡರುಗಳೂ ಆ ನಿಟ್ಟಿನಲ್ಲಿ ಸಾಧಕ-ಬಾಧಕಗಳ ಚರ್ಚೆಯಲ್ಲಿತೊಡಗಿದ್ದಾರೆ. ಹೀಗಾಗಿ ಬಿಜೆಪಿ ಮುಖಂಡರಿಗಾಗಲೀ, ಬಿಜೆಪಿ ಶಾಸಕರುಗಳಿಗಾಗಲೀ, ಹೈಕಮಾಂಡ್‌ಗಾಗಲೀ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಕುರಿತುಚಿಂತಿಸುವ ಪುರುಸೊತ್ತುಇಲ್ಲವಾಗಿದೆ.ಇತ್ತ ಬಿಬಿಎಂಪಿಯ ಭಾರತೀಯಜನತಾ ಪಾರ್ಟಿಯ ಮಾಜಿ ಮಹಾಪೌರರು, ಮಾಜಿ ಉಪ ಮಹಾಪೌರರು ಮತ್ತು ಸ್ಥಾಯಿ ಸಮಿತಿಗಳ ಮಾಜಿ ಅಧ್ಯಕ್ಷರುಗಳು ವೇದಿಕೆ ನಿರ್ಮಿಸಿಕೊಂಡು ಪಾಲಿಕೆಗೆ ಚುನಾವಣೆ ನಡೆಸುವಂತೆ ಪಕ್ಷದ ವರಿಷ್ಠರ ಮೇಲೆ ಒತ್ತಡತರುವ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಕ್ಕೆ ವರಿಷ್ಠರಾಗಲೀ, ಮುಖಂಡರಾಗಲೀಕವಡೆ ಕಾಸಿನ ಕಿಮ್ಮತ್ತು ನೀಡುವುದುಅನುಮಾನವಾಗಿದೆ.

ಇತ್ತಚುನಾವಣೆಯ ನಿರೀಕ್ಷೆಯಲ್ಲಿರುವ ಆಕಾಂಕ್ಷಿಗಳು ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿಖರ್ಚು ಮಾಡಿಕೊಂಡಿದ್ದಾರೆ. ಚುನಾವಣೆಗ್ಯಾರಂಟಿಎಂದಾದರೆ ಮತ್ತಷ್ಟು ಹಣವನ್ನುಖರ್ಚು ಮಾಡುವಉತ್ಸುಕತೆಯಲ್ಲಿದ್ದಾರೆ. ಆದರೆಚುನಾವಣೆ ನಡೆಯುವಯಾವುದೇ ಲಕ್ಷಣಗಳು ಗೋಚರಿಸದಕಾರಣ ಬಿಜೆಪಿ ಪಕ್ಷದ ಆಕಾಂಕ್ಷಿಗಳು ಮೆತ್ತಗಾಗಿದ್ದಾರೆ.ಕಾಂಗ್ರೆಸ್ ಪಕ್ಷವಾದರೂಚುನಾವಣೆ ನಡೆಸುವಂತೆಒತ್ತಡತರುವ ನಿರೀಕ್ಷೆಯಲ್ಲಿ ಬಿಜೆಪಿಯ ಆಕಾಂಕ್ಷಿಗಳಿಗೆ ಕಾಂಗ್ರೆಸ್ ಪಕ್ಷದ ನಡೆಅನುಮಾನ ಮೂಡಿಸಿದೆ.

ಎರಡು ತಿಂಗಳ ಹಿಂದಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಬಿಎಂಪಿ ಮಾಜಿ ಸದಸ್ಯರುಗಳು, ಬೆಂಗಳೂರು ನಗರದ ಮೂರು ವಲಯಗಳ ಮುಖಂಡರುಗಳೊಂದಿಗೆ ಸಮಾಲೋಚನೆ ನಡೆಸಿ ತಮ್ಮ ಮುಂದಿನ ಗುರಿ ಬಿಬಿಎಂಪಿಯಲ್ಲಿ ಆಡಳಿತ ಹಿಡಿಯುವುದುಎಂದು ಪ್ರತಿಜ್ಞೆತೊಟ್ಟಿದ್ದರು.ಈ ಹಿನ್ನೆಲೆಯಲ್ಲಿಇನ್ನೇನುಚುನಾವಣೆ ನಿಶ್ಚಿತ ಎಂದು ಭಾವಿಸಿದ್ದ ಬಿಜೆಪಿ ಆಕಾಂಕ್ಷಿಗಳು ತಮ್ಮತಮ್ಮ ವಾರ್ಡ್‌ಗಳಲ್ಲಿ ಚಟುವಟಿಕೆಗಳಿಗೆ ನಾಂದಿ ಹಾಡಿ ಮೊದಲ ಹೆಜ್ಜೆಯಾಗಿ 'ಮತದಾರರ ಪಟ್ಟಿ ಪರಿಷ್ಕರಣೆ' ಮಾಡಿಸುವುದರಲ್ಲಿ ಉತ್ಸುಕರಾಗಿದ್ದರು. ತಮ್ಮ ಮತ ಬ್ಯಾಂಕ್ ಚದುರದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಣೆಗಾಗಿ ತಮ್ಮ ತಮ್ಮ ಪಡೆಯನ್ನು ನಿಯೋಜಿಸಿದ್ದರು.ಆದರೆ ಈ ಉತ್ಸಾಹ ಕೆಲವೇ ದಿನಗಳಲ್ಲಿ ಮಂಕಾಯಿತು.ಪಕ್ಷದ ವರಿಷ್ಠರಿಂದಅದೇನುಆದೇಶ ಹೊರಬಂತೋ ಗೊತ್ತಿಲ್ಲ ಏಕಾಏಕಿ ಕೆಲಸಗಳೆಲ್ಲವೂ ಸ್ಥಗಿತಗೊಂಡವು, ಆಕಾಂಕ್ಷಿಗಳ ಮುಖದಲ್ಲಿನ ಭರವಸೆಯೂಕೂಡಾ ಮಂಕಾಯಿತು. ಕಾಂಗ್ರೆಸ್ ಪಕ್ಷದ ಪಾಳಯದಲ್ಲೂ ಇದೇ ವಾತಾವರಣ ಮುಂದುವರದಿದೆ.ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕರುಗಳಾದ ಎಂ.ಶಿವರಾಜು ಮತ್ತುಅಬ್ದುಲ್ ವಾಜಿದ್ ರವರುಗಳು ಸುಪ್ರೀಂಕೋರ್ಟ್ ಮುಂದೆ ಮಂಡಿಸಿರುವ ಚುನಾವಣಾತಕರಾರುಅರ್ಜಿ ವಿಚಾರದಲ್ಲಿ ಮುಂದುವರೆಯದಂತೆ ಲಕ್ಷ್ಮಣರೇಖೆ ಹಾಕಿ 'ಕೈ' ಮುದುಡಿ ಕುಳ್ಳಿರಿಸಿದ್ದಾರೆ.ಬೆಂಗಳೂರು ಮಹಾನಗರದಲ್ಲಿ ಈಗೇನು ಸಮಸ್ಯೆಗಳಿಲ್ಲ, ಇರುವ ಸಮಸ್ಯೆಗಳಿಗೆ ನಾವೇ ಪರಿಹಾರವನ್ನು ಹುಡುಕಿಕೊಳ್ಳುತ್ತಿದ್ದೇವೆ. ಸರ್ಕಾರಕೂಡಾ ವಿರೋಧ ಪಕ್ಷಗಳ ಶಾಸಕರುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಪ್ರಸ್ತಾವನೆ, ಯೋಜನೆ ಮತ್ತು ಕಾರ್ಯಕ್ರಮಗಳಿಗೆ ಉದಾರವಾಗಿಅನುದಾನ ನೀಡುತ್ತಿರುವಾಗ ಕಾರ್ಪೋರೇಟರ್‌ಗಳ ಅವಶ್ಯಕತೆಯಾದರೂಏಕೆ ?ಎಂಬ ತೀರ್ಮಾನಕ್ಕೆ ಕಾಂಗ್ರೆಸ್ಸಿಗರು ಬಂದಂತೆಕಾಣುತ್ತಿದೆ.ಈ ಬೆಳವಣಿಗೆ ಪ್ರಜಾಪ್ರಭುತ್ವ ವಿರೋಧಿಕ್ರಮವೇಆಗಿದ್ದರೂ ವಿರೋಧ ಪಕ್ಷದ ಮಾಜಿ ಕಾರ್ಪೋರೇಟರ್‌ಗಳು, ಆಕಾಂಕ್ಷಿಗಳು ಅಸಹಾಯಕರಾಗಿದ್ದಾರೆ.

ಬೆಂಗಳೂರು ಮಹಾನಗರದ ಶಾಸಕರುಗಳಿಗೆ ಬಿಬಿಎಂಪಿ ಚುನಾವಣೆಗಿಂತದೂರದಲ್ಲಿರುವ ವಿಧಾನಸಭಾಚುನಾವಣೆಕಡೆಗೇ ಹೆಚ್ಚಿನ ಕಾಳಜಿ ವ್ಯಕ್ತವಾಗುತ್ತಿದೆ. ಉಳಿದಿರುವ 12 ತಿಂಗಳಲ್ಲಿ ಸರ್ಕಾರದಿಂದ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಸಾಧ್ಯವೋ ಅಷ್ಟು ದೊಡ್ಡ ಪ್ರಮಾಣದ ಅನುದಾನ ಪಡೆಯುವ ಆತುರತೆಯಲ್ಲಿರುವುದರಿಂದ ಯಾವೊಬ್ಬ ಶಾಸಕನಿಗೂ ಬಿಬಿಎಂಪಿ ಚುನಾವಣೆಕಡೆಗೆ ಗಮನ ಹೋಗುತ್ತಿಲ್ಲ. ಮೇಲ್ಮನೆಯನ್ನುಚಿಂತಕರಚಾವಡಿಎನ್ನುತ್ತಾರೆ.ಈ ಮನೆಯನ್ನು ಪ್ರವೇಶಿಸುವವರಿಗೆ ನ್ಯಾಯ, ನೀತಿ, ಧರ್ಮಎಲ್ಲವೂಇರುತ್ತದೆಎಂದು ಭಾವಿಸಲಾಗಿದೆ. ಆದರೆ ವಿಧಾನ ಪರಿಷತ್‌ನಲ್ಲಿ ಸದಸ್ಯರುಗಳಾಗಿರುವ ಯಾರೊಬ್ಬರಿಗೂ ಬಿಬಿಎಂಪಿಗೆ ಚುನಾವಣೆ ನಡೆಸುವ ಆಸಕ್ತಿ ಇಲ್ಲವಾಗಿದೆ.ಸರ್ಕಾರದಿಂದತಮಗೆ ಬರಬೇಕಿರುವ ಅನುದಾನ ಸಿಕ್ಕರೆ ಸಾಕು ಬೇರೊಬ್ಬರ ಪ್ರಾತಿನಿಧ್ಯ ತಮಗೇಕೆ ಬೇಕು ಎಂದುಕೊಂಡಿರುವ ವ್ಯವಸ್ಥೆಯಲ್ಲಿ ಬಿಬಿಎಂಪಿ ಚುನಾವಣೆಇರಲಿ ಬೇರೆಯಾವುದೇ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸುವ ಬದ್ಧತೆ ಆಡಳಿತಾರೂಢ ಸರ್ಕಾರಗಳಿಗಾಗಲೀ, ವಿರೋಧ ಪಕ್ಷಗಳಿಗಾಗಲೀ ಇರಲು ಸಾಧ್ಯವೇಇಲ್ಲ.

# ಕೈ ಪಾಳೆಯಕ್ಕೆ ಬಿಸಿ ತುಪ್ಪವಾದ ಧಾರ್ಮಿಕ ವಿವಾದಗಳು ಮತ್ತು ಹೇಳಿಕೆಗಳು

●12ನೇ ಪುಟದಿಂದ...

ಇವೆಲ್ಲಕ್ಕಿಂತಲೂ ಇನ್ನೊಂದು ಇಂಟರೆಸ್ಟಿಂಗ ಸಂಗತಿ ಎಂದರೆ 1991 ರಲ್ಲಿ ಲೋಕಸಭಾ ಚುನಾವಣೆ ನಡೆದ ಸಂದರ್ಭದಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ರಾಮಕೃಷ್ಣ ಹೆಗಡೆ ಕಣಕ್ಕಿಳಿದಿದ್ದರು, ಪ್ರಭಾವಿ ನಾಯಕರಾದ ಅದರಲ್ಲೂ ಲಿಂಗಾಯಿತ ನಾಯಕರ ದೊರೆಯಂತಿದ್ದ ಹೆಗಡೆ ಅವರ ಪ್ರಭಾವ ಹೆಚ್ಚಾಗಿತ್ತು ಹೆಗಡೆ ಗೆಲ್ಲುವುದು ನಿಶ್ಚಿತವೂ ಆಗಿತ್ತು ಅದರೆ 1983ರಲ್ಲಿ ತಾವು ಸಿಎಂ ಆಗುವುದನ್ನು ತಪ್ಪಿಸಿದ್ದರು ಎನ್ನುವ ಕಾರಣಕ್ಕೆ ಎಸ್ ಬಂಗಾರಪ್ಪ ಹೆಗಡೆ ಅವರನ್ನು ಸೋಲಿಸಬೇಕು ಎನ್ನುವ ಛಲ ಇತ್ತು ಈ ಕಾರಣಕ್ಕೆ ಆ ಭಾಗದ ಸಿದ್ದು ನ್ಯಾಮೇಗೌಡ ಅವರನ್ನು ನಿಲ್ಲಿಸಲು ನಿಶ್ಚಿಯಿಸಿದ್ದರು ಕಾರಣ ಬ್ಯಾರೇಜ್ ನಿರ್ಮಾಣಗಳ ಮೂಲಕ ಯುವಕರ ಮನಸ್ಸಿನಲ್ಲಿ ಅವರು ಹೆಚ್ಚು ಪ್ರಭಾವ ಬೀರಿದ್ದರು. ರಾಮಕೃಷ್ಣ ಹೆಗಡೆ ಅವರ ಎದುರು ಕಾಂಗ್ರೆಸ್ ಅಭ್ಯರ್ಥಿಯಾಗಿ ನೀವು ಕಣಕ್ಕಿಳಿಯಬೇಕು ಎಂದಾಗ ಸಿದ್ಧು ನ್ಯಾಮಗೌಡ ಒಪ್ಪಲಿಲ್ಲ. ಹೆಗಡೆ ಅವರಂತಹ ದೊಡ್ಡ ನಾಯಕರ ವಿರುದ್ಧ ನಾನು ಸ್ಪರ್ಧಿಸುವುದೇ? ಇಲ್ಲ, ಸಾಧ್ಯವಿಲ್ಲ ಎಂದು ನ್ಯಾಮ ಗೌಡರು ಹೇಳಿದ್ದರು. ಆದರೆ ಬಂಗಾರಪ್ಪ ಪಟ್ಟು ಬಿಡದೆ ನೀವು ನಾಮಪತ್ರ ಸಲ್ಲಿಸಿ ಸಾಕು, ಉಳಿದಂತೆ ನಾವು ನಿಮ್ಮ ಬೆನ್ನಿಗಿದ್ದೇವೆ ಎಂದರು. ಸರಿ, ಹೆಗಡೆ ಮತ್ತು ಸಿದ್ಧು ನ್ಯಾಮಗೌಡರ ಮಧ್ಯೆ ತುರುಸಿನ ಪೈಪೋಟಿ ಶುರುವಾಯಿತು. ಇಂತಹ ಕಾಲದಲ್ಲೇ ಬಾಗಲಕೋಟೆಯಲ್ಲಿ ರಾಮಕೃಷ್ಣ ಹೆಗಡೆ ಅವರ ಪ್ರಚಾರ ಸಭೆ ಏರ್ಪಾಟಾಯಿತು. ಸಭೆಗೆ ಆಗಮಿಸಿದ್ದ ಜನಸ್ತೋಮ ಹೇಗಿತ್ತೆಂದರೆ ಹೆಗಡೆ ವಿರುದ್ಧ ಸಿದ್ದು ನ್ಯಾಮಗೌಡ ಸೋಲುವುದು ನಿಶ್ಚಿತ ಎಂಬ ಮಾತು ಕೇಳಿ ಬಂತು. ಇದರ ಮಧ್ಯ ವೇದಿಕೆಯಲ್ಲಿದ್ದ ಹೆಗಡೆ ಅವರಿಗೆ ಬಾಯಾರಿಕೆಯಾಯಿತು. ಹೀಗಾಗಿ ಕುಡಿಯಲು ನೀರು ಕೊಡಿ ಎಂದು ಪಕ್ಕದಲ್ಲಿದ್ದವರಿಗೆ ಕೇಳಿದರು. ಆಗ ಕಾರ್ಯಕರ್ತ ರೊಬ್ಬರು ನೀರು ಕೊಟ್ಟರು, ಆದರೆ, ಅದನ್ನು ಹೆಗಡೆ ಮುಟ್ಟಲಿಲ್ಲ. ಕಾರಣ ತೀವ್ರ ಗಂಟಲು ಬೇನೆಯಿಂದ ಬಳಲುತ್ತಿದ್ದ ಅವರಿಗೆ ಬಿಸಿ ನೀರು ಬೇಕಾಗಿತ್ತು. ಆದ್ದರಿಂದ ಸಹಾಯಕನ ಕಡೆ ನೋಡಿದರು. ಆ ಸಹಾಯಕ ತನ್ನ ಬಳಿಯಿದ್ದ ಬ್ಯಾಗಿನಿಂದ ಬಿಸಿ ನೀರಿನ ಪ್ಲಾಸ್ಕ್ ಕೊಟ್ಟಾಗ ಹೆಗಡೆಯವರು ನೀರು ಕುಡಿದರು.

ಆದರೆ ಅಲ್ಲೇ ಸಭೆಯಲ್ಲಿದ್ದವರೊಬ್ಬರು ಯೇ, ಅವರಿಗೆ ನಮ್ಮೂರಿನ ನೀರು ಬೇಡ, ವೋಟು ಯಾಕೆ ಬೇಕು? ಎಂದು ಕೂಗಿದರು. ಈ ಮಾತು ಹೇಗಿತ್ತೆಂದರೆ ಇಡೀ ಸಭೆಯಲ್ಲಿ ಹೆಗಡೆ ಅವರ ನಡುವಳಿಕೆಯ ಬಗ್ಗೆ ಅಪಸ್ವರ ಶುರುವಾಗಿ, ಎಷ್ಟೇ ಆದರೂ ಹೆಗಡೆ ನಮ್ಮವರಲ್ಲ, ಆದರೆ ಸಿದ್ಧು ನ್ಯಾಮಗೌಡ ನಮ್ಮವರು ಎಂಬ ಮಾತು ಕ್ಷೇತ್ರದಾದ್ಯಂತ ಹರಡಿಕೊಂಡಿತು. ಪರಿಣಾಮ ಹೆಗಡೆ ಅವರ ವಿರುದ್ಧ ಸಿದ್ದು ನ್ಯಾಮಗೌಡರು ಗೆಲುವು ಸಾಧಿಸಲು ಅದು ನೆರವಾಯಿತು. ಅಂದ ಹಾಗೆ ಇದನ್ನೆಲ್ಲ ಏಕೆ ನೋಡಬೇಕೆಂದರೆ ರಾಜಕೀಯದಲ್ಲಿ ಬಾಯಿ ತಪ್ಪಿ ಆಡುವ ಒಂದು ಮಾತು, ಎಚ್ಚರ ತಪ್ಪಿ ಇಡುವ ನಡೆ ವಿನಾಶಕಾರಿ ಅಸ್ತ್ರಗಳಂತಾಗಿ ಬಿಡುತ್ತವೆ. ಹೀಗಾಗಿ ರಾಜಕಾರಣದಲ್ಲಿ ರುವವರು ಯಾವ ಕ್ಷಣದಲ್ಲೂ ಮೈ ಮರೆಯುವ ಹಾಗೆಯೇ ಇಲ್ಲ. ಪರಿಸ್ಥಿತಿ ಹೀಗಿರುವಾಗಲೇ ರಾಜ್ಯ ಕಾಂಗ್ರೆಸ್ ಪಕ್ಷದ ಮುಂದೆ ಆಡಳಿತಾರೂಢ ಬಿಜೆಪಿ ಡಜನ್ನುಗಟ್ಟಲೆ ಸಮ್ಮೋಹನಾಸ್ತ್ರಗಳನ್ನು ಬಳಸಿ ಕುಳಿತಿದೆ ಅದು ಪ್ರಯೋಗಿಸಿರುವ ಹಿಜಬ್ ಅಸ್ತ್ರವೇ ಇರಬಹುದು, ಮತಾಂತರ ನಿಷೇಧ ಕಾಯ್ದೆ ಇರಬಹುದು, ಲವ್ ಜೆಹಾದ್ ವಿಷಯವೇ ಇರಬಹುದು, ಕೇಸರಿ ಧ್ವಜವೇ ಇರಬಹುದು. ಇಂತ ವಿವಾದಗಳ ಕುರಿತು ನೀಡುವ ಹೇಳಿಕೆಗಳು ಈಗ ಕಾಂಗ್ರೆಸ್‌ಗೆ ಒಂದು ರೀತಿ ನಡುಕ ಉಂಟಾಗಿದೆ ಈ ವಿವಾದಗಳ ಕುರಿತು ನೀಡುವ ಹೇಳಿಕೆಗಳು ಕೈಗೆ ವಿರುದ್ಧವಾಗಲಿವೆ ಎನ್ನುವುದು ಈಗ ಆತಂಕಕ್ಕೆ ಕಾರಣವಗಿದೆ.

# ಕ್ರಿಪ್ಟೋ ಕರೆನ್ಸಿ ಎನ್ನುವ ಆನ್‌ಲೈನ್ ಡಿಜಿಟಲ್ ಮಾಯಾವಿ ಮನಿ ಮಾಫಿಯಾ

●9ನೇ ಪುಟದಿಂದ...


165 ಕೋಟಿ ಮೊತ್ತದ ಕ್ರಿಪ್ಟೋ ಕರೆನ್ಸಿ ವಶಕ್ಕೆ ಪಡೆದಿರುವ ಬ್ರಿಟನ್ ಪೊಲೀಸರು ಬಿಟ್ ಕಾಯಿನ್ ನಂತರದ ಅತಿ ದೊಡ್ಡ ಕ್ರಿಪ್ಟೋ ಕರೆನ್ಸಿ ಇಥೇರಿಯಂ ಹೆಸರಿನಲ್ಲಿ ಅಮೆರಿಕ,ಚೀನಾ, ಹಾಂಕಾಂಗ್, ಬ್ರಿಟನ್, ಆಸ್ಟ್ರೇಲಿಯಾ ದೇಶಗಳ ಗ್ರಾಹಕರಿಗೆ ಮೋಸ ಮಾಡಿದ್ದ ವಂಚಕರನ್ನು ಬ್ರಿಟನ್ ಪೊಲೀಸರು ಇನ್ನೂ ಹುಡುಕುತ್ತಲೇ ಇದ್ದಾರೆ! ಇಷ್ಟೆಲ್ಲಾ ರಾದ್ಧಾಂತಗಳಿದ್ದರೂ ಕೇವಲ ಲಾಭಗಳಿಕೆಯ ಉದ್ದೇಶದಿಂದಲೇ ಈಗ ಎಲ್ಲರೂ ಕ್ರಿಪ್ಟೋ ಕರೆನ್ಸಿ ಗಳ ಕಡೆ ಮುಖಮಾಡಿದ್ದಾರೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ ಕೂಡ ಇದೀಗ ಕ್ರಿಪ್ಟೋ ಕರೆನ್ಸಿ ಹೂಡಿಕೆ ವಲಯ, ಎಕ್ಸ್ ಚೇಂಜ್ ಪ್ಲಾಟ್ ಪ್ರವೇಶಿಸಲು ಮುಂದಾಗಿವೆ. ದೇಹದಲ್ಲಿ ಅತಿ ಹೆಚ್ಚು ಬಿಟ್ ಕಾಯಿನ್ ಬಳಕೆದಾರರನ್ನು ಹೊಂದಿರುವ ಕಾಯಿನ್ ಸ್ವಿಚ್ ಕುಭೇರ್ ಇವರಿಗೆಲ್ಲಾ ಮಾದರಿಯಾಗಿ ಮಾರುಕಟ್ಟೆಗೆ ಸೆಳೆಯುತ್ತಿದೆ. ಮತ್ತೊಂದು ಇತ್ತೀಚೆಗಿನ ಬೆಳವಣಿಗೆಯಲ್ಲಿ ಭಾರತೀಯ ಕ್ರಿಪ್ಟೋ ಎಕ್ಸ್ ಚೇಂಜ್ ಕಾಯಿನ್ ಡಿಸಿ ಎಕ್ಸ್ ಬ್ರಾಂಡ್ ಅಂಬಾಸಿಡರ್ ಆಗಿ ಬಾಲಿವುಡ್ ಬಿಗ್ ಬಿ ಅಮಿತಾಬ್ ಬಚ್ಚನ್ ಎಂಟ್ರಿ ಕೊಟ್ಟಿದ್ದಾರೆ! ನಟಿ ಸನ್ನಿಲಿಯೋನ್ ಕ್ರಿಪ್ಟೋ ಕರೆನ್ಸಿ ಗಳಲ್ಲಿ ಹಣ ಹೂಡಿಕೆ ಮಾಡಿದ ಬಾಲಿವುಡ್ ನ ಮೊದಲ ನಟಿ ಎನಿಸಿಕೊಂಡಿದ್ದಾರೆ. ಭಾರತೀಯ ವ್ಯಾಪಾರ ಸಂಸ್ಥೆ ನಾಸ್ಕಾಂನ ಇತ್ತೀಚಿನ ವರದಿ ಪ್ರಕಾರ ಜಾಗತಿಕ ಕ್ರಿಪ್ಟೋ ಕರೆನ್ಸಿ ಮಾರುಕಟ್ಟೆಯು 2026 ರ ವೇಳೆಗೆ 2.3 ಬಿಲಿಯನ್ ಮೌಲ್ಯ ತಲುಪಲಿದೆಯಂತೆ. ಭಾರತದಲ್ಲಿ 2030 ರ ವೇಳೆಗೆ 241ಮಿಲಿಯನ್ ದಾಟಲಿದೆಯಂತೆ! ಭಾರತದ ಜನಪ್ರಿಯ ಕ್ರಿಪ್ಟೋ ಎಕ್ಸ್ ಚೇಂಜ್ ಯುನೋ ಕಾಯಿನ್ ತನ್ನ ಬಳಕೆದಾರರಿಗೆ ಅನುಕೂಲ ವಾಗಲೆಂದು ಪಾಸ್ಟ್ ಟ್ಯಾಗ್ ರೀಚಾರ್ಜ್ ನಂತಹ ಸೇವೆಗಳಿಗೂ ಬಿಟ್ ಕಾಯಿನ್ ಬಳಸುವಂತೆ ಆಫ್ ವ್ಯವಸ್ಥೆ ಮಾಡಿಕೊಟ್ಟಿದೆ. ಇತ್ತೀಚೆಗೆ ಭಾರತದಲ್ಲಿಯೂ ನಿಧಾನವಾಗಿ ಕ್ರಿಪ್ಟೋ ಪೇಮೆಂಟ್ ವ್ಯವಸ್ಥೆ ಬೆಳೆಯುತ್ತಿದೆ. ಕೆಲವು ಉದ್ದಿಮೆ ದಾರರು ತಮ್ಮ ಸರಕು ಸೇವೆಗಳಿಗೆ ಬಿಟ್ ಕಾಯಿನ್, ಇಥೆರಿಯಂ ಸೊಲಾನಾ ಮತ್ತಿತರ ಡಿಜಿಟಲ್ ಕರೆನ್ಸಿ ಟೋಕನ್ ಗಳನ್ನು ಪಾವತಿ ರೂಪದಲ್ಲಿ ಸ್ವಿಕರಿಸುತ್ತಿವೆ! ವರದಿಗಳ ಪ್ರಕಾರ ಭಾರತದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲೂ 1.5 ಕೋಟಿಗಿಂತಲೂ ಅಧಿಕ ಭಾರತೀಯರು ಅದರಲ್ಲೂ ಯುವಕರು ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆ ಮಾಡಿದ್ದಾರಂತೇ! ಕ್ರಿಪ್ಟೋ ಅಕಾಡೆಮಿ! ಕ್ರಿಪ್ಟೋ ಟೆಕ್ನಾಲಜಿ! ಎಂಬ ಹೊಸ ವ್ಯಾಖ್ಯಾನ ದೊಂದಿಗೆ 'ಐ ಫೋನ್ ಫಾರ್ ಫಸ್ಟ್ ಬಿಟ್ ಕಾಯಿನ್' ಆಫರ್ ನೊಂದಿಗೆ ಈ ಡಿಜಿಟಲ್ ಹವಾಲಾ ನಾನೇ ನೆಕ್ಸ್ಟ್ ಗೂಗಲ್ ರಿಸರ್ವ್ ಕರೆನ್ಸಿ ಎಂದು ಬೀಗುತ್ತಾ ಎಕಾನಾಮಿಕ್ ಟೆರರಿಸಂ ಬೆಳೆಗೆ ಭಾರತವನ್ನು ಕೆಡವಲು ಈ ಡಿಜಿಟಲ್ ಮನೀ ಮಾಫಿಯಾ ಸಜ್ಜಾಗಿದೆ.

# ಮಲ್ಲ ಮಣಿಕರನ್ನು ಶಿವ ಸಂಹರಿಸಿದ ಕಥೆಯ 'ಮೈಲಾರ ಲಿಂಗ'

ತೆರೆಮರೆ

**ಕನ್ನಡ ಚಿತ್ರ ಇತಿಹಾಸ**

ಭಾಗ–71



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಭಾರತದ ಅನೇಕು ಪುಣ್ಯಕ್ಷೇತ್ರಗಳಲ್ಲಿ ಶ್ರೀ ಮೈಲಾರಲಿಂಗಕ್ಷೇತ್ರವೂಒಂದು. ಉತ್ತರಕರ್ನಾಟಕದ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿ ಪವಿತ್ರವಾದತುಂಗಭದ್ರಾ ನದಿಯತಟದಲ್ಲಿದೆ. ತ್ರೇತಾಯುಗದ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಿಂದ ವಿಚಿತ್ರ ವರಗಳನ್ನು ಪಡೆದು, ಮದೋನ್ಮತ್ತರಾಗಿ ಋಷಿಮುನಿಗಳ ಚಿಂತೆಗೆಕಾರಣರಾಗಿದ್ದ ಮಲ್ಲ–ಮಣಿಕರೆಂಬ ಮಹಾ ರಾಕ್ಷಸರನ್ನು ಸಂಹರಿಸಲು ಪರಮೇಶ್ವರನೇ ಪಾರ್ವತಿ, ಗಂಗೆ ಹಾಗೂ ಏಳು ಕೋಟಿ ದೇವತೆಗಳೊಂದಿಗೆ ಧರೆಗಿಳಿದು ಮಲ್ಲ–ಮಣಿಕರನ್ನು ಸಂಹರಿಸಿದನು. ಈ ಮೂಲಕ ಮೈಲಾರ ಲಿಂಗ ಸ್ವಾಮಿಯುಜನಾಂಗದವರನ್ನುರಕ್ಷಿಸಲು, ಅವರನ್ನುಕಾಡುತ್ತಿದ್ದಕಾಡುಜನರಿಂದ ಪಾರು ಮಾಡಲುಜನ್ಮ ತಾಳಿ ಬಂದು ಪವಾಡ ಮಾಡಿದಕಥೆಯನ್ನು ಈ ಚಿತ್ರ ಹೊಂದಿದೆ. ತನ್ನ ಭಕ್ತರರಕ್ಷಣೆಗಾಗಿ ಮೈಲಾರದಲ್ಲಿ ಮಾರ್ತಾಂಡ ಭೈರವ, ಮೈಲಾರಲಿಂಗ, ಭಂಡಾರದಯ ಎಂಬ ಹೆಸರಿನಿಂದಲೂ; ದೇವರಗುಡ್ಡದಲ್ಲಿ ಮಾಲತೇಶ, ಮಲ್ಹಾರಿ, ಗುಡದಯ್ಯನೆಂಬ ಹೆಸರಿನಿಂದ ನೆಲೆಸಿದನು. ಏಳು ಕೋಟಿ ದೇವತೆಗಳೊಂದಿಗೆ ಬಂದ ಪರಮೇಶ್ವರನು ಏಳುಕೋಟಿಗನೆಂಬ ನಾಮವನ್ನು ಪಡೆದನು.ಅಂದಿನ ಮಣಿಪುರ ಪರ್ವತವೇ ಇಂದಿನ ಶ್ರೀ ಕ್ಷೇತ್ರ ಮೈಲಾರ.ಪ್ರತಿ ವರ್ಷ ಭಾರತ ಹುಣ್ಣಿಮೆಯ ದಿನ ಲಕ್ಷಾಂತರ ಭಕ್ತರು ಅವನ ಸನ್ನಿಧಿಗೆ ಬಂದು, ಸ್ವಾಮಿಯ ಸನ್ನಿಧಿಯಲ್ಲಿಜಾತಿ, ಭೇದ, ವರ್ಣ ಭೇದವಿಲ್ಲದೆಎಲ್ಲ ಮತದವರೂಒಂದಾಗಿ ಸ್ವಾಮಿಯ ಸೇವೆ ಮಾಡಿಕೃತಾರ್ಥರಾಗುತ್ತಾರೆ.


ಗ್ರಾಮಗಳಿಂದ ಭಕ್ತರು ಚಕ್ಕಡಿಗಳಲ್ಲಿ ಬಂದು, ತುಂಗಭದ್ರಾ ನದಿಯತಟದಲ್ಲಿ ಬೀಡಾರ ಹೂಡುತ್ತಾರೆ.ಸಾಲು ಸಾಲಾಗಿ ನಿಂತ ಚಕ್ಕಡಿಗಳನ್ನು ನೋಡುವುದೇಕಣ್ಣಿಗೊಂದು ಹಬ್ಬ. ಕೆಲವು ಭಕ್ತರುತಾವುತಂದ ಮೀಸಲು ಬುತ್ತಿಗಳನ್ನು ಮೊದಲು ದೋಣಿಗಳಿಗೆ ತುಂಬಿಸುವರು.ಮಲ್ಲ–ಮಣಿಕರನ್ನು ಸಂಹರಿಸಲು ಬಂದ ಸೈನಿಕರಿಗೆಊಟಕ್ಕಾಗಿ ಮಾಡಿದ ದೋಣಿಗಳು ವು.ಶ್ರೀ ಮೈಲಾರಲಿಂಗನಎದುರಿಗಿರುವ ಲಿಂಗವು ಭಕ್ತರನ್ನುಆಕರ್ಷಿಸುವುದು. ಸಾವಿರಾರುಕೊಡ ನೀರನ್ನು ಈ ಲಿಂಗದಲ್ಲಿತುಂಬಿದರೂ, ಅದುಕ್ಷಣಾರ್ಧದಲ್ಲಿಇಂಗಿಹೋಗುವದು. ಇದೆಲ್ಲತಂದೆ ಮೈಲಾರಲಿಂಗನ ಮಹಿಮೆ. ಹೊಸದಾಗಿ ಮದುವೆಯಾದ ವಧು–ವರರು ಸಂತತಿಯ ಭಾಗ್ಯ ಪಡೆಯಲು ಗಂಗಮಾಳವ್ವನ ಸನ್ನಿಧಿಯಲ್ಲಿ ಅರಿಶಿನ ಅರಿವಿಯನ್ನು ಬಿಟ್ಟುತಾಯಿ ಕೃಪೆಗೆ ಪಾತ್ರರಾಗುತ್ತಾರೆ. ದೇವಸ್ಥಾನದಆವರಣದಲ್ಲಿ ಶ್ರೀ ಮೈಲಾರ ಲಿಂಗನ ಬೃಹದಾಕಾರದ ಪಾದರಕ್ಷೆಗಳನ್ನು ನಾವು ಕಾಣುವೆವು.

ಸ್ವಾಮಿ ಮೈಲಾರಲಿಂಗ–ಮಾಲತೇಶನ ಭಕ್ತರುತಾವು ಹೊತ್ತ ಹರಕೆಯನ್ನುಕೈಪವಾಡ, ಕಾಲು ಪವಾಡ, ಸರಪಳಿ ಪವಾಡ, ಕುದುರೆಚಾಕರಿ ಮುಂತಾದರೀತಿಯಲ್ಲಿ ಇರಿಸಿ



ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ. ಪರಮೇಶ್ವರನು ಶುಕ್ಲಪಕ್ಷಷಷ್ಠಿ ರವಿವಾರ ಸೂರ್ಯೋದಯಕ್ಕೆ ಮಲ್ಲ–ಮಣಿಕರನ್ನು ಸಂಹರಿಸಿದರು.ಸಾಂಕೇತಿಕವಾಗಿ ಭಾರತ ಹುಣ್ಣಿಮೆಯ ದಿನ ಬೆಳಗು ಮುಂಜಾನೆ ನಾಲ್ಕು ಗಂಟೆಗೆ ಸಾವಿರಾರು ಭಕ್ತರು ಪಂಜಿನ ದೀವಟಿಗೆಗಳನ್ನು ಹಿಡಿದುಕೊಂಡು ಮೌನವಾಗಿಊರಗಡಿದಾಟಿಒಂದೆಡೆ ಸೇರುವರು.ನಂತರಒಮ್ಮೆಲೆ ಮುಗಿಲು ಗಡಚಿಕ್ಕುವಂತೆ ಕೇಕೆ ಹಾಕುತ್ತ ಮದ್ದುಗಳನ್ನು ಹಾರಿಸುವರು.ನಂತರ ಸಂಜೆಕಾರಣಿಕೆ.ಲಕ್ಷಾಂತರ ಭಕ್ತರು ಆ ವರ್ಷದಭವಿಷ್ಯವನ್ನು ತಿಳಿದುಕೊಳ್ಳಲು 3–4ತಾಸು ಮುಂಚಿತವಾಗಿಯೇ ಸೇರುವರು.ಮುಖ್ಯ ಪೂಜಾರಿ ಹಾಗೂ ಸಾವಿರಾರು ಭಕ್ತರುಕರಿಆಲದ ಮರದಡಿ ಬಂದು, ವಿಧಿವತ್ತಾಗಿ ಪೂಜೆ ಸಲ್ಲಿಸಿ ನಂತರ ನಿರ್ದಿಷ್ಟಪಡಿಸಿದ ಸ್ಥಳದತ್ತ ತೆರಳುವರು.ಸುಮಾರು ಮೂವತ್ತು ಅಡಿ ಎತ್ತರದಎಣ್ಣೆ ಸವರಿದಕಬ್ಬಿಣದ ಬಿಲ್ಲನ್ನುಗೊರವಯ್ಯನವರುಎತ್ತಿ ನಿಲ್ಲಿಸಲು, ಪೂಜಾರಿ ಸರಸರನೆ ಬಿಲ್ಲಿನತುದಿಗೇರಿಒಂದೇ ವಾಕ್ಯದಲ್ಲಿ ಭವಿಷ್ಯ ನುಡಿದು, ಮೇಲಿನಿಂದಕೈಬಿಟ್ಟು ಕೆಳಗೆ





ಬೀಳಲು ಸುತ್ತಲೂ ನೆರೆದ ಭಕ್ತರು ಪೂಜಾರಿಗೆಕಿಂಚಿತ್ತೂ ಲೋಪವಾಗದಂತೆ ಹಿಡಿದುಕೊಳ್ಳುವರು.ಭಕ್ತರು ಪುನೀತರಾದೆವೆಂದು ಸಂತಸದಿಂದ ಮರಳುವರು.ಇದು ಶ್ರೀ ಮೈಲಾರಲಿಂಗಜಾತ್ರೆಯಕೊನೆಯ ದಿನ ಜರುಗುವ ಪವಾಡ.ಈ ಕತೆಯನ್ನೇ ಆಧಾರವಾಗಿಟ್ಟುಕೊಂಡು ಶ್ರೀ ಮೈಲಾರಲಿಂಗನ ಪ್ರೇರಣೆಯಿಂದ ನಿರ್ಮಿಸಿದ ಚಿತ್ರಇದಾಗಿದೆ. ಏಳುಕೋಟಿ ಫಿಲಂಕಾರ್ಪೊರೇಷನ್ ಸಂಸ್ಥೆ ತಯಾರಿಸಿದ 'ಮೈಲಾರ ಲಿಂಗ' ವರ್ಣಚಿತ್ರ 1989ರಲ್ಲಿ ತೆರೆಗೆ ಬಂದಿತು.ಎಫ್.ಡಿ.ಸಾಲಿ ನಿರ್ಮಾಣ ಮಾಡಿದ ಚಿತ್ರವನ್ನುಗುರುರಾಜಕಾಟೆ ನಿರ್ದೇಶಿಸಿದರು.ಮೋಹನ್ ನರಗುಂದ ಸಹಾಯಕ ನಿರ್ದೇಶಕರಾಗಿದ್ದರು.ಮಾನು, ಸದಾಶಿವ ಬ್ರಹ್ಮಾವರ್, ವಸಂತ ನಾಕೋಡು,



ಪುಂಡಲೀಕ ಶೇಟ್, ಶ್ರೀಲಲಿತ, ವಿಜಯರಂಜನಿ, ತೆರೇಸಮ್ಮ ಅಭಿನಯಿಸಿದರು.ಗುರುರಾಜಕಾಟೆಚಿತ್ರಕ್ಕಾಗಿಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದರು. ಗುಣಸಿಂಗ್ ಸಂಗೀತ ನೀಡಿದಚಿತ್ರದಲ್ಲಿ ಅಳವಡಿಸಲಾಗಿದ್ದ 3 ಹಾಡುಗಳನ್ನು ಸುಂದರ್ ಮತ್ತು ಬಿ.ಆರ್. ಛಾಯಾ ಹಾಡಿದರು. ಸ್ವಾಮಿ ಮತ್ತುಚಂದ್ರಕಾಂತ್ ಪೋತೇದಾರ್ ಸಂಕಲನ, ಎನ್.ಜಿ.ರಾವ್ ಛಾಯಾಗ್ರಹಣ.ಬಿ.ನಾಗರಾಜರಾವ್ ಕಲೆ, ಸಿ.ಸುಬ್ರಹ್ಮಣ್ಯ ನೃತ್ಯ, ಕೆ.ಜಿ.ನಿಂಬರಗಿ ವಸ್ತ್ರಾಲಂಕಾರ ಮತ್ತು ಶ್ಯಾಮ ಸುಂದರ್ ಪ್ರಸಾಧನಇದ್ದಚಿತ್ರಕಂಠೀರವ ಹಾಗೂ ಚಾಮುಂಡೇಶ್ವರಿ ಸ್ಟುಡಿಯೊಗಳಲ್ಲಿ ಸ್ಟುಡಿಯೊಗಳಲ್ಲಿ ಚಿತ್ರೀಕರಣಗೊಂಡಿತು.

## ನಿಮ್ಮ ಮಾತು

### ಪತ್ರಿಕೆ ಚೆಂದವಾಗಿದೆ

ಕೆಂಧೂಳಿ ಈ ಬಾರಿಯ ಮುಖಪುಟ ಅತ್ಯಂತ ಆಕರ್ಷಕವಾಗಿದೆ ಅಷ್ಟೆ ಚನ್ನಾಗಿ ಲೇಖನವೂ ಚನ್ನಾಗಿದೆ 'ಸೋನಿಯಾಗೆ ಧೃತರಾಷ್ಟ್ರ ಪ್ರೇಮದ ಕುರುಡು' ಎನ್ನುವ ಮುಖಪುಟ ರಾಜಕೀಯ ವಿಮರ್ಶೆ ಬರೆದಿರುವ ಭಾಸ್ಕರ್ ಹೆಗಡೆ ನಿಜಕ್ಕೂ ಧನ್ಯವಾದಗಳು ಕಾಂಗ್ರೆಸ್‌ನ ಇಂದಿನ ಸ್ಥಿತಿಗೆ ಕಾರಣ ಮತ್ತು ಸೋನಿಯಾ ಮಗನಮೇಲಿನ ಪ್ರೀತಿಗೆ ಕಾಂಗ್ರೆಸ್ ಹಳ್ಳಹಿಡಿಯುತ್ತಿದೆ ಎನ್ನುವ ಅರ್ಥದಲ್ಲಿ ತುಂಬಾ ಚನ್ನಾಗಿ ಬರೆದಿದ್ದಾರೆ, ಹಾಗೆಯೇ ಕಳೆದ ಮೂರು ವಾರಗಳಿಂದ ಡಾ.ಶಿವಕುಮಾರ್ ಕಂಪ್ಲಿ ಅವರು ತೆಲುಗು ಕಾದಂಬರಿಯಾದ 'ವಿವಾಹ ವೇದ' ಕನ್ನಡಕ್ಕೆ ಭಾಷಾಂತರ ಮಾಡುತ್ತಿದ್ದಾರೆ ಕಾದಂಬರಿ ಬಹಳಷ್ಟು ಚನ್ನಾಗಿದೆ ಅದ್ಭುತವಾಗಿ ಮೂಡಿ ಬರುತ್ತಿದೆ. ಹಾಗೆಯೇ ದೆಹಲಿ ದೃಷ್ಟಿಯ ಅಂಕಣದಲ್ಲಿ ಡಿ.ಉಮಾಪತಿ ಅವರ ಲೇಖನ ಕೂಡ ಚನ್ನಾಗಿದೆ ಒಟ್ಟಾರೆಯಾಗಿ ಪತ್ರಿಕೆ ಒಂದು ಚೆಂದವಾಗಿ ಬರುತ್ತಿದೆ ಧನ್ಯವಾದಗಳು.

● ಶಿವಕುಮಾರ್.ಎಚ್.ಟಿ
ಬೆಳಗಾವಿ.




### ಪತ್ರಿಕೆ ಉತ್ತಮವಾಗಿದೆ

ನಿಮ್ಮ ಪತ್ರಿಕೆ ಗುಣಮಟ್ಟವಾಗಿಮೂಡಿ ಬರುತ್ತಿದೆ. ಪ್ರತಿವಾರವೂ ಒನ್ನೊಂದು ವಿಷಯ ಕುರಿತು ವಿವರವಾಗಿ ಬರೆಯುತ್ತಿರುವ ಲೇಖನಗಳು ತುಂಬಾ ಚನ್ನಾಗಿವೆ. ಈ ವಾರದ ಕಾಂಗ್ರೆಸ್ ಪಕ್ಷದ ಅವಸ್ಥೆ ಕುರಿತು ಭಾಸ್ಕರ್ ರಾವ್ ಅವರು ಮುಖಪುಟ ಲೇಖನ 'ಸೋನಿಯಾಗೆ ಧೃತರಾಷ್ಟ್ರ ಪ್ರೇಮದ ಕರುಡು' ಕಾಂಗ್ರೆಸ್‌ಪಕ್ಷ ಅರಿತುಕೊಳ್ಳಬೇಕಿದೆ ಇಲ್ಲದಿದ್ದರೆ ಮುಂದೆ ಆಗುವ ಆನಾಹುತಳಿಗೆ ಗಾಂಧಿ ಕುಟುಂಬವೇ ಕಾರಣವಾಗಬಹುದು. ಹಾಗೆಯೇ ' ಭಾರತೀಯರ ಪ್ರಾಣ ಹಿಂಡುತ್ತಿರುವ ಲೈಂಗಿಕಸುಲಿಗೆ ಎಂಬ ಬ್ಯಾಕ್‌ಮೇಲ್ ಬಿಸಿನೆಸ್' ಲೇಖನ ಅತ್ಯುದ್ಭುತವಾಗಿದೆ ಇಂದಿನ ಮೊಬೈಲ್‌ಗಳಲ್ಲಿ ಆಗುತ್ತಿರುವ ಅನಾಹುತದ ಹಿಂಚಿ ಹಿಂಚು ತಗೆದಿಟ್ಟಿರುವ ಪರಶಿವ ಧನಗೂರು ಅವರಿಗೆ ಧನ್ಯವಾದಗಳು. ಪತ್ರಿಕೆ ಒಟ್ಟಾರೆಯಾಗಿ ಉತ್ತಮವಾಗಿದೆ, ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳನ್ನು ನೋಡುವ ದೃಷ್ಟಿಯೇ ಬದಲಾಗಿದೆ ಇಂತ ಹೊತ್ತಿನಲ್ಲಿ ಒಂದು ಪತ್ರಿಕೆ ಹೇಗಿರಬೇಕು ಎನ್ನುವುದಕ್ಕೆ ನಿಮ್ಮ ಪತ್ರಿಕೆ ಸಾಕ್ಷಿಯಾಗಿದೆ ..ನಿಮ್ಮ ಪತ್ರಿಕೆ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ.

● ಬಸವರಾಜ್ ದಂಡಿನ್ ನಿವೃತ್ತ ಉಪನ್ಯಾಸಕ ಶಿವಮೊಗ್ಗ

### ಓದಿಸುವ ಪತ್ರಿಕೆ

ಹಲವಾರು ಪತ್ರಿಕೆಗಳನ್ನು ನಾನು ನೋಡುತ್ತಿದ್ದೇನೆ ಪತ್ರಿಕೆಗಳು ಎಂದರೆ ಈಗ ಒಂದು ರೀತಿ ಮತ್ತೊಬ್ಬರ ವಿರುದ್ಧ ಬರೆಯುವುದು ಇಲ್ಲವೆಂದರೆ ಒಬ್ಬರ ಪರ ಹೊಗಳಿ ಹೊಗಳಿ ಬರೆಯುವುದು ಆದರೆ ನಿಮ್ಮ ಪತ್ರಿಕೆಯನ್ನು ಗಮನಿಸುತ್ತಿದ್ದೇನೆ ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬರುತ್ತಿದೆ ಎನ್ನುವುದೇ ಖುಷಿ ಆದರೆ. ಪತ್ರಿಕೆಯನ್ನು ಕೊಂಡು ಓದುತ್ತಾರೆಯೇ ಎನ್ನುವ ಒಂದು ಸಣ್ಣ ಅನುಮಾನ. ಓದುವವರ ಸಂಖ್ಯೆಕಡಿಮೆಯಾಗಿದೆ.ಆದರೂ ನಿಮ್ಮ ಪತ್ರಿಕೆ ಓದಿಸುತ್ತದೆ ಹಾಗಾಗಿ ಓದುಗರು ಬಹುಶಃ ಕೊಂಡುಕೊಳ್ಳಬಹುದು ಎನ್ನುವ ನಂಬಿಕೆ ಕೂಡ ನನ್ನದು. ನಿಮ್ಮಲ್ಲಿ ಬರೆಯುವ ಬಹುತೇಕ ಲೇಖಕರು ರಾಜ್ಯ ರಾಷ್ಟ್ರಮಟ್ಟದ ಪತ್ರಕರ್ತರು ಹೀಗಾಗಿ ಗುಣಮಟ್ಟವನ್ನು ಕಾಪಾಡಿಕೊಂಡು ಮುನ್ನಡಿಯುತ್ತಿದ್ದೀರಾ ..ಹೀಗೆಯೇ ಪತ್ರಿಕೆ ಬರಲಿ.

● ಶಿವರುದ್ರಪ್ಪ.ಎಂ.ಎನ್
ಬನಶಂಕರಿ, ಬೆಂಗಳೂರು

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109






# ಬೆಳ್ಳಿತೆರೆ ಮೇಲೆ ಸರೋಜಿನಿ ನಾಯ್ಡು ಜೀವನ ಚರಿತ್ರೆ

ದಕ್ಷಿಣ ಭಾರತದ ಖ್ಯಾತ ನಟಿ ಶಾಂತಿಪ್ರಿಯಾ ಅವರು ಸರೋಜಿನಿ ನಾಯ್ಡು ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ತಮಿಳು ಮತ್ತು ತೆಲುಗು ಚಿತ್ರಗಳಲ್ಲಿ ಒಂದು ಕಾಲದಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದ ನಟ ಈ ಬಯೋಪಿಕ್ ಮೂಲಕ ಪುನರಾಗಮನ ಮಾಡುತ್ತಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಬಯೋಫಿಕ್ ಸಿನಿಮಾಗಳ ಟ್ರೆಂಡ್ ಹೆಚ್ಚಾಗುತ್ತಿದೆ. ಈ ಸಾಲಿಗೆ ಭಾರತದ ಗಾನ ಕೋಗಿಲೆ ಹಾಗು ರಾಜಕಾರಣಿ ಸರೋಜಿನಿ ನಾಯ್ಡು ಅವರ ಜೀವನ ಚರಿತ್ರೆ ಈಗ ಸಿನಿಮಾ ಆಗುತ್ತಿದೆ. ಸ್ಯಾಂಡಲ್ ವುಡ್ ನಲ್ಲಿ, ಗುರು, ಬಾಡಿಗಾರ್ಡ್‌ನಂತಹ ಸಿನಿಮಾಗಳಿಗೆ ಸಂಗೀತ ನಿರ್ದೇಶಕನಾಗಿ ಗುರುತಿಸಿಕೊಂಡಿದ್ದ ವಿನಯ್ ಚಂದ್ರ, ಸರೋಜಿನಿ ನಾಯ್ಡು ಅವರ ಜೀವನಚರಿತ್ರೆ ಆಧಾರಿತ ಚಿತ್ರಕ್ಕೆ ಆಕ್ಷನ್ ಕಟ್ ಹೇಳುವ ಮೂಲಕ ನಿರ್ದೇಶಕರಾಗುತ್ತಿದ್ದಾರೆ. ಸದ್ಯ ಸರೋಜಿನಿ ನಾಯ್ಡು ಚಿತ್ರದ ಫಸ್ಟ್ ಲುಕ್ ಬಿಡುಗಡೆ ಆಗಿದೆ. ಈ ವಿಚಾರವನ್ನ ಹಂಚಿಕೊಳ್ಳಲು ನಿರ್ದೇಶಕ ವಿನಯ್ ಚಂದ್ರ, ಸರೋಜಿನಿ ನಾಯ್ಡು ಪಾತ್ರ ಮಾಡುತ್ತಿರುವ ಸೌತ್ ನ ಖ್ಯಾತಿ ನಟಿ ಶಾಂತಿಪ್ರಿಯಾ, ಸರೋಜಿನಿ ನಾಯ್ಡು ಬಾಲ್ಯದ ಪಾತ್ರ ಮಾಡುತ್ತಿರುವ ಸೋನಾಲ್ ಮಾಂತೆರೋ, ಕಥೆಗಾರ ಧೀರಜ್ ಮಿಶ್ರಾ, ನಿರ್ಮಾಪಕರಾದ ಹನಿ ಚೌಧರಿ ಮತ್ತು ಚರಣ್ ಸುವರ್ಣ, ಹೇಮಂತ್ ಗೌಡ ಈ ವೇಳೆ ಉಪಸ್ಥಿತರಿದ್ದರು. ದಕ್ಷಿಣ ಭಾರತದ ಖ್ಯಾತ ನಟಿ ಶಾಂತಿಪ್ರಿಯಾ ಅವರು ಸರೋಜಿನಿ ನಾಯ್ಡು ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ತಮಿಳು ಮತ್ತು ತೆಲುಗು ಚಿತ್ರಗಳಲ್ಲಿ ಒಂದು ಕಾಲದಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದ ನಟ ಈ ಬಯೋಪಿಕ್ ಮೂಲಕ ಪುನರಾಗಮನ ಮಾಡುತ್ತಿದ್ದಾರೆ. ಇದರ ಜೊತೆಗೆ ಹಿತನ್ ತೇಜವಾಣಿ ಅವರು ಸರೋಜಿನಿ ನಾಯ್ಡು ಅವರ ಪತಿ, ಮುತ್ಯಾಲ ಗೋವಿಂದರಾಜುಲು ನಾಯ್ಡು ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ರಂಗಾಯಣ ರಘು ಹಾಗು ಜರೀನಾ ವಹಾಬ್ ಅವರು ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ.

# ದಾಖಲೆಗಳ ಮುರಿದ ರಾಕಿಯ ಕೆಜಿಎಫ್-2



ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹು ನಿರೀಕ್ಷಿತ ಸಿನಿಮಾ ಕೆಜಿಎಫ್ ಚ್ಯಾಪ್ಟರ್ 2 ಟ್ರೈಲರ್ ಬಿಡುಗಡೆಯಾಗಿದೆ. ಕೇವಲ 24 ಗಂಟೆಗಳಲ್ಲಿ ಟ್ರೈಲರ್ ಬರೋಬ್ಬರಿ 10 ಕೋಟಿಗೂ ಅಧಿಕ ವೀಕ್ಷಣೆ ಪಡೆದಿದ್ದು, ಈ ಹಿಂದೆ ರಾಧೆ ಶ್ಯಾಮ್ ಸಿನಿಮಾದ ಟ್ರೈಲರ್ ಬರೆದಿದ್ದ ದಾಖಲೆಯನ್ನು ಕೆಜಿಎಫ್ ಚ್ಯಾಪ್ಟರ್ 2 ಟ್ರೈಲರ್ ಮುರಿದಿದೆ.

ಈ ಹಿಂದೆ ಪ್ರಭಾಸ್ ಅಭಿನಯದ ತೆಲುಗು ಚಿತ್ರ ರಾಧೆ ಶ್ಯಾಮ್ ಸಿನಿಮಾದ ಟ್ರೈಲರ್ ಕೇವಲ 24 ಗಂಟೆಗಳಲ್ಲಿ 6.4 ಕೋಟಿಗೂ ಅಧಿಕ ವೀಕ್ಷಣೆ ಪಡೆದಿತ್ತು. 2021ರ ಡಿಸೆಂಬರ್ 23ರಂದು ಬಿಡುಗಡೆಯಾಗಿದ್ದ ಸಿನಿಮಾದ ಟ್ರೈಲರ್ ಕೇವಲ 24 ಗಂಟೆಗಳಲ್ಲಿ ಭಾರತದಲ್ಲೇ ಅತೀ ಹೆಚ್ಚು ವೀಕ್ಷಣೆ ಪಡೆದು ಹೆಗ್ಗಳಿಕೆಗೆ ಪಾತ್ರವಾಗಿತ್ತು. ಇದೀಗ ಕೆಜಿಎಫ್ ಚ್ಯಾಪ್ಟರ್ 2 ಟ್ರೈಲರ್ ರಾಧೆ ಶ್ಯಾಮ್ ದಾಖಲೆ ಮುರಿದಿದೆ.

ಪ್ಯಾನ್ ಇಂಡಿಯಾ ಸಿನಿಮಾ ಕೆಜಿಎಫ್ ಚ್ಯಾಪ್ಟರ್ 2 ಟ್ರೈಲರ್ ಕನ್ನಡದಲ್ಲಿ 1.8 ಕೋಟಿ, ತೆಲುಗಿನಲ್ಲಿ 2 ಕೋಟಿ, ತಮಿಳಿನಲ್ಲಿ 1.2 ಕೋಟಿ, ಮಲೆಯಾಳಂನಲ್ಲಿ 80 ಲಕ್ಷ ಹಾಗೂ ಹಿಂದಿ ಭಾಷೆಯಲ್ಲಿ 5.1 ಕೋಟಿ ವೀಕ್ಷಣೆಗಳನ್ನು ಪಡೆದಿದೆಕೆಜಿಎಫ್ ಚ್ಯಾಪ್ಟರ್ 2 ಟೀಸರ್ ಬಿಡುಗಡೆಯಾದಾಗಲೂ ಕೇವಲ 24 ಗಂಟೆಗಳಲ್ಲಿ 7 ಕೋಟಿಗೂ ಅಧಿಕ ವೀಕ್ಷಣೆ ಪಡೆದುಕೊಂಡಿತ್ತು. ಇಲ್ಲಿಯವರೆಗೆ ಇದರ ಟೀಸರ್ 20 ಮಿಲಿಯನ್‌ಗೂ ಅಧಿಕ ವೀಕ್ಷಣೆ ಪಡೆದುಕೊಂಡಿದೆ.

ಈ ಹಿಂದೆ ಕೆಜಿಎಫ್‌ನ ಮೊದಲ ಆವೃತ್ತಿ ಬಿಡುಗಡೆಯಾದಾಗ ಭಾರತ ಮಾತ್ರವಲ್ಲದೇ ವಿದೇಶದಲ್ಲೂ ಈ ಸಿನಿಮಾ ಬಗ್ಗೆ ಭಾರೀ ಮೆಚ್ಚುಗೆ ವ್ಯಕ್ತವಾಗಿತ್ತು. ಕೆಜಿಎಫ್ ಚ್ಯಾಪ್ಟರ್ 2 ಸಿನಿಮಾ ದೇಶಾದ್ಯಂತ ಏಪ್ರಿಲ್ 14ರಂದು ಬಿಡುಗಡೆಯಾಗಲಿದ್ದು, ಇದಕ್ಕಾಗಿ ಯಶ್ ಅಭಿಮಾನಿಗಳು ಭಾರೀ ಕಾತುರರಾಗಿ ಕಾಯುತ್ತಿದ್ದಾರೆ.



# ಉ.ಕನ್ನಡದ ಸ್ವಾತಂತ್ರ್ಯ ಸಂಗ್ರಾಮ "ದಂಡಿ" ಬೆಳ್ಳಿತೆರೆಗೆ

ಉತ್ತರಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆಯ ಸ್ವಾತಂತ್ರ್ಯದ ಹೋರಾಟದ ದಿನಗಳನ್ನು ಬೆಳ್ಳಿ ತೆರೆಮೇಲೆ ಕಟ್ಟಿಕೊಟ್ಟಿರುವ 'ದಂಡಿ' ಚಿತ್ರ ಏಪ್ರಿಲ್ 8ರಂದು ರಾಜ್ಯಾದ್ಯಂತ 40ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದು ನಿರ್ದೇಶಕ ವಿಶಾಲ್ ರಾಜ್ ಹೇಳಿದರು.

ಕಾರವಾರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ದಂಡಿ ಈಗಾಗಲೇ ಅಂತರರಾಷ್ಟ್ರೀಯ ಫಿಲ್ಮ್ ಫೇರ್‌ನಲ್ಲಿ 2ನೇ ಬಹುಮಾನ ಪಡೆದುಕೊಂಡಿದೆ. ಕಾದಂಬರಿ ಆಧಾರಿತ ಸಿನಿಮಾ ಮೂಲಕ ಭಾರತದ ಸ್ವಾತಂತ್ರ್ಯ ಸಂಗ್ರಾಮದ ವೇಳೆ ನಡೆದ ದಂಡಿ ಉಪ್ಪಿನ ಸತ್ಯಾಗ್ರಹದ ಮಜಲುಗಳನ್ನು ಬೆಳ್ಳಿತೆರೆ ಮೇಲೆ ತರಲಾಗುವುದು ಎಂದು ಅವರು ಹೇಳಿದರು. ಕಲ್ಯಾಣಿ ಪ್ರೊಡಕ್ಷನ್??ನ ಮೂಲಕ ಮೂಡಿಬಂದಿರುವ ಚಿತ್ರವನ್ನು ಉಷಾರಾಣಿ ಎಸ್.ಸಿ ನಿರ್ಮಿಸಿದ್ದಾರೆ. ಯುವಾನ್ ದೇವ್, ಶಾಲಿನಿ ಭಟ್ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ.

# ಪ್ರಥಮ್‌ನ 'ನಟ ಭಯಂಕರ'

ಪ್ರಥಮ್ ಪ್ರಥಮ ಬಾರಿಗೆ ನಿರ್ದೇಶಿಸಿರುವ ನಟ ಭಯಂಕರ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ಚಿತ್ರದ ನಾಯಕನಾಗಿ ಪ್ರಥಮ್ ನಟಿಸಿ ದ್ದಾರೆ. ಈ ಚಿತ್ರದ ಹಾಡುಗಳ ಬಿಡುಗಡೆಯಾಗಿವೆ.




ಪ್ರದ್ಯೋತನ್ ಸಂಗೀತದಲ್ಲಿ ಮೂಡಿಬಂದಿರುವ ಹಾಡುಗಳನ್ನು ನಟ ಶ್ರೀಮುರಳಿ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಪ್ರಥಮ್ ಕಾನಿಡೆನ್ಸ್ ಇರುವಾತ, ಬಿಗ್‌ಬಾಸ್‌ನ ಆರಂಭದಲ್ಲಿಯೇ ಗಮನ ಸೆಳೆದರು. ಆತನ ವಾಕ್ಚಾತುರ್ಯ ನನಗೂ ಇಷ್ಟವಾಯಿತು. ಈಗ ನಟನೆಯ ಜತೆಗೆ ನಿರ್ದೇಶನ ಕೂಡ ಮಾಡಿದ್ದಾರೆ. ರಘು ದೀಕ್ಷಿತ್ ಹಾಗೂ ನಾನು ಇಷ್ಟಪಡುವ ಉಪೇಂದ್ರ ಅವರು ಹಾಡಿರುವ ಹಾಡು ನನಗೆ ಇಷ್ಟವಾಯಿತು.

ಸಿನಿಮಾ ಕೂಡ ಉತ್ತಮವಾಗಿ ಮೂಡಿಬಂದಿರುತ್ತದೆ ಎಂಬ ನಂಬಿಕೆಯಿದೆ ಎಂದರು ಶ್ರೀಮುರಳಿ. ಬಾರಿ ಅಹಂಕಾರದಲ್ಲಿ ಮೆರೆಯುವ ವ್ಯಕ್ತಿಯೊಬ್ಬ ಕಾರ್ಯನಿಮಿತ್ತ ಆತ್ಮೀಯರಿಗೆ ಮಾತು ಕೊಟ್ಟಾಗ ಅದನ್ನು ಈಡೇರಿಸದಾಗದಿದ್ದಾಗ ಹೇಗೆ ಬದಲಾಗು ತ್ತಾನೆ ಎಂಬುದೇ ಚಿತ್ರದ ಕಥಾವಸ್ತು. ಅದರ ಜತೆಗೆ ಸ್ಟುಪಿಡ್ ಸೂಪರ್ ಸ್ಟಾರ್ ಹಾಗೂ ಕುರುಡಿ ದೆವ್ವದ ನಡುವೆ ನಡೆಯುವ ಕಥೆ ಕೂಡ ಚಿತ್ರದಲ್ಲಿದೆ, ಮೇ ಹದಿಮೂರ ರಂದು ಚಿತ್ರವನ್ನು ತೆರೆಗೆ ತರುತ್ತೇವೆ ಎಂದು ಪ್ರಥಮ್ ತಿಳಿಸಿದರು. ನಾಯಕಿಯಾಗಿ ಫ್ರಾನ್ಸ್ ಮೂಲದ ನಿಹಾರಿಕಾ ನಟಿಸಿದ್ದಾರೆ. ಉಳಿದಂತೆ ಚಂದನಾ ಕೂಡ ಪ್ರಮುಖ ಪಾತ್ರದಲ್ಲಿ ಬಣ್ಣ ಹಚ್ಚಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act